ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ




ಬಿಜೆಪಿ 'OROP'ಗೆ ಬಲಿ : ಸುಬೇದಾರ್ ರಾಮಕೃಷ್ಣ ಗ್ರೆವಾಲ್

ಸಂಪುಟ 10 ಸಂಚಿಕೆ 46 ನವೆಂಬರ್ 13, 2016 ಪುಟ 16 Web : www.janashakthi.co.in e-mail : js_weekly@yahoo.com ರೂ.10/-



ಸಮಾಜವಾದಿ ಕ್ರಾಂತಿ 100 ಶತಮಾನೋತ್ಸವ



ಅಕ್ಟೋಬರ್ ಕ್ರಾಂತಿ ಮನುಕುಲಕ್ಕೆ ಹೊಸ ಹಾದಿ

- ಟಿಪ್ಪು ಜಯಂತಿಗೆ ವಿರೋಧ ಅರ್ಥಹೀನ
- ಭೋಪಾಲಿನಲ್ಲಿ ನಕಲಿ ಎನ್ ಕೌಂಟರ್?



ಕಿಸಾನ್ ಸಂಘರ್ಷ ಜಾಥಾ ಶುರು

ಆದಿವಾಸಿಗಳ ಭೂಮಿ ಹಕ್ಕಿಗಾಗಿ



ಭೋಪಾಲ್ ಎನ್‌ಕೌಂಟರ್:ಸಂದೆಹಗಳನ್ನು ನಿವಾರಿಸಲು ನ್ಯಾಯಾಂಗ ತನಿಖೆ ಅಗತ್ಯ-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಕ್ಟೋಬರ್ 31 ರಂದು ಮಧ್ಯಪ್ರದೇಶದ ರಾಜಧಾನಿ ಭೋಪಾಲದ ಅತಿ ಭದ್ರತೆಯ ಸೆಂಟ್ರಲ್ ಜೈಲಿನಿಂದ ಪರಾರಿಯಾದ ಎಂಟು ಮಂದಿ ವಿಚಾರಣಾಧೀನ ಕೈದಿಗಳು ಆ ಮೇಲೆ ಭಯೋತ್ಪಾದಕ ನಿಗ್ರಹ ದಳ(ಎಟಿಸಿ)ದ ತಂಡದೊಂದಿಗೆ 'ಎನ್‌ಕೌಂಟರ್'ನಲ್ಲಿ ಸತ್ತಿದ್ದಾರೆ ಎಂಬ ಸುದ್ದಿ ಈಗ ಬಹಳಷ್ಟು ಸಂದೇಹಗಳನ್ನು ಎಬ್ಬಿಸಿದೆ.

ಈ ಎಂಟು ಮಂದಿ ನಿಷೇಧಿತ ಸಿಮಿ ಸಂಘಟನೆಯೊಂದಿಗೆ ಸಂಪರ್ಕ ಇದ್ದವರು ಎಂಬ ಸಂದೇಹವಿತ್ತು. ಅವರು ವಿವಿಧ ಕೇಸುಗಳಲ್ಲಿ ವಿಚಾರಣೆಗಳನ್ನು ಎದುರಿಸುತ್ತಿದ್ದರು.

ಈ ಘಟನೆಯ ಬಗ್ಗೆ ಮುಂದಿಡಲಾಗುತ್ತಿರುವ ದಾವೆಗಳು ಗಂಭೀರ ಸಂದೇಹಗಳನ್ನು ಎಬ್ಬಿಸಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಈ ಬಗ್ಗೆ ಹಾಲಿ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖ ನಡೆಸಬೇಕು ಎಂದು ಆಗ್ರಹಿಸಿದೆ.

ಈ ಆಪಾದಿತರು ಅತ್ಯಂತ ಭದ್ರತೆಯ ಈ ಜೈಲಿನಿಂದ ತಪಿಸಿಕೊಳ್ಳು ವುದು ಸಾಧ್ಯವಾಯಿತಾದರೂ ಹೇಗೆ ಎಂಬುದೂ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ಮಧ್ಯಪ್ರದೇಶ ಸರಕಾರ ಈ ಬಗ್ಗೆ ವಿವರಣೆ ನೀಡಬೇಕಾಗುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಪರಾರಿಯಾದ ಈ ಕೈದಿಗಳು ಎಟಿಎಸ್ ತಂಡದ ಮೇಲೆ ದಾಳಿ ಮಾಡಿದರು ಎಂದು ಮಧ್ಯಪ್ರದೇಶ ಪೋಲೀಸರು ಹೇಳಿದರೆ, ಅಲ್ಲಿನ ಗೃಹ ಮಂತ್ರಿ ಭುಪೇಂದ್ರ ಸಿಂಗ್ ಬೇರೆಯೇ ಹೇಳಿದ್ದಾರೆ. ಈ ಮಂದಿಗೆ ಶಸ್ತ್ರಾಸ್ತ್ರಗಳನ್ನು ಪಡೆಯಲು ಸಾಧ್ಯವಾಯಿತು, ಆದರೆ ಜೈಲಿನಿಂದ ಹೊರಗೆ ಬಂದಾಗ ಪರಾರಿಯಾಗಲು ಎಸ್‌ಯುವಿ ವಾಹನ ಪಡೆಯಲಾಗಲಿಲ್ಲ ಎಂಬದು ನಂಬಬಹುದಾದ ಮಾತು ಎಂದನಿಸುವುದಿಲ್ಲ.

ಈ ಘಟನೆಯ ವಿಡಿಯೋಗಳು ಪ್ರಸಾರದಲ್ಲಿದ್ದು ಪೋಲೀಸನೊಬ್ಬ ನೆಲದಲ್ಲಿ ಬಿದ್ದಿದ್ದ 'ಪರಾರಿ' ವ್ಯಕ್ತಿಗೆ ಗುಂಡೇಟು ಹೊಡೆಯುವುದನ್ನು ಒಂದು ವಿಡಿಯೋ ತೋರಿಸುತ್ತದೆ. ಇನ್ನೊಂದು ಅವರೆಲ್ಲ ಪೋಲೀಸರಿಗೆ ಕೈಬೀಸುತ್ತಿರುವುದನ್ನು, ಬಹುಶಃ ಶರಣಾಗತರಾಗುವ ಸಂದೇಶವನ್ನು ಕೊಡುತ್ತಿರುವುದನ್ನು ತೋರಿಸುತ್ತದೆ. ಇವೆಲ್ಲ ಪೋಲೀಸರ ದಾವೆಗಳ ಬಗ್ಗೆ ಗಂಭೀರ ಸಂದೆಹಗಳನ್ನು ಎತ್ತುವುದರಿಂದ ಈ ಇಡೀ ಘಟನೆಯ ಒಂದು ಆಮೂಲಾಗ್ರ ತನಿಖೆ ನಡೆಯಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಮುಖ್ಯಮಂತ್ರಿಗಳು ಎನ್‌ಐಎ ಯಿಂದ ತನಿಖೆ ನಡೆಸುವುದಾಗಿ ಪ್ರಕಟಿಸಿದ್ದಾರೆ, ಆದರೆ ಇಂತಹ ತನಿಖೆ ವಿಶ್ವಾಸಾರ್ಹವೂ ಆಗುವುದಿಲ್ಲ, ಸ್ವೀಕಾರಾರ್ಹವೂ ಆಗುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ■

ಕಾಶ್ಮೀರ: ಜನಸಾಮಾನ್ಯರ ಬಲಿ ಕೊಡುವ ಯುದ್ಧೋನ್ಮಾದ ಬೇಡ-ತರಿಗಾಮಿ

ಭಾರತ ಪಾಕ್ ನಡುವಣ ಗಡಿ ನಿಯಂತ್ರಣ ರೇಖೆಯ ಬಳಿ ವಾಸಿಸುತ್ತಿರುವ ಜನರ ಜೀವನ ದುಸ್ತರವಾಗಿದೆ, ಸಾವುಗಳು, ಮನೆಗಳ ನಾಶ, ದೊಡ್ಡ ಪ್ರಮಾಣದಲ್ಲಿ ಜನರು ಮನೆಮಾರು ಬಿಟ್ಟು ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ. ಭಾರತ ಮತ್ತು ಪಾಕಿಸ್ತಾನ ಎರಡೂ 2003 ರ ಒಪ್ಪಂದವನ್ನು ಗೌರವಿಸಿ ಎರಡೂಕಡೆ ಗಡಿಯಲ್ಲಿ ವಾಸಿಸುತ್ತಿರುವ ಮುಗ್ಧ ಜನರನ್ನು ತಮ್ಮ ರಾಜಕೀಯ ಸಣ್ಣತನದ ಪರಿಗಣನೆಗಾಗಿ ಬಲಿಕೊಡುವದನ್ನು ನಿಲ್ಲಿಸಬೇಕು. ಯುದ್ಧೋನ್ಮಾದ ಮತ್ತು ಅತಿರೇಕದ ದೇಶಭಕ್ತಿಯಿಂದ ಯಾವ ಸಮಸ್ಯೆ ಕೂಡ ಬಗೆಹರಿಯದು ಎಂದು ಜಮ್ಮು-ಕಾಶ್ಮೀರದ ಹಿರಿಯ ಕಮ್ಯುನಿಸ್ಟ್ ಮುಖಂಡ ಮತ್ತು ಕೇಂದ್ರ ಸಮಿತಿಯ ಸದಸ್ಯರಾದ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

ಯಾವುದೇ ಸರಕಾರ ಬಿಕ್ಕಟ್ಟನ್ನು ಪರಿಹರಿಸುವದು ಬಿಟ್ಟು ಕೇವಲ ಪೋಲೀಸ್ ಮತ್ತು ಸೈನ್ಯದ ಮೇಲೆ ಜವಾಬ್ದಾರಿಯನ್ನು ವರ್ಗಾಯಿಸುವದು ಸರಿಯಲ್ಲ. ಮೊಟ್ಟ ಮೊದಲಿಗೆ ಸರಕಾರಗಳು ಯಾವುದೇ ತಡ ಇಲ್ಲದೇ, ಈಗ ರಾಜ್ಯದಲ್ಲಿರುವ ಪ್ರಕ್ಷುಬ್ಧ ಪರಿಸ್ಥಿತಿಯ ರಾಜಕೀಯ ಸಾರವನ್ನು ಗುರುತಿಸಿ ಅದನ್ನು ಪರಿಹರಿಸಲು ಸಾಧ್ಯವಿದ್ದ ಎಲ್ಲ ಮಾರ್ಗೋಪಾಯಗಳನ್ನು ಶೋಧಿಸಬೇಕು.

ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ರಚನಾತ್ಮಕ ಮತ್ತು ಸುಸ್ಥಿರ ಮಾತುಕತೆ ಎರಡೂ ಕಡೆ-ಯ ಮುಖಂಡರಿಂದ ನಡೆಯಬೇಕು. ಸದ್ಯದ ಮಟ್ಟಿಗೆ ಶಾಶ್ವತ ಪರಿಹಾರ ಕಾಣದಿದ್ದರೂ ಪರಸ್ಪರ ಶಾಂತಿಯುತ ಒಪ್ಪಂದವಾಗುವಂತಹದ್ದೊಂದು ಪ್ರಕ್ರಿಯೆಗೆ ದಾರಿಮಾಡಿಕೊಡುವ ಪ್ರಯತ್ನ ನಡೆಯಬೇಕು ಎಂದು ಅವರು ಕಳಕಲಿಯಿಂದ ವಿನಂತಿಸಿಕೊಂಡಿದ್ದಾರೆ.

ಕಾಶ್ಮೀರದಲ್ಲಿ ಶಾಲೆಗಳನ್ನು ಇನ್ನೂ ತೆರೆಯಲಾಗಿಲ್ಲ, ಮೂಲಭೂತ ಸೌಕರ್ಯಗಳ ನಾಶಗಳಂತಹ ಕೆಲಸದಿಂದ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾತ್ರ ಒಳಿತಾಗುವದಲ್ಲದೇ ಸಾಮಾನ್ಯ ಜನರಿಗಲ್ಲ ಎಂದ ತರಿಗಾಮಿ ಪ್ರತಿಯೊಂದು ರೀತಿಯ ದಮನವನ್ನು ವಿರೋಧಿಸುತ್ತಲೇ, ಮುಖ್ಯಧಾರೆಯ ರಾಜಕೀಯ ಶಕ್ತಿಗಳೂ ಮತ್ತು ಪ್ರತ್ಯೇಕತಾವಾದಿ ರಾಜಕೀಯದ ಮಂದಿ ಕೂಡ ಅಸಹಾಯಕ ಜನಸಮೂಹಗಳ ಸಂಕಟಗಳನ್ನು ತಗ್ಗಿಸಲಾದರೂ ಮುಂದೆ ಬಂದು ಒಂದು ರಚನಾತ್ಮಕ ಪಾತ್ರ ವಹಿಸಬೇಕು ಎಂದು ಕರೆ ನೀಡಿದರು.

ಶಾಲೆಗಳಿಗೆ ಬೆಂಕಿ ಹಚ್ಚುವುದರಿಂದ, ನಮ್ಮ ಮಕ್ಕಳಿಗೆ ಶಿಕ್ಷಣವನನು ವಂಚಿಸುವುದರಿಂದ ಕಾಶ್ಮೀರದ ಜನತೆಯ ಹಿತಗಳಿಗೆ ಯಾವುದೇ ರೀತಿಯ ನೆರವು ಸಿಗುತ್ತದೆಯೇ, ನಾವು ಪರಸ್ಪರ ದೂಷಣೆಯಲ್ಲಿ ತೊಡಗದೆ ವಿನಾಶದ ಅಂಚಿನಲ್ಲಿರುವ ನಮ್ಮ ಯುವ ಪೀಳಿಗೆಯ ಭವಿಷ್ಯವನ್ನು ರಕ್ಷಿಸಲು ಏನಾದರೂ ಮಾಡಬಾರದೇಕೆ ಎಂದು ಅವರು ಕಳಕಳಿಯಿಂದ ಪ್ರಶ್ನಿಸಿದರು.

ಸರಕಾರ ನ್ಯಾಯ ಸಮ್ಮತವಲ್ಲದ ಬಂಧನ, ದಮನಕಾರಿ ಕ್ರಮಗಳನ್ನು ಕೈಬಿಟ್ಟು ರಾಜ್ಯದಲ್ಲಿ ಸಂತ್ರಸ್ಥರಿಗೆ ಪರಿಹಾರವನ್ನು ಒದಗಿಸಬೇಕು., ಸಾರ್ವಜನಿಕ ಸುರಕ್ಷಾ ಮಸೂಧೆಯನ್ನು ಪುನರ್‌ಪರಿಶೀಲಿಸಿ ಅದರಡಿಯಲ್ಲಿ ಬಂಧಿತರಾದವರನ್ನು ತಕ್ಷಣ ಬಿಡುಗಡೆ ಮಾಡಬೇಕು. ಅನಗತ್ಯವಾಗಿ ಸೈನ್ಯವನ್ನು ಬಳಸಿಕೊಂಡು ಆಸ್ತಿಹಾನಿಗೆ ಕಾರಣವಾದವರ ಮೇಲೆ ನಿರ್ದಿಷ್ಟ ಅವಧಿಯೊಳಗೆ ಕಾನೂನು ತನಿಖೆ ನಡೆಸಬೇಕು, ಪೆಲೆಟ್ ಗುಂಡಿನ ಬಳಕೆ, ಸಂವಹನ ಸಾಧನಗಳಾದ ಮೊಬೈಲ್ ಇಂಟರ್‌ನೆಟ್ ಮಂತಾದವುಗಳ ಬಳಕೆ ನಿರ್ಭಂದನೆಗಳನ್ನು ಕೂಡಲೇ ಹಿಂಪಡೆಯಬೇಕು. ಎಂದು ತರಿಗಾಮಿ ಸೂಚಿಸಿದರು. ■

ಮಾತೆಂದರೆ ಇದು

"20ನೇ ಶತಮಾನದಲ್ಲಿ ಭಾರತದಲ್ಲಿ ರಾಕೆಟುಗಳ ಯೋಜನೆ 18ನೇ ಶತಮಾನದ ಟಿಪ್ಪು ಸುಲ್ತಾನರ ಯುದ್ಧತಂತ್ರದ ಕನಸಿಗೆ ಪುನರುಜ್ಜೀವನ ಕೊಟ್ಟ ಬೆಳವಣಿಗೆ ಎನ್ನಬಹುದು. ಟಿಪ್ಪು ಸುಲ್ತಾನ್ ಸತ್ತಾಗ ಬ್ರಿಟಿಶರು ತುರುಕನಹಳ್ಳಿಯ 1799ರ ಯುದ್ಧದಲ್ಲಿ 700 ರಾಕೆಟುಗಳು ಮತ್ತು 900 ರಾಕೆಟು ಬಿಡಿಭಾಗಗಳನ್ನು ಬ್ರಿಟನಿಗೆ ಒಯ್ದರು. ಅವನ್ನು ಬಳಸಿ ಈಗ ನಾವು 'ರಿವರ್ಸ್ ಇಂಜಿನೀಯರಿಂಗ್' ಎಂದು ಕರೆಯುವ ಪ್ರಕ್ರಿಯೆಯಿಂದ ಅವರು ರಾಕೆಟ್ ತಂತ್ರಜ್ಞಾನ ಕಲಿತುಕೊಂಡರು. ಆಗ ಗ್ಯಾಟ್, ಪೇಟೆಂಟ್ ಇತ್ಯಾದಿ ಇರಲಿಲ್ಲವಲ್ಲ!..ಟಿಪ್ಪು ಸಾವಿನೊಂದಿಗೆ ಭಾರತೀಯ ರಾಕೆಟ್ ಬೆಳವಣಿಗೆಯೂ ಸತ್ತಿತು..ಕನಿಷ್ಟ 150 ವರ್ಷಗಳ ಕಾಲ"

– ಡಾ. ಅಬ್ದುಲ್ ಕಲಾಮ್ (2002ರಲ್ಲಿ ಭಾಷಣವೊಂದರಲ್ಲಿ)



ಐಕ್ಯಹೋರಾಟಗಳ ಅಲೆ ಎದ್ದು ಬರಲಿ ಎಂಬ ಕರೆಯೊಂದಿಗೆ

ಕಿಸಾನ್ ಸಂಘರ್ಷ ಜಾಥಾ ಆರಂಭ

ನವಂಬರ್ 2ರಂದು ತಮಿಳುನಾಡಿನ ವಿರುಧ್‌ನಗರದಿಂದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಸ್)ದ 'ಕಿಸಾನ್ ಸಂಘರ್ಷ ಜಾಥಾ' ಆರಂಭಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮತ್ತು ನಂತರ ರೈತ ಹೋರಾಟಗಳೂ ಸೇರಿದಂತೆ ಹಲವು ಹೋರಾಟಗಳನ್ನು ವಿರುಧ್‌ವನಗರದ ದೇಶಬಂಧು ಮೈದಾನದಲ್ಲಿ ನರೆದಿದ್ದ ಸಾವಿರಾರು ರೈತರು, ಕೃಷಿ ಕೂಲಿಗಾರರು ಮತ್ತು ಇತರರ ಸಮ್ಮುಖ ಎಐಲೆಎಸ್ ಉಪಾಧ್ಯಕ್ಷ ಕೆ.ವರದರಾಜನ್ ಹೋರಾಟವನ್ನು ಸಂಕೇತಿಸುವ ಜ್ಯೋತಿಯನ್ನು ಜಾಥಾದ ಮುಖಂಡ ಹಾಗೂ ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂಕೃಷ್ಣನ್ ರವರಿಗೆ ನೀಡಿ ಜಾಥಾದ ಉದ್ಘಾಟನೆ ಮಾಡಿದರು. ಈ ಜಾಥಾ ಹೆಚ್ಚುತ್ತಿರುವ ಅಸಮಾನತೆಗಳ ವಿರುದ್ಧ, ರೈತರ ಹೆಚ್ಚುತ್ತಿರುವ ಸಂಕಟಗಳ ವಿರುದ್ಧ ಒಂದು ಐಖ್ಯ ಹೋರಾಟಗಳ ಅಲೆಯನ್ನು ಎಬ್ಬಿಸುತ್ತದೆ ಎಂದು ಆಶಿಸಿದರು.

ಜಾಥಾ ಮುಖಂಡ ವಿಜೂ ಕೃಷ್ಣನ್ ಮಾತಾಡುತ್ತ ಎಐಕೆಎಸ್ 'ಜಲ, ಜಂಗಲ್, ಜಮೀನ್'ನ ಲೂಟಿಯ ವಿರುದ್ಧ ಒಂದು ಐಕ್ಯ ಹೋರಾಟವನ್ನು ಕಟ್ಟುತ್ತದೆ, ಭೂಹೀನರು, ದಲಿತರು ಮತ್ತು ಆದಿವಾಸಿಗಳ ಭೂಮಿ ಹಕ್ಕುಗಳಿಗಾಗಿ ಹೋರಾಡುತ್ತದೆ ಎಂದರು, ಬಿಜೆಪಿ-ಆರೆಸ್ಸೆಸ್‌ನ ವಿಭಜನಕಾರಿ ಕೋಮುವಾದಿ ಮತ್ತು ಜಾತಿವಾದಿ ಅಜೆಂಡಾಕ್ಕೆ ಎದುರಾಗಿ ಬಂಡೆಯಂತಹ ಐಕ್ಯತೆಯನ್ನು ಬೆಸೆಯಬೇಕು ಎಂದು ರೈತರಿಗೆ ಕರೆ ನೀಡಿದರು.

ಇದು ಎಐಕೆಸ್ ಯೋಜಿಸಿರುವ ನಾಲ್ಕು ಜಾತಾಗಳಲ್ಲಿ ಮೊದಲನೆಯದು ಮತ್ತು ಅತಿ ಉದ್ದದ ದಾರಿ ಕ್ರಮಿಸುವಂತದ್ದು. ಮುಂದಿನ 22 ದಿನಗಳಲ್ಲಿ 3500 ಕಿ.ಮೀ. ಕ್ರಮಿಸಿ ನವಂಬರ್ 24ರಂದು ಇದು ದಿಲ್ಲಿ ತಲುಪಲಿದೆ. ದಾರಿಯುದ್ದಕ್ಕೂ ಇದು ರೈತರ ಈಗಿನ ಸಂಕಟಗಳಿಗೆ, ಕೃಷಿ ಬಿಕ್ಕಟ್ಟಿಗೆ ಕಾರಣವಾದ ನವ-ಉದಾರವಾದಿ ಧೋರಣೆಗಳ ವಿರುದ್ಧ, ಇದನ್ನು ಮತ್ತಷ್ಟು ಉಲ್ಬಣಗೊಳಿಸಿರುವ ಮೋದಿ ಸರಕಾರದ ರೈತ-ವಿರೋಧಿ ಧೋರಣೆಗಳ ವಿರುದ್ಧ ರೈತಾಪಿ ಜನಗಳನ್ನು ಅಣಿನೆರೆಸುತ್ತದೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ತಿರುನಾವುಕ್ಕರಸು, ತಮಿಳುನಾಡು ವಿವಸಾಯಿಗಳ್ ಸಂಘಂ(ರೈತ ಸಂಘ) ಕಾರ್ಯದರ್ಶಿ ಪಿ.ಷಣ್ಮುಗಂ, ತಮಿಳುನಾಡು ಕೃಷಿ ಕಾರ್ಮಿಕರ ಸಂಘದ ಅಧ್ಯಕ್ಷ ಲಝುರ್, ಡೇರಿ ರೈತರ ಸಂಘದ ಮುಖಂಡ ಮುಹಮ್ಮದ್ ಅಲಿ ಮತ್ತಿತರರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಸಾವಿರಾರು ಮಂದಿ ಈ ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿದರು. ■



ನಿವೃತ್ತ ಸೈನಿಕರ ಆತ್ಮಹತ್ಯೆ ವಿಶ್ವಾಸಘಾತದ ಪ್ರತಿಫಲನ-ಸೀತಾರಾಮ್ ಯೆಚೂರಿ

ನವಂಬರ್ 2ರಂದು ನವದೆಹಲಿಯ ಕೇಂದ್ರ ಪ್ರದೇಶ ಜನಪಥ್‌ನಲ್ಲಿ ಸರಕಾರೀ ಕಚೇರಿಯೊಂದರ ಹುಲ್ಲು ಹಾಸಿನಲ್ಲಿ 69 ವರ್ಷದ ನಿವೃತ್ತ ಸೇನಾ ಸುಬೇದಾರ್ ರಾಮ್‌ಕಿಶನ್ ಗ್ರೆವಾಲ್ 'ಒಂದು ರ್‍ಯಾಂಕ್ ಒಂದು ಪೆನ್ಶನ್' ಪ್ರಶ್ನೆಯ ಮೇಲೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬು ಸುದ್ದಿ ದಿಲ್ಲಿಯನ್ನು ತಲ್ಲಣಗೊಳಿಸಿತು. ರಕ್ಷಣಾ ಮಂತ್ರಿಗಳನ್ನು ಈ ಕುರಿತು ಭೇಟಿ ಮಾಡಲು ಅವರಿಗೆ ಅವಕಾಶ ನಿರಾಕರಿಸಲಾಯಿತು ಎನ್ನಲಾಗಿದೆ.

ಇದು ಬಿಜೆಪಿ ಪ್ರಧಾನ ಮಂತ್ರಿಗಳು 2014 ರ ಚುನಾವಣೆಗಳಲ್ಲಿ ನೀಡಿದ್ದ ಭರವಸೆಗಳ ವಿಷಯದಲ್ಲಿ ವಿಶ್ವಾಸಘಾತದ ಪ್ರತಿಫಲನ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಹೇಳಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡ ನಿವೃತ್ತ ಸೈನಿಕನ ಕುಟುಂಬದವರನ್ನು ಭೇಟಿಯಾಗಲು ಹೋದ ದಿಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಉಪಾಧ್ಯಕ್ಷರನ್ನು ಪೋಲೀಸರು ತಡೆದು ಬಂಧಿಸಿರುವುದು ಒಂದು ಅಭೂತಪೂರ್ವ ಕ್ರಮ ಎಂದು ಯೆಚೂರಿ ಪ್ರತಿಕ್ರಿಯಿಸಿದ್ದಾರೆ,

"ಈ ಕೇಂದ್ರ ಸರಕಾರಕ್ಕೆ ಏನಾಗಿದೆ ನನಗೆ ತಿಳಿಯುತ್ತಿಲ್ಲ. ಯಾಕೆ ಅವರು ಇಂತಹ ತಂತ್ರಗಳ ಮೊರೆ ಹೋಗುತ್ತಿದ್ದಾರೆ? ಹೀಗೆ ಹಿಂದೆಂದೂ ಆಗಿರಲಿಲ್ಲ, ಒಂದು ಪ್ರಜಾಪ್ರಭುತ್ವದಲ್ಲಿ ಇಂತಹವುಗಳು ನಡೆಯಬಾರದು" ಎಂದು ಅವರು ಹೇಳಿದರು. ■

ಟಿಪ್ಪು ಸುಲ್ತಾನ್ ಜಯಂತಿಗೆ ಅರ್ಥಹೀನ ವಿರೋಧ

ಸಂಪಾದಕೀಯ

ನವೆಂಬರ್ 10 ರಂದು ಆಚರಿಸಲಾಗುತ್ತಿರುವ ಟಿಪ್ಪು ಸುಲ್ತಾನ್ ಜಯಂತಿಗೆ ಸಂಘ–ಗ್ಯಾಂಗಿನಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಅದು ಕಳೆದ ವರ್ಷದ ವಿರೋಧಕ್ಕಿಂತಲೂ ತೀವ್ರವಾಗಿದೆ–ಗುಣಾತ್ಮಕವಾಗಿಯೂ ಪ್ರಮಾಣಾತ್ಮಕವಾಗಿಯೂ. 'ರಾಜ್ಯ ಸರ್ಕಾರ ಹಠಕ್ಕೆ ಬಿದ್ದು ಈ ವರ್ಷವೂ ಟಿಪ್ಪು ಜಯಂತಿ ಆಚರಣೆಗೆ ಮುಂದಾದರೆ ಇಡೀ ಕರ್ನಾಟಕ ಹೊತ್ತಿ ಉರಿಯಲಿದೆ' ಎಂದು ವಿಶ್ವ ಹಿಂದೂ ಪರಿಷತ್ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಗೋಪಾಲ್ ಎಚ್ಚರಿಕೆ ನೀಡಿದರು. ಕಳೆದ ವರ್ಷ ಒಬ್ಬ ಕುಟ್ಟಪ್ಪನ ನೆತ್ತರು ಹರಿದು ಕೊಡಗು ಜಿಲ್ಲೆ ಹೊತ್ತಿ ಉರಿದಿತ್ತು. ಈ ವರ್ಷ ಟಿಪ್ಪು ಜಯಂತಿ ವಿರೋಧಿಸಲು ಗ್ರಾಮ ಗ್ರಾಮಗಳಲ್ಲಿ ಬಜರಂಗದಳದ ಪಡೆ ಸಿದ್ಧವಾಗಿದೆ. ಸರ್ಕಾರ ಕಾರ್ಯಕ್ರಮ ಕೈಬಿಡದಿದ್ದರೆ ಕರ್ನಾಟಕ ಹೊತ್ತಿ ಉರಿಯುವುದು ನಿಶ್ಚಿತ' ಎಂದರು ಗೋಪಾಲ್. ಈ ಎಚ್ಚರಿಕೆ ಬಂದಿದ್ದು ಅಕ್ಟೋಬರ್ 24 ರಂದು ಮಂಗಳೂರಿನಲ್ಲಿ ನಡೆದ ಭಜರಂಗದಳದ ದಕ್ಷಿಣ ಪ್ರಾಂತ ಅಧಿವೇಶನದ ಸಮಾರೋಪದಲ್ಲಿ. ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಎ.ಜೆ.ಶೆಟ್ಟಿ ದಂತವೈದ್ಯ ಕಾಲೇಜಿನ ಡೀನ್ ಡಾ.ಶ್ರೀಧರ ಶೆಟ್ಟಿ, 'ಟಿಪ್ಪು ಏನು ಎಂಬುದು ಇತಿಹಾಸ ಓದಿದರೆ ಗೊತ್ತಾಗುತ್ತದೆ. ರಾಜ್ಯದ ಜನರು ಸಂಭ್ರಮಿಸಬೇಕಿರುವುದು ಟಿಪ್ಪುವಿನ ಜನ್ಮದಿನವನ್ನಲ್ಲ, ಆತನ ಸಾವನ್ನು ಸಂಭ್ರಮಿಸಬೇಕು' ಎಂದರಂತೆ.

ಇದೇ ಮುಂದಿನ ದಿನಗಳಲ್ಲಿ ಬೇರೆ ಬೇರೆ ಶಬ್ದಗಳಲ್ಲಿ ಬೇರೆ ಬೇರೆ ವ್ಯಕ್ತಿಗಳಿಂದ ಮಾರ್ದನಿಗೊಳ್ಳುತ್ತಾ ಹೋಯಿತು. 'ಟಿಪ್ಪು ಒಬ್ಬ ಮೂಲಭೂತವಾದಿ. ಸಾವಿರಾರು ಜನರ ಕಗ್ಗೊಲೆಗೆ ಆತ ಕಾರಣವಾಗಿದ್ದಾನೆ. ಇಂತಹ ವಿವಾದಿತ ವ್ಯಕ್ತಿಯ ಜಯಂತಿಯನ್ನು ಸರ್ಕಾರದಿಂದ ಆಚರಿಸುವುದು ಬೇಡ' ಎಂದು ಅಪ್ಪಣೆ ಕೊಡಿಸಿದರು ಮಾಜಿ ಇನ್ಫೊಸಿಸ್ ಹಾಗೂ ಮಣಿಪಾಲ ಶಿಕ್ಷಣ ಸಾಮ್ರಾಜ್ಯದ ದೊರೆ ಹಾಗೂ 'ಸರ್ವಜ್ಞ ಟಿವಿ ಎಕ್ಸ್ ಪರ್ಟ್' ಮೋಹನದಾಸ ಪೈ. 'ಆತನೇನೂ ಸ್ವಾತಂತ್ರ್ಯ ಹೋರಾಟಗಾರ ಆಗಿರಲಿಲ್ಲ. ತನ್ನ ಸಾಮ್ರಾಜ್ಯ ವಿಸ್ತರಿಸಿಕೊಳ್ಳಲಷ್ಟೇ ಆತನ ಹೋರಾಟ ಸೀಮಿತವಾಗಿತ್ತು' ಎಂದೂ ಎಕ್ಸ್ ಪರ್ಟ್ ಕಾಮೆಂಟು ಹೊಡೆದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಟಿಪ್ಪು ಜಯಂತಿ ಆಚರಣೆಗೆ ಮುಂದಾಗಿರುವುದನ್ನು ನೋಡಿದರೆ, ಅರಣ್ಯ ಇಲಾಖೆ ವೀರಪ್ಪನ್ ಜಯಂತಿ ಆಚರಿಸಿದರೂ ಆಶ್ಚರ್ಯವಿಲ್ಲ ಎಂದು ಸಂಸದ ಕಮ್ ಪತ್ರಕರ್ತ ಪ್ರತಾಪ್ ಸಿಂಹ ಕೆಟ್ಟ ಜೋಕು ಮಾಡಿದರು. "ಟಿಪ್ಪುವನ್ನು ಬ್ರಿಟಿಶರು ಕೊಲ್ಲದಿದ್ದರೆ, ದಕ್ಷಿಣ ಭಾರತ ಇಸ್ಲಾಮೀಕರಣವಾಗುತ್ತಿತ್ತು. ಟಿಪ್ಪು ಸಾವಿನಿಂದ ಆತನ ಸಂತತಿ ನಿಂತಿತು" ಎಂದು ಡಾ. ಚಿದಾನಂದಮೂರ್ತಿ ಬ್ರಿಟಿಶರಿಗೆ ತಮ್ಮ ಅನಂತ ಕೃತಜ್ಞತೆ ಅರ್ಪಿಸಿದರು. ಟಿವಿ ಚರ್ಚೆಯೊಂದರಲ್ಲಿ ಡಾ. ವಾಮನಾಚರ್ಯರು "ಬ್ರಿಟಿಶರು ಟಿಪ್ಪುವನ್ನು ಕೊಂದಿದ್ದು ಮಾತ್ರವಲ್ಲದೆ ಅವನ ಮಕ್ಕಳನ್ನು ಕುಟುಂಬದವರನ್ನು ದೂರದ ಕಲ್ಲತ್ತಾದಲ್ಲಿ ಬಿಟ್ಟು ಬಂದು ಒಳ್ಳೆಯ ಕೆಲಸ ಮಾಡಿದರು" ಎಂದು ಬ್ರಿಟಿಶರ ಕ್ರೌರ್ಯವನ್ನು ಬಹುವಾಗಿ ಮೆಚ್ಚಿಕೊಂಡರು. "ಟಿಪ್ಪು ಸ್ವಾತಂತ್ರ್ಯ ಹೋರಾಟಗಾರನಲ್ಲ. ಆದರೂ ಏಕೆ ಜಯಂತಿ ಆಚರಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವಾಧಿಕಾರಿಯಾಗಿದ್ದವನ ಜಯಂತಿ ಆಚರಣೆ ಏಕೆ" ನನಗೆ ತಿಳಿದಿರುವ ಇತಿಹಾಸದಂತೆ ಟಿಪ್ಪು ಸಣ್ಣ ಸಂಸ್ಥಾನದ ರಾಜ" ಎಂದರು ಕರ್ನಾಟಕದ ಮುಖ್ಯ ನ್ಯಾಯಾಧೀಶರು. ಅವರು ಟಿಪ್ಪು ಜಯಂತಿ ಆಚರಣೆಯನ್ನು ಪ್ರಶ್ನಿಸಿ ಕೆಪಿಮಂಜುನಾಥ್ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯಲ್ಲಿ ಈ ಮೌಖಿಕ ಅಭಿಮತ ವ್ಯಕ್ತಪಡಿಸಿದರೆಂದು ವರದಿಯಾಗಿದೆ.

ಭಜರಂಗದಳದ ನಾಯಕನಿಂದ ಮುಖ್ಯ ನ್ಯಾಯಾಧೀಶರ ವರೆಗಿನ ಹೇಳಿಕೆಗಳಲ್ಲಿ– 'ಟಿಪ್ಪು ಸ್ವಾತಂತ್ರ್ಯ ಹೋರಾಟಗಾರನಲ್ಲ. ಟಿಪ್ಪು ತನ್ನ ಸಾಮ್ರಾಜ್ಯ ವಿಸ್ತರಿಸಿಕೊಳ್ಳಲಷ್ಟೇ ಹೋರಾಡಿದ ಇನ್ನೊಬ್ಬ ರಾಜ. ಆತನ ಜಯಂತಿ ಆಚರಣೆ ಬೇಡ'–ಎಂಬ ಕೆಲವು ಸಾಮಾನ್ಯ ಅಂಶಗಳು ಕಂಡು ಬಂದವು. ಈ ನಿರೂಪಣೆ ಒಂದೇ ಕೇಂದ್ರದಿಂದ ಹಂಚಿದಂತೆ ಅನಿಸುತ್ತಿತ್ತು. ಇದು ದೇಶದ/ರಾಜ್ಯದ ಇತಿಹಾಸ ಮತ್ತು 'ದೇಶಪ್ರೇಮ' 'ಸ್ವಾತಂತ್ರ್ಯ ಹೋರಾಟ'ದ ಪರಿಕಲ್ಪನೆಗಳ ಬಗ್ಗೆ ಸಂಘಗ್ಯಾಂಗಿನ ಕೋಮುವಾದಿ ದೃಷ್ಟಿಕೋಣದಿಂದ ಹೊರಟವು ಎಂಬುದು ಸ್ಪಷ್ಟ. ಈವರೆಗೆ ಸಂಘಗ್ಯಾಂಗಿನ ಸಂಘಟನೆಗಳಿಗೆ ಸೀಮಿತವಾಗಿದ್ದದ್ದು ಉದ್ಯಮಿಗಳು, ನ್ಯಾಯಾಧೀಶರಿಂದಲೂ ಹೊರಬಂದಿದ್ದು ಈ ವರ್ಷದ ವಿಶೇಷವಾಗಿತ್ತು. ಇದು ಸಂಘಗ್ಯಾಂಗಿನ ಈ ಬಾರಿಯ ಟಿಪ್ಪು ವಿರುದ್ಧ ಅಪಪ್ರಚಾರದ ಹೂರಣವೂ ಆಗಿತ್ತು. ಕಳೆದ ಬಾರಿಯ ಕೊಡವರ, ಮಲಬಾರಿನ ಹಿಂದೂಗಳ ಮೇಲೆ, ಮಂಗಳೂರಿನ ಕ್ರಿಶ್ಚಿಯನ್ನರ ಮೇಲೆ ಟಿಪ್ಪು ಅತ್ಯಾಚಾರಗಳನ್ನೂ ಅಗತ್ಯ ಬಿದ್ದಲ್ಲಿ ಬಳಸಲಾಗುತ್ತಿದ್ದರೂ, ಒತ್ತು ಮೇಲೆ ಹೇಳಿದ ಅಂಶಗಳ ಮೇಲೆ ಇದ್ದವು. ಇದಲ್ಲದೆ ಶೂದ್ರ ಜಾತಿಯೊಂದನ್ನು ತಮ್ಮ ಕೋಮುವಾದಿ ಅಪಪ್ರಚಾರದಲ್ಲಿ ಒಳಗೊಳ್ಳುವ ಪ್ರಯತ್ನ ಮಾಡಿದರು. ಹೈದರಾಲಿ ಮದಕರಿ ನಾಯಕನ ರಾಜ್ಯವನ್ನು ಮೋಸದಿಂದ ವಶಪಡಿಸಿಕೊಂಡ. ಆದ್ದರಿಂದ ವಾಲ್ಮೀಕಿ–ಬೇಡ ಸಮದಾಯದ ಜನ ಟಿಪ್ಪು ಜಯಂತಿಯನ್ನು ವಿರೋಧಿಸಬೇಕು. ಟಿಪ್ಪುವನ್ನು ದ್ವೇಷಿಸಬೇಕು ಎಂದು ಪ್ರಚಾರ ಮಾಡಿದರು. ಇತ್ತೀಚೆಗಷ್ಟೇ ಚುನಾವಣೆ ತಯಾರಿಯ ಭಾಗವಾಗಿ ವಾಲ್ಮೀಕಿ ಸಮಾವೇಶವನ್ನು ಬಿಜೆಪಿ ಸಂಘಟಿಸಿತ್ತು. ಸಮುದಾಯದ ಮೀಸಲಾತಿಯನ್ನು ಶೇ.3.5 ರಿಂದ ಶೇ. 7.5 ಏರಿಸುವ ಆಶ್ವಾಸನೆ ಕೊಟ್ಟಿತ್ತು. ಕಾಂಗ್ರೆಸಿನ ವಿರುದ್ಧ ಮತಬ್ಯಾಂಕಿನ ರಾಜಕೀಯದ ಆಪಾದನೆ ಮಾಡುವ ಬಿಜೆಪಿ ಟಿಪ್ಪು ಜಯಂತಿ ವಿರೋಧ ಚಳುವಳಿಯನ್ನು ತನ್ನ ಮತಬ್ಯಾಂಕಿನ ರಾಜಕೀಯದತ್ತ ತಿರುಗಿಸಿತ್ತು. ಹೈ ಕೋರ್ಟಿನಲ್ಲಿ ಜಯಂತಿ ಆಚರಣೆಯ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮೂಲಕ ಕಾನೂನು ಹೋರಾಟವನ್ನು ಹೂಡಿದೆ.

ಟಿಪ್ಪು ಜಯಂತಿಯ ವಿರುದ್ಧ ಸಂಘಗ್ಯಾಂಗಿನ ಚಳುವಳಿಯ ಈ ಬಾರಿಯ ಹೂರಣವಾಗಿರುವ 'ಟಿಪ್ಪು ಸ್ವಾತಂತ್ರ್ಯ ಹೋರಾಟಗಾರನಲ್ಲ. ಟಿಪ್ಪು ತನ್ನ ಸಾಮ್ರಾಜ್ಯ ವಿಸ್ತರಿಸಿಕೊಳ್ಳಲಷ್ಟೇ ಹೋರಾಡಿದ ಇನ್ನೊಬ್ಬ ರಾಜ. ಆತನ ಜಯಂತಿ ಆಚರಣೆ ಬೇಡ' – ಎಂಬ ಅಂಶಗಳ ವಿರುದ್ಧ ಸೈದ್ಧಾಂತಿಕವಾಗಿ ಹೋರಾಡಬೇಕಾಗಿದೆ. ಬ್ರಿಟಿಶರ ವಿರುದ್ಧ ಟಿಪ್ಪು ಸುಲ್ತಾನ್ ಹೋರಾಟದ ಮಹತ್ವವನ್ನು ಈ ಬಾರಿ ಸಂಘಗ್ಯಾಂಗು ವಿಶೇಷವಾಗಿ ಅಲ್ಲಗಳೆಯುತ್ತಿರುವುದು ಬರಿಯ ಕೋಮುವಾದಿ ಮುಸ್ಲಿಂ–ದ್ವೇಷದಿಂದ ಮಾತ್ರವಲ್ಲ. ಸಂಘಗ್ಯಾಂಗು ಬ್ರಿಟಿಶರ ವಿರುದ್ಧ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಿಲ್ಲ. ಮಾತ್ರವಲ್ಲ, ಅದು ಬ್ರಿಟಿಶರ ಕೋಮುವಾದಿ ತಂತ್ರದ ಕೂಸು ಮತ್ತು ತೊತ್ತು ಆಗಿತ್ತು. ಸ್ವಾತಂತ್ರ್ಯ ಚಳುವಳಿಯನ್ನು ಕೋಮುದ್ವೇಷ–ಗಲಭೆಗಳಿಂದ ಒಡೆದು ಬ್ರಿಟಿಶರ ಏಜೆಂಟರಂತೆ ಕೆಲಸ ಮಾಡಿತ್ತು ಎಂಬುದನ್ನು ಮುಚ್ಚಿಕೊಳ್ಳಬೇಕಾಗಿದೆ. ಬ್ರಿಟಿಶ್–ವಸಾಹತುಶಾಹಿ ವಿರುದ್ಧ ಹೋರಾಡಿದವರು 'ದೇಶಭಕ್ತರು', 'ರಾಷ್ಟ್ರವಾದಿಗಳು' ಆದರೆ, ಸಂಘಗ್ಯಾಂಗಿನವರು ಇವೆರಡೂ ಆಗಿರಲೂ ಸಾದ್ಯವಿಲ್ಲವಲ್ಲ. ಮಾತ್ರವಲ್ಲ, ಈಗಲೂ ಅಮೆರಿನ್ ಸಾಮ್ರಾಜ್ಯಶಾಹಿಯ ಬಾಲಂಗೋಚಿಯಾಗಿರುವ ನೀತಿ ಅನುಸರಿಸುತ್ತಿರುವುದೂ ಪ್ರಶ್ನಾರ್ಹವಾಗುತ್ತದಲ್ಲ. 'ದೇಶಭಕ್ತಿ', 'ರಾಷ್ಟ್ರವಾದ'ವನ್ನು ರಾಷ್ಟ್ರಧ್ವಜ, ರಾಷ್ಟ್ರಗೀತೆ, ಮಿಲಿಟರಿ, ಪ್ರಭುತ್ವ ಮುಂತಾದ ಪ್ರತಿಮೆಗಳಿಗೆ ಪ್ರಶ್ನಾತೀತ ನಿಷ್ಟೆಗೆ ಸೀಮಿತಗೊಳಿಸುವ ಪ್ರಯತ್ನದ ಭಾಗ ಎಂದು ಸಂಘಗ್ಯಾಂಗಿನ ಟಿಪ್ಪು ಜಯಂತಿಯ ವಿರುದ್ಧ ಚಳುವಳಿಯನ್ನು ಬಯಲಿಗೆಳೆಯಬೇಕಾಗಿದೆ. ಟಿಪ್ಪು ಸುಲ್ತಾನನ ಬ್ರಿಟಿಶ್–ವಸಾಹತುಶಾಹಿ ವಿರುದ್ಧ ಸತತ ರಾಜಿಯಿಲ್ಲದ ಹೋರಾಟವನ್ನು ನೆನಪಿಸುತ್ತಲೇ, ಸಂಘಗ್ಯಾಂಗಿನ ಬ್ರಿಟಿಶ್ ಏಜೆಂಟ ಪಾತ್ರವನ್ನೂ ಬಯಲು ಮಾಡಬೇಕಾಗಿದೆ.

ಟಿಪ್ಪು ಬರಿಯ 'ಇನ್ನೊಬ್ಬ ರಾಜ' ಅಲ್ಲ. ಆತ ಇತರ ರಾಜರಂತೆ ಜನ–ಪೀಡಕನೂ ಅಲ್ಲ. ಅತ್ಯಂತ ಜನಾನುರಾಗಿ ಜನಪ್ರಿಯ ರಾಜನಾಗಿದ್ದ ಎಂದೂ ಪ್ರಚಾರ ಮಾಡಬೇಕಾಗಿದೆ. ಮೈಸೂರು (ಮತ್ತು ಆಮೇಲೆ ಕರ್ನಾಟಕ) ಒಂದು ಪ್ರಗತಿಪರ ಅಭಿವೃದ್ಧ ರಾಜ್ಯ ಆದ ಪ್ರಕ್ರಿಯೆಯ ಆದ್ಯ ಪ್ರವರ್ತಕ ಟಿಪ್ಪುವೇ. ಆಗ ಇದ್ದ ಮಧ್ಯವರ್ತಿಗಳ ಶೋಷಣೆ ನಿಲ್ಲಿಸಿ ರೈತುವಾರಿ ಪದ್ಧತಿ ಜಾರಿ ಮಾಡಿದ್ದು ಟಿಪ್ಪು ಆಡಳಿತದ ಕಾಲದಲ್ಲಿ. ಕೃಷಿಗೆ ಉತ್ತೇಜನ ನೀಡಲು ಹಲವು ಆಡಳಿತಾತ್ಮಕ ಸುಧಾರಣೆಗಳು ಮತ್ತು ನೀರಾವರಿ ಯೋಜನೆಗಳನ್ನು ಆರಂಭಿಸಿದವನು ಟಿಪ್ಪುವೇ. ಆತನ ಆಡಳಿತ ಕಾಲದಲ್ಲಿ ಹೊಸ ಭೂ ಕಂದಾಯ ಪದ್ಧತಿ, ನಾಣ್ಯ, ಕ್ಯಾಲೆಂಡರು ಮುಂತಾದ ಸೃಜನಶೀಲ ಆಡಳಿತಾತ್ಮಕ ಕ್ರಮಗಳನ್ನು ಜಾರಿಗೆ ತರಲಾಯಿತು. ಕಾವೇರಿಗೆ ಈಗ ಕೆ.ಆರ್.ಎಸ್. ಇರುವಲ್ಲೇ ಆಣೆಕಟ್ಟು ಕಟ್ಟಲು ಟಿಪ್ಪು ಯೋಜಿಸಿದ್ದ. ರೇಷ್ಮೆ ಕೃಷಿ ಮತ್ತು ಕೈಗಾರಿಕೆ ಆರಂಭಿಸಿದ್ದು ಟಿಪ್ಪು. ಸಸ್ಯ ವೈವಿಧ್ಯಕ್ಕೆ ಹೆಸರಾದ ಬೆಂಗಳೂರಿನ ಲಾಲ್‌ಬಾಗ್ ಸ್ಥಾಪಿಸಿದ್ದು ಟಿಪ್ಪು ಕಾಲದಲ್ಲಿ. ಟಿಪ್ಪು ಕಾಲದ ಮೈಸೂರು ಒಂದು ಮಿಲಿಟರಿ ಶಕ್ತಿಯಾಗಿದ್ದು ಯುದ್ಧದಲ್ಲಿ ರಾಕೆಟ್ ಅಸ್ತ್ರಗಳ ಬಳಕೆ, ನೌಕಾ ಸೈನ್ಯ ಹೊಂದಿತ್ತು. ಒಟ್ಟಾರೆಯಾಗಿ ಟಿಪ್ಪು ಆಡಳಿತ ಸ್ಥಳೀಯವ ಉತ್ಪಾದನಾ ಶಕ್ತಿಗಳನ್ನು ಉತ್ತೇಜಿಸುವ ದೂರಗಾಮಿ ಕ್ರಮಗಳನ್ನು ಕೈಗೊಂಡಿದ್ದು ಈ ಪ್ರಗತಿಪರ ಅಭಿವೃದ್ಧಿ–ಪರ ನೀತಿಗಳ ಮುಂದುವರಿಕೆಯೇ ಮುಂದೆ ಮೈಸೂರು ದೇಶದಲ್ಲೇ ಪ್ರಗತಿಪರ ಅಭಿವೃದ್ಧ ರಾಜ್ಯ ಎನ್ನಿಸಿಕೊಳ್ಳಲು ಕಾರಣವಾಯಿತು. ಈ ಬಗ್ಗೆ ವಾಸ್ತವ ಸಂಗತಿಗಳನ್ನು ವ್ಯಾಪಕವಾಗಿ ಜನರ ನಡುವೆ ವ್ಯಾಪಕವಾಗಿ ಪ್ರಚಾರ ಮಾಡಬೇಕಾಗಿದೆ.

ಈ ನಿಟ್ಟಿನಲ್ಲಿ ಹೈದರ್ ಮತ್ತು ಟಿಪ್ಪುವಿನ ಕುರಿತಾಗಿ ಇರುವ ಅನೇಕ ಜನಪದ ಲಾವಣಿಗಳನ್ನು ಪುನಃ ಜನಪ್ರಿಯಗೊಳಿಸಬೇಕಾಗಿದೆ. ಇವುಗಳನ್ನು ಲಿಂಗದೇವರು ಹಳೆಮನೆ, ಪ್ರೊ. ಜೀ ಶಂ ಫರಮಶಿವಯ್ಯನವರು, ನಿಂಗಣ್ಣ ಸಣ್ಣಕ್ಕಿಯವರು ಸಂಗ್ರಹಿಸಿ ಪ್ರಕಟಿಸಿದ್ದರು. ಎಲ್ಲುಂಡಪ್ಪ ಅವರ ಪ್ರಖ್ಯಾತ ಸಂಕಲನ "ನಾಡ ಪದಗಳಲ್ಲಿ ಟಿಪ್ಪು ಸುಲ್ತಾನನ ಬೀಳಿನ ಹಾಡು" ಎಂಬ ಲಾವಣಿಯಿದೆ. ಈ ಲಾವಣಿಗಳು ಟಿಪ್ಪುವಿನ ಬಗೆಗೆ ವಿಶೇಷ ಒಲವನ್ನು ಪ್ರಕಟಿಸುತ್ತಿದ್ದು, ಇವನ್ನು ಮನೆಮನೆಗೆ ಹೋಗಿ ಹಾಡಲಾಗುತ್ತಿತ್ತು. ಲಾವಣಿಯ ಕೆಲವು ಸಾಲುಗಳು ಇಂತಿವೆ–

'ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ ರಣಾಗ್ರ ಹೊರಟನು ರೋಷದಲಿ
ಫರಂಗಿಸೊಲ್ಜರ ತರಂಗ ಮಧ್ಯದಿ ತುರಂಗ ಬಿಟ್ಟನು ತ್ವರಿತದಲಿ.
ಟಿಪು ಸುಲ್ತಾನನ ಹದಿನೇಳು ವರುಷದ ಆಡಳಿತ ಕೊನೆಯಾಯ್ತು
ಟೀಪು ರಾಜ್ಯದೊಳು ಶರಾಬು ಶೇಂದಿ ಗಾಂಜಾ ಅಫೀಮು ಇರಲಿಲ್ಲ
ಟೀಪುವಿನ ಕಾಲದೊಳು ಜೂಜಿನಾಟ ಮೇಣ್ವ್ಯಭಿಚಾರದ ಸುಳಿವಿಲ್ಲ
ಹುಲಿ ಸೀಳಿದ ದೊರೆ ಅಳಿದೋದ ಮೇಲೆ ರಣದಲ್ಲಿ
ಮಳೆಯಾಯಿತು ಗಳಿಗೇಲಿ ಪ್ರಳಯದಂತೆ ಭರದಲ್ಲಿ
ಸುಲಿಗೆಯ ಮಾಡಿದರು ಶತ್ರು ಜನರು ಪುರದಲ್ಲಿ
ಬಳಿ ಕಾದ ವಿವರ ಬರೆದೇನು ಇಲ್ಲಿ ಫಲವಿಲ್ಲ.

ಟಿಪ್ಪುವಿನ ಪರವಾಗಿರುವ ಧ್ವನಿ ಈ ಲಾವಣಿಗಳಲ್ಲಿರುವುದು ಕಂಡು ಬರುತ್ತದೆ. ಇದೂ ಚರಿತ್ರೆಯೆಂದು ತಿಳಿಹೇಳಬೇಕಾಗಿದೆ.

ಹೈದರಾಲಿ ಚಿತ್ರದುರ್ಗದ ಪಾಳೆಯಗಾರ ಮದಕರಿ ನಾಯಕನ ರಾಜ್ಯವನ್ನು ವಶಪಡಿಸಿಕೊಂಡ. ಆದ್ದರಿಂದ ವಾಲ್ಮೀಕಿ ಸಮುದಾಯ ಟಿಪ್ಪುವನ್ನು ದ್ವೇಷಿಸಬೇಕು–ಎಂಬುದನ್ನು ಪ್ರಶ್ನಿಸಬೇಕಾಗಿದೆ. ಹಾಗಾದರೆ ಸ್ವತಂತ್ರ ಬುಡಕಟ್ಟುಗಳಾಗಿ ಈ ಸಮುದಾಯ ಜೀವಿಸುತ್ತಿದ್ದಾಗ ಆ ಪ್ರದೇಶಗಳನ್ನೆಲ್ಲ ವಶಪಡಿಸಿಕೊಂಡ ಕದಂಬರು, ಚಾಲುಕ್ಯರು ಇತ್ಯಾದಿ, ಹಾಗೇ ಗಂಗರನ್ನು ಅಧೀನ ಮಾಡಿಕೊಂಡ ಚಾಲುಕ್ಯರು, ರಾಷ್ಟಕೂಟರು, ಚೋಳರು, ಕೆಂಪೇಗೌಡರನ್ನು ಸೆರೆಗೆ ಹಾಕಿದ ವಿಜಯನಗರದರಸರು ಇವರೆಲ್ಲನ್ನೂ ವಾಲ್ಮೀಕಿ ಸಮುದಾಯ, ಗಂಗವಾಡಿಕಾರ ಮತ್ತು ಇತರ ಒಕ್ಕಲಿಗರು ದ್ವೇಷಿಸಬೇಕೆ? ಹೀಗೆ ರಾಜ, ಮಹರಾಜರುಗಳ ನಡುವೆ, ನವಾಬ, ಸುಲ್ತಾನರ ನಡುವೆ ಎಷ್ಟೋ ಯುದ್ಧಗಳು ನಡೆದಿವೆ. ಅವರ ವಾರಸುದಾರರೆಂದು ಭ್ರಮೆಗೊಳಗಾದ ಜನರೆಲ್ಲ ಪರಸ್ಪರ ದ್ವೇಷಕಾರಬೇಕೆ–ಎಂದೂ ಕೇಳಬೇಕಾಗಿದೆ.

ಇದೇ ಸಮಯದಲ್ಲಿ ಟಿಪ್ಪು ಆದರ್ಶ ರಾಜ ಅಥವಾ ಪುರುಷ ಎಂದು ಹಾಡಿ ಹೊಗಳ ಬೇಕಾಗಿಲ್ಲ. ಎಲ್ಲಾ ರಾಜರಂತೆ ಆತನಲ್ಲೂ ನ್ಯೂನತೆಗಳು ಇದ್ದವು. ಆತನ ವಾಸ್ತವ ಸಾಧನೆಗಳನ್ನು ಹೇಳಲು ಬೇಕಾದಷ್ಟು ಇದೆ. ಇಲ್ಲದ್ದನ್ನು ಆತನ ಮೇಲೆ ಹೊರಿಸುವುದು ಬೇಡ. ಆದರೆ ಟಿಪ್ಪುವಿನ ವರ್ಣರಂಜಿತ ಬಹುಮುಖಿ ವ್ಯಕ್ತಿತ್ವವನ್ನು ಕಪ್ಪು–ಬಿಳುಪಿನ ಒಂದೇ ಆಯಾಮಕ್ಕೆ ಇಳಿಸುವ ಸಂಘಗ್ಯಾಂಗಿನ ಪ್ರಯತ್ನಗಳನ್ನು ಧೃಢತೆಯಿಂದ ಎದುರಿಸಬೇಕಾಗಿದೆ. ಟಿಪ್ಪುವಿನ ವರ್ಣರಂಜಿತ ಬಹುಮುಖಿ ವ್ಯಕ್ತಿತ್ವ ಅವನನ್ನು ಕರ್ನಾಟಕದಲ್ಲೂ ದೇಶದ ತುಂಬಾ, ಸಂಘಗ್ಯಾಂಗಿನ ಸತತ ಅಪ ಪ್ರಚಾರದ ನಂತರವೂ ಒಂದು ಜನಪ್ರಿಯ ರಾಷ್ಟ್ರೀಯ 'ಐಕಾನ್' ಆಗಿಸಿದೆ. ಅವನ ಬಗ್ಗೆ ಬಂದ ಕಥೆ–ಕಾದಂಬರಿಗಳು, ನಾಟಕಗಳು, ಸಿನಿಮಾ, ಟಿವಿ ಸೀರಿಯಲುಗಳಿಗೆ ಲೆಕ್ಕವಿಲ್ಲ. 'ಹಿಂದುತ್ವ ರಾಜಕಾರಣ'ಕ್ಕೆ ತೀರಾ ವಿರುದ್ಧವಾದ, ಅದರ ಹಿಡಿತಕ್ಕೆ ಜಗ್ಗದ ಬಗ್ಗದ ಒಗ್ಗದ ಟಿಪ್ಪುವಿನಂತಹ ರಾಷ್ಟ್ರೀಯ 'ಐಕಾನ್' ಅವರಿಗೆ ಜೀರ್ಣಿಸಿಕೊಳ್ಳುವುದು ಕಷ್ಟ. ಅದಕ್ಕಾಗಿಯೇ ಅವರ ಈ ಬದ್ಧ ವಿರೋಧ.

ಸಂಘಗ್ಯಾಂಗಿನ ಕುತ್ಸಿತ ಅಪಪ್ರಚಾರವನ್ನು, ಟಿಪ್ಪುವಿನ ವರ್ಣರಂಜಿತ ಬಹುಮುಖಿ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಎತ್ತಿಹಿಡಿಯುವ ಮೂಲಕ ಹಿಮ್ಮೆಟ್ಟಿಸಬೇಕಾಗಿದೆ. ಇದಕ್ಕಾಗಿ ಟಿಪ್ಪು ಹುಟ್ಟುಹಬ್ಬವನ್ನು ವಿಚಾರ ಸಂಕಿರಣ, ಸಾರ್ವಜನಿಕ ಸಭೆ ಮುಂತಾದವುಗಳ ಮೂಲಕ–ರಾಜಿಯಿಲ್ಲದ ವಸಾಹತುಶಾಹಿ–ವಿರೋಧಿ ಹೋರಾಟಗಾರ; ಧಾರ್ಮಿಕ ಸಮಭಾವ, ಉತ್ಪಾದನಾ ಶಕ್ತಿಗಳನ್ನು ಹಾಗೂ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಪ್ರಭುತ್ವದ ರೂಪಕ; ತಾತ್ವಿಕ ಚಿಂತಕ–ಮುಂತಾದ ಟಿಪ್ಪುವಿನ ವರ್ಣರಂಜಿತ ಬಹುಮುಖಿ ವ್ಯಕ್ತಿತ್ವವನ್ನು ಎತ್ತಿ ಹಿಡಿಯಬೇಕಾಗಿದೆ. ಆತನ ವ್ಯಕ್ತಿತ್ವಕ್ಕೆ ನ್ಯಾಯ ಸಲ್ಲಿಸಬೇಕಾಗಿದೆ. ■

ನೆಲ, ನೆಲೆಗಳ ಜನ್ಮ ಸಿದ್ಧ ಹಕ್ಕಿಗಾಗಿ ಆದಿವಾಸಿಗಳ ಆಂದೋಲನ

ಎಸ್.ವೈ.ಗುರುಶಾಂತ್

ವರುಷಗಳುರುಳಿದರೂ ನೆರಿಯಾ ಪ್ರದೇಶದ ಸುಂದರ ಮಲೆಕುಡಿಯರವರ ಕುಟುಂಬಕ್ಕೆ ಭೂಮಿ ಹಕ್ಕುಪತ್ರ ಸಿಗಲೇ ಇಲ್ಲ. ಕಡಿಯಲಾದ ಕೈಗಳ ಚಿಕಿತ್ಸಾ ವೆಚ್ಚವನ್ನು ಭರಿಸಲು ಸರಕಾರವೂ ನಿರಾಕರಿಸುತ್ತಿದೆ. ಅದ-ಕ್ಕೆ ಕಾನೂನಿನ ತೊಡಕಿದೆಯಂತೆ! ಕಾರಣ, ದೌರ್ಜನ್ಯ ಎಸಗಿದ ಶ್ರೀಮಂತ ಜಮೀನ್ದಾರ ಗೋಪಾಲಕೃಷ್ಣಗೌಡನ ಮನೆಗೇ ಸುಂದರ ಮಲೆಕುಡಿಯ, ಅವರ ಹೆಂಡತಿ, ಮಗ ಹೋಗಿ ಅವರ ಮೇಲೆಯೇ ದೌರ್ಜನ್ಯ ಮಾಡಲು ಯತ್ನಿಸಿದ್ದಾರೆ ಎಂಬ ವಾದಕ್ಕೆ ನ್ಯಾಯಾಲಯದಲ್ಲಿ 'ಪುರಸ್ಕಾರ' ಸಿಕ್ಕಿ ಬಿಟ್ಟಿರುವುದರಿಂದ ಎಸ್.ಟಿ. ದೌರ್ಜನ್ಯ ಕಾಯ್ದೆ ಲಾಗೂ ಆಗುವುದಿಲ್ಲವಂತೆ! ನಡೆದ ಘಟನೆಯ ಬಗ್ಗೆ ಎಲ್ಲಾ ವಿವರ ಸಾಕ್ಷ್ಯಗಳು ಪೊಲೀಸರ ಬಳಿ ಇದ್ದರೂ ಈಗ 'ಹಕ್ಕು ವಂಚಿತ' ಸ್ಥಿತಿಗೆ ಸುಂದರರವರನ್ನು ತಳ್ಳಲಾಗಿದೆ. ಹಾಗೇ ಭೂಮಿ ಇನ್ನೇನು ಮಂಜೂರು ಮಾಡೇ ಬಿಡುವುದಾಗಿ ಹೇಳುತ್ತಿದ್ದ ಬೆಳ್ತಂಗಡಿ ತಾಲ್ಲೂಕಿನ ಅಧಿಕಾರಿಗಳಿಗೆ ಬಾಯಿ ಮುಚ್ಚಿ ಅತ್ತ ಕೈ ತೋರಿಸಲು ಇದು ಒಂದು ಒಳ್ಳೆ ನೆಪ!

ದಾರಿ ಎಲ್ಲಿ?

ಅಷ್ಟು ಮಾತ್ರವೇ ಅಲ್ಲ ಇಡೀ ಆ ಪ್ರದೇಶದಲ್ಲಿನ ಸಾವಿರಾರು ಮಲೆಕುಡಿಯರೂ ಸೇರಿದಂತೆ ಎಲ್ಲಾ ಬುಡಕಟ್ಟು – ಆದಿವಾಸಿ ಸಮುದಾಯ ನೆಲೆ ನಿಂತ ಭೂಮಿಗೆ ಸರಕಾರದ ಹಕ್ಕು ಪತ್ರ ಇಲ್ಲದೇ ಯಾವಾಗ ಬೇಕಾದರೂ ಎತ್ತಂಗಡಿಯಾಗುವ ಆತಂಕದಲ್ಲೇ 'ಕೈ ಒಡ್ಡಿ' ನಡು ಬಗ್ಗಿಸಿ ನಿಂತು ಬದುಕಬೇಕಾಗಿದೆ. ಇಲ್ಲಿನ ಭೂಮಿ ಯಾರಿಗೆ ಸೇರಿದ್ದು? ಕಂದಾಯ-ಕ್ಕೋ, ಅರಣ್ಯಕ್ಕೋ 40 ವರ್ಷಗಳಾದರೂ ಇನ್ನೂ ಇತ್ಯರ್ಥವೇ ಆಗ್ತಿಲ್ಲ!

ಇನ್ನೂ ನಾಗರಹೊಳೆ ಪ್ರದೇಶದ ಜೇನು ಕುರುಬರ ಪಾಡು ಮತ್ತೊಂದು ಬಗೆಯದ್ದು. ವನ್ಯಜೀವಿ ರಕ್ಷಣೆ – ಹೆಸರಿನಲ್ಲಿ ಅಲ್ಲಿದ್ದ ನೂರಾರು ಕುಟುಂಬಗಳನ್ನು ಎತ್ತಂಗಡಿ ಮಾಡಿತು ಘನ ಸರ್ಕಾರ. ಭಾರಿ ಪರಿಹಾರ, ಜೀವನ ಭದ್ರತೆ ಆಸೆ ತೋರಿಸಿದ್ದಾಯ್ತು. ಅಲ್ಲಿಂದ ಹೊರ ಬಂದ ಮೇಲೆ ಮೊದಲಿನಂತೆ ಗೆಡ್ಡೆ, ಗೆಣಸು, ಜೇನು ಇತ್ಯಾದಿ ಅರಣ್ಯದ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಅರಣ್ಯ ಇಲಾಖೆ ತಡೆಯುತ್ತಿದೆ. ಯಾಕೆಂದರೆ ಅವರೀಗ ಅಲ್ಲಿನ ವಾಸಿಗಳಲ್ಲ! ಪರಸ್ಥಳದವರು, ಪರಕೀಯರು. ಅಂದ ಮೇಲೆ ಕಾಯ್ದಿಟ್ಟ ಅರಣ್ಯದಲ್ಲಿ ಇವರಿಗೆ ಪ್ರವೇಶ ಸಿಗುವುದಾದರೂ ಹೇಗೆ! ಕಾಡು ಹೊರದಬ್ಬಿದೆ, ನಾಡು ತಿಳಿಯದಾಗಿದೆ, ಇನ್ನೂ ಮೇಲೆ ಬದುಕಲು ಇನ್ನೆಲ್ಲಿ ದಾರಿಯಿದೆ?

ಕುತಂತ್ರಗಳ ಬಲೆಯೊಳಗೆ

ಕುಂದಾಪುರ ಪ್ರದೇಶದ ಹಸಲರು, ಕೊರಗರದ್ದು ಮತ್ತೊಂದು ಧಾರುಣ ಕಥೆ. ಪಶ್ಚಿಮ ಘಟ್ಟದ ಹಳ್ಳಿ ಹೊಳೆ ಪ್ರದೇಶದಲ್ಲಿ ನೆಲೆ ನಿಂತಿರುವ ಇವರು ಯಾವ ತಾಲೂಕಿನವರು? ಯಾವ ಕಂದಾಯ ವಿಭಾಗಕ್ಕೆ ಸೇರಿದವರು ಎಂಬುದು ಅರ್ಥವೇ ಆಗಿಲ್ಲ.! ಸ್ವಾತಂತ್ರ್ಯ ಬಂದು 69 ಕಳೆಯಿತು. ಈ ಪ್ರದೇಶ ಶಿವಮೊಗ್ಗದ ಹೊಸನಗರ ತಾಲ್ಲೂಕಿನದೋ, ಕುಂದಾಪುರದ್ದೋ, ಯಾವ ಅಧಿಕಾರಿಯೂ ತಮ್ಮದು ಎಂದು ಹೇಳುತ್ತಿಲ್ಲ. ಒಬ್ಬರ ಬಳಿಗೆ ಹೋದರೆ ಮತ್ತೊಬ್ಬರನ್ನು ತೋರಿಸುತ್ತಾರೆ. ಹೀಗಾಗಿ ಅವರಿಗೆ ಹಕ್ಕುಪತ್ರ ಕೊಡಬೇಕಾದವರು ಯಾರು? ಭಾರತದಲ್ಲೇ ಅದು ಇಲ್ಲ ಎಂದ ಮೇಲೆ ಕೊಡಬೇಕಾದವರು ವಿಶ್ವ ಸಂಸ್ಥೆಯೇ? ಇನ್ನು ಒಂದು ವಿಚಿತ್ರವೆಂದರೆ ಘಟ್ಟದ ಮೇಲೆ ಇರುವ ಹಸಲರು ಪರಿಶಿಷ್ಟ ಪಂಗಡ (ಎಸ್.ಟಿ.), ಘಟ್ಟದ ಕೆಳಗಿರುವ ಅವರ ಬಂಧುಗಳು ಪರಿಶಿಷ್ಟ ಜಾತಿ (ಎಸ್.ಸಿ.)! ಕನಿಷ್ಟ ಎಸ್.ಟಿ.ಗಳಾದರೂ ಅರಣ್ಯ ಹಕ್ಕು ಕೇಳಬಹುದು. ಆದರೆ 'ಎಸ್‌ಸಿಗಳಾದವರು'? ಅರಣ್ಯ ಹಕ್ಕು – ಸಮುದಾಯದ ಹಕ್ಕು ಕೇಳುವ ಹಾಗೇ ಇಲ್ಲ!

ಇಂತಹ ಸ್ಥಿತಿ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ, ಗೌಳಿ, ಕುಣಬಿ, ಕುಂಬ್ರಿ ಮರಾಠಿ ಮುಂತಾದ ಬುಡಕಟ್ಟು ಸಮುದಾಯಗಳೇ ಆದ ಅವರು ಎದುರಿಸುತ್ತಿದ್ದಾರೆ. ಈ ನಾಡಿನ, ಕಾಡಿನ ಮಕ್ಕಳಿಗೆ ವಂಚಿಸುವ ಕುತಂತ್ರಗಳು ಆಳುವವರ ಬಳಿ ಅದೆಷ್ಟೋ ಇವೆ. !

ಭಾರತ ಸರಕಾರ, ಕರ್ನಾಟಕ ಸರಕಾರ ಆದಿವಾಸಿ ಬುಡಕಟ್ಟು ಸಮುದಾಯಗಳಿಗೆ ಅರಣ್ಯ ಹಕ್ಕು ಕಾಯ್ದೆಯಂತೆ ಭೂಮಿ ಒಳಗೊಂಡು ಎಲ್ಲಾ ಪಾರಂಪರಿಕ ಸಮುದಾಯದ ಹಕ್ಕುಗಳನ್ನು ಕೊಡುತ್ತಿರುವುದಾಗಿ ಹೇಳುತ್ತಿರುವುದು ಕೇವಲ ಬೊಗಳೆ. ಅರಣ್ಯ ಹಕ್ಕುಗಳ ಕಾಯ್ದೆ–2006ರ ಪ್ರಕಾರ ಕರ್ನಾಟಕದಲ್ಲಿ ಕ್ಲೇಮುಗಳನ್ನು ಹಾಕಿದ್ದ ಸುಮಾರು 2,26,000 ಅರ್ಜಿಗಳಲ್ಲಿ ಪುರಸ್ಕರಿಸಿದ್ದು ಕೇವಲ 7,427 ಮಾತ್ರ. ಸರಕಾರದ ಅಂಕಿ–ಅಂಶಗಳು ಹೇಳುವಂತೆ ಶೇ.2,87 ಮಾತ್ರ. ದೇಶದಲ್ಲಿ ಈ ಕಾಯ್ದೆ ಜಾರಿಯಲ್ಲಿ ತೀರಾ ಕೆಳಗಿನ ಸ್ಥಾನದಲ್ಲಿರುವ ಗುಜರಾತ್ ರಾಜ್ಯದೊಂದಿಗೆ ಕರ್ನಾಟಕ ಇದೆ. ಆದರೆ ಬಾಯಿಬೊಗಳೆ ಹೊಡೆವ 'ಅಹಿಂದ'ದ ಕಾಂಗ್ರೆಸ್ ಸರಕಾರಕ್ಕೆ ಇದು ನಾಚಿಕೆಗೇಡು ಅನ್ನಿಸುವುದೇ ಇಲ್ಲ. ಅನೇಕ ಪ್ರದೇಶಗಳಲ್ಲಿ ಕಂದಾಯ ಮತ್ತು ಅರಣ್ಯ ಭೂಮಿ ಎಂಬುದನ್ನು ಗುರುತಿಸದೇ ವಂಚಿಸುತ್ತಾ ಬರುವುದು ನಿಂತೇ ಇಲ್ಲ.

ಹೊರ ದಬ್ಬಲು ಅದೆಷ್ಟು ಉಪಾಯಗಳು!

ಅರಣ್ಯ ಹಕ್ಕುಗಳ ಕಾಯ್ದೆ ಜಾರಿಗೆ ಸರಕಾರ ರೂಪಿಸಿದ ಜಾರಿ ನಿಯಮಗಳು ಬಹುತೇಕ ಕಡೆಗಳಲ್ಲಿ ಅಡ್ಡಿಯಾಗಿವೆ. ಕ್ಲೇಮ್ ಹಾಕಲು 2005ರ ಡಿಸೆಂಬರ್ ಹಿಂದಿನ 75 ವರುಷಗಳು ಅಥವಾ ಮೂರು ತಲೆ ಮಾರುಗಳು ಎನ್ನುವುದು ಒಂದಾದರೆ, ಅಲ್ಲಿಯೇ ವಾಸವಿದ್ದರು ಎನ್ನುವುದಕ್ಕೆ ಏನಾದರೂ ಸಾಕ್ಷಿ ಕೊಡಿ-ರೆಂದು ಪೀಡಿಸುವುದು ಮತ್ತೊಂದು, ನೀವೇ 'ಈ ಸಮುದಾಯ' ಎನ್ನಲು ಏನು ದಾಖಲೆ ಇದೆಯೆಂದು ಕೇಳುವುದು, ಇಲ್ಲವೇ ನಿಮ್ಮ ಪ್ರದೇಶ ಅರಣ್ಯ ವ್ಯಾಪ್ತಿಗೆ ಬರುವುದಿಲ್ಲ ಎಂದೋ. ನೀವು ಅಲ್ಲಿನ ವಾಸಿಗಳೇ ಅಲ್ಲ, ಅಂಚಿನವರು ಎಂದೋ, ಆದಿವಾಸಿಗಳ ಅರ್ಜಿಗಳನ್ನು ತಿರಸ್ಕರಿಸಿರುವ ಪ್ರಕರಣಗಳೇ ಅತ್ಯಧಿಕ. ಆದಿವಾಸಿಗಳು ಸಹಜವಾಗಿ ಪ್ರದೇಶದಿಂದ ಪ್ರದೇಶಕ್ಕೆ ಚಲಸುವುದು ಸಹ ಅತ್ಯಂತ ಅನಿವಾರ್ಯ. ಹೀಗಿರುವ ಅವರಿಗೆ ಸರಕಾರ ಹೇಳುವ ದಾಖಲೆಗಳು ಇಲ್ಲದಿರುವುದರಿಂದ ಅವರ ನೆಲೆ, ಪಾರಂಪರಿಕ ಜೀವನ ಕ್ರಮ, ಸಂಸ್ಕೃತಿ ಆಚಾರಗಳನ್ನು ಒಳಗೊಂಡು ಜನಾಂಗೀಯ ಅಧ್ಯಯನದ ಮಾನದಂಡದಲ್ಲೇ ಅವರ ಅಸ್ತಿತ್ವ ಗುರುತಿಸಬೇಕು ಎಂಬ ನಿಯಮವನ್ನು ಸರಕಾರದ ಇಲಾಖೆಗಳು ಮರೆತೇ ಬಿಟ್ಟಿವೆ. ಬಹಳಷ್ಟು ಜನರಿಗೆ ಅರ್ಜಿ ಹಾಕುವ ಬಗ್ಗೆ ಸುದ್ಧಿಯೇ ತಿಳಿದಿರುವುದಿಲ್ಲ. ಇಂತಹ ಸ್ಥಿತಿಯಲ್ಲಿಯೇ ರಾಷ್ಟ್ರೀಯ ಉದ್ಯಾನವನ, ಕಸ್ತೂರಿ ರಂಗನ್ ವರದಿ, ಜೀವ ವೈವಿಧ್ಯತೆಯ ತಾಣ, ಇತ್ಯಾದಿಗಳ ಹೆಸರಿನಲ್ಲಿ ಅಲ್ಲಿಂದ ಅತ್ಯಂತ ಸುಲಭವಾಗಿ ಹೊರದಬ್ಬಲು ಸರಕಾರಗಳು ಮುಂದಾಗಿವೆ. ಅರಣ್ಯದ ಹಕ್ಕು, ಭೂಮಿ ಹಕ್ಕು ನೀಡುವಲ್ಲಿ ಅನೇಕ ಕಡೆಗಳಲ್ಲಿ 'ಅರಣ್ಯ ಹಕ್ಕು ಸಮಿತಿ'ಗಳನ್ನೇ ಗ್ರಾಮ ಪಂಚಾಯತಿವಾರು ರಚಿಸಿಲ್ಲ. ರಚಿಸಿದರೆ ತಾರತಮ್ಯ, ಪಕ್ಷಪಾತಗಳು ಅತ್ಯಂತ ಸಹಜ. ಈ ಸಮಿತಿಗಳ ಶಿಫಾರಸ್ಸುಗಳನ್ನು ಗಣಿಸುವುದು ಸರಕಾರಕ್ಕೆ ಕರ್ತವ್ಯ ಆಗಿಲ್ಲ.!

ಅರಣ್ಯ ಹಕ್ಕುಗಳ ಕಾಯ್ದೆಯಂತೆ ಆದಿವಾಸಿಗಳಿಗೆ ಭೂಮಿ, ನಿವೇಶನ ನೀಡುವಲ್ಲಿ ಕರ್ನಾಟಕ ಸರಕಾರ ತೀರಾ ಹಿಂದೆ ಬಿದ್ದಿದೆ. ಇತ್ತೀಚಿಗೆ ಸುಪ್ರೀಂಕೋರ್ಟ್ ನಿರ್ದೇಶನದ ಬಳಿಕ ಕಾನೂನಿನ ಜಾರಿ ಬಗ್ಗೆ ದೊಡ್ಡ ಗಂಟಲಲ್ಲಿ ಮಾತನಾಡಿದರೂ, ತಿರಸ್ಕೃತ ಕ್ಲೇಮುಗಳನ್ನು ಪುನರ್ ಪರಿಶೀಲಿಸುವುದಾಗಿ ಹೇಳಿದರೂ, ಫಲಿತಾಂಶ ಶೂನ್ಯ! ಅವೆಲ್ಲಾ ಕೇವಲ ನ್ಯಾಯಾಲಯದ ಕಣ್ಣಿಗೆ ಮಣ್ಣೆರೆಚುವ ಕಸರತ್ತುಗಳು ಎಂಬುದು ಕಂಡು ಬರುತ್ತಿದೆ. ಎಲ್ಲಾ ಅಲೆಮಾರಿ ಜನಾಂಗಗಳಿಗೆ ಭೂಮಿ ನೀಡಲಾಗುವುದು ಎಂಬುದು ಹೇಳಿಕೆ ಪತ್ರಿಕೆಗಳಲ್ಲಿ ಉಳಿದಿದೆ.

ಸುಲಿಗೆಗೆ ಸಿಕ್ಕಿ

ನಮ್ಮ ಕರ್ನಾಟಕದ ಆದಿವಾಸಿಗಳು ಇತರರಂತೆ ತಾವು ನೆಲೆ ನಿಂತ ಪ್ರದೇಶದಲ್ಲೇ ಮನೆ ಇಲ್ಲದವರು, ತುಂಡು ಭೂಮಿಯೂ ಇಲ್ಲ ಮತ್ತು ಕೂಲಿಗಳಾದ ಇವರಿಗೆ ಸ್ವಂತ ಮನೆಯೂ ಇಲ್ಲದೇ ಮಾಲೀಕರು ನೀಡುವ ಲೈನ್ ಮನೆಗಳಲ್ಲಿ ಗುಲಾಮರಂತೆ ಜೀವನ ಪೂರ್ತಿ ಜೀತದಾಳುಗಳಾಗಿ ದುಡಿಯುವ ಸಮೂಹವೇ ಆಗಿರುವ ಇವರಿಗೆಲ್ಲಾ ನಿವೇಶನ ಮತ್ತು ಮನೆ ನಿರ್ಮಾಣ ಕಡ್ಡಾಯ ಆಗಲೇಬೇಕು. ಇದರಲ್ಲಿ ಕೇರಳ ಎಲ್.ಡಿ.ಎಫ್. ಸರಕಾರ ವಹಿಸಿರುವ ಮುತುವರ್ಜಿ ಶ್ಲಾಘನೀಯ. ನಿವೇಶನ ನೀಡಿಕೆ ಮತ್ತು ಮನೆ ನಿರ್ಮಾಣಕ್ಕೆ ಕನಿಷ್ಟ 3 ಲಕ್ಷ (5 ಲಕ್ಷಕ್ಕೂ ಹೆಚ್ಚಳಕ್ಕೆ ಯತ್ನ) ರೂ.ಗಳನ್ನು ನೀಡಿ ಗಟ್ಟಿ ಮುಟ್ಟಾದ ಸಿಮೆಂಟ್ ಮನೆಗಳನ್ನೇ ಉಚಿತವಾಗಿ ನಿರ್ಮಿಸಿ ಕೊಟ್ಟಿದೆ. ಕನಿಷ್ಠ ಒಂದು ಎಕರೆ ಭೂಮಿಯನ್ನೂ ನೀಡಿದೆ.

ನಮ್ಮ ರಾಜ್ಯದಲ್ಲಿ ಬಹುತೇಕ ಆದಿವಾಸಿ – ಬುಡಕಟ್ಟು ಸಮುದಾಯಗಳು ಈಗಿರುವ ಕಾನೂನಿನ ಮೂಲ ಅಂಶಗಳು ನೈಜ ಜಾರಿಯಾಗದೇ ವಂಚನೆಗೊಳಗಾಗುತ್ತಿರುವ ಪ್ರಕರಣಗಳೇ ಅತ್ಯಧಿಕ. ಮುಖ್ಯವಾಗಿ ಉದಾರೀಕರಣ, ಜಾಗತೀಕರಣದ ನೀತಿಗಳು ಸಹ ಈ ಸಮುದಾಯಗಳನ್ನು ನೆಲೆಯಿಂದಲೇ ನಿರ್ನಾಮ ಮಾಡುವ ದಿಕ್ಕಿನಲ್ಲಿವೆ.

ಅಪಾಯದ ನೀತಿಗಳು, ಅನ್ಯಾಯದ ಕ್ರಮಗಳು

ದೇಶದಲ್ಲಿ ಮೋದಿ ಸರಕಾರ ಅಪಾರ ಸಂಪನ್ಮೂಲಗಳಿರುವ ಅರಣ್ಯ ಪ್ರದೇಶಗಳನ್ನು ಖಾಸಗಿ ಬಂಡವಾಳಗಾರರಿಗೆ ಕೊಡ ಮಾಡುತ್ತಿದೆ. ಕಳೆದ ವರ್ಷವೇ ಸುಮಾರು 1.25 ಲಕ್ಷ ಎಕರೆ ಅರಣ್ಯಯ ಭೂಮಿಯನ್ನು ವಿವಿಧ ಕಂಪನಿಗಳಿಗೆ ನೀಡಿದೆ. ಆದಿವಾಸಿಗಳಿಗೆ ಪೂರ್ಣ ಹಕ್ಕು ನೀಡುವ ಸಂವಿಧಾನದ ಷೆಡ್ಯೂಲ್ಡ್ 5 ಮತ್ತು 6 ನ್ನು, ಪಂಚಾಯ್ತಿಗಳ ವಿಸ್ತರಣಾ ಷೆಡ್ಯೂಲ್ಡ್ ಪ್ರದೇಶ– (ಪೇಸಾ–1996) ಕಾಯ್ದೆಯನ್ನು, ಅರಣ್ಯ ಹಕ್ಕುಗಳ ಕಾಯ್ದೆ–2006ನ್ನು ಯಾವುದೇ ಅಳುಕಿಲ್ಲದೇ ನಗ್ನವಾಗಿ ಉಲ್ಲಂಘಿಸಲಾಗುತ್ತಿದೆ. ಬಿಜೆಪಿ ನೇತೃತ್ವದ ಅನೇಕ ರಾಜ್ಯ ಸರಕಾರಗಳು ಆದಿವಾಸಿಗಳನ್ನು ಅವರ ನೆಲೆಗಳಿಂದ ಒಕ್ಕಲೆಬ್ಬಿಸಿ ಹೊರದಬ್ಬಲು ತುದಿಗಾಲ ಮೇಲೆ ಕಾರ್ಯಾಚರಣೆಗೆ ಇಳಿದಿವೆ.

ಅಸ್ಸಾಂ ನಲ್ಲಿ ಈ ಮೇಲಿನ ಕಾಯ್ದೆಗಳನ್ನು ಉಲ್ಲಂಘಿಸಿ ಬಿಟಿಎಡಿ– ಪ್ರದೇಶದಲ್ಲಿ 1,100 ಎಕರೆ ಅರಣ್ಯ ಜಮೀನನ್ನು ಬಾಬಾ ರಾಮದೇವ್‌ಗೆ ಸರಕಾರ ನೀಡಿದೆ. ಜಾರ್ಖಂಡ್‌ನಲ್ಲಿ ಹಿಂದೆ ತ್ಯಾಗ ಬಲಿದಾನಗಳ ಧೀಮಂತ ಹೋರಾಟಗಳ ಬಳಿಕ ಸಂತಾಲರು, ಮುಂಡಾಗಳು ಗಳಿಸಿದ್ದ ಛೋಟಾ ನಾಗ್ಪುರ ಕಾಯ್ದೆ ಮತ್ತು ಸಂತಾಲ ಪರ್ಗಾಣಾ ಕಾಯ್ದೆಗಳನ್ನು ತಿದ್ದುಪಡಿ ಮೂಲಕ ದುರ್ಬಲಗೊಳಿಸಲಾಗುತ್ತಿದೆ. ರಾಂಚಿ ಮಾಸ್ಟರ್ ಪ್ಲಾನ್ ಹೆಸರಿನಲ್ಲಿ ಸಾವಿರಾರು ಆದಿವಾಸಿಗಳನ್ನು ನೂರಾರು ನೆಲೆಗಳ ಹಾಡಿಗಳಿಂದ ಹೊರ ನೂಕಲಾಗುತ್ತಿದೆ. ರಾಂಚಿ ಛತ್ತೀಸ್‌ಘಡ್‌ನಲ್ಲಿ ಸಾವಿರಾರು ಕುಟುಂಬಗಳನ್ನು ಬೀದಿಗೆ ತಳ್ಳಲಾಗಿದೆ. ಅಲ್ಲಿ ಕೊರಬಾ ಮುಂತಾದ ಜಿಲ್ಲೆಗಳಲ್ಲಿ ಶ್ರೀಮಂತ ಅದಿರು ಇದೆ. ಆ ಪ್ರದೇಶಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ನೀಡಲಾಗುತ್ತಿದೆ. ಆಂದ್ರ ಪ್ರದೇಶದ ಅರಕು ಕಣಿವೆ, ಪಡೇರು ಅರಣ್ಯ ಪ್ರದೇಶದಲ್ಲಿ ಹೀಗೆ ಜನರನ್ನು ಹೊರದಬ್ಬಲಾಗುತ್ತಿದೆ. ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ ಮತ್ತಿತರ ಕಡೆ ಇದೇ ಸ್ಥಿತಿ. ಇಲ್ಲಿನ ಆದಿವಾಸಿಗಳು ಅರಣ್ಯದ ಕಿರು ಉತ್ಪನ್ನಗಳನ್ನು ಸಂಗ್ರಹಿಸದಂತೆ ತಡೆಯೊಡ್ಡಲಾಗುತ್ತಿದೆ. ಅಲ್ಲದೇ ನಿರ್ವಸತಿದಾರ ಸಂತ್ರಸ್ತರಿಗೆ ಕಾನೂನಾತ್ಮಕ ಸೂಚಿತ ಪರಿಹಾರವೂ ಇಲ್ಲವಾಗಿದೆ.

ನರಳಿಕೆ ಸಾಕಿನ್ನು

ಈ ಎಲ್ಲಾ ಹಿನ್ನೆಯಲ್ಲಿಯೂ ರಾಜ್ಯದಲ್ಲಿ ಆದಿವಾಸಿ ಬುಡಕಟ್ಟು ಸಮುದಾಯಗಳ ಭೂಮಿ, ನಿವೇಶನ ಮತ್ತು ಅರಣ್ಯ ಕಾಯ್ದೆ ಹಕ್ಕುಗಳನ್ನು ಪಡೆಯಲು ಜಾಗೃತರಾಗಿ ಹೋರಾಟಕ್ಕೆ ಇಳಿಯುವುದು ಅನಿವಾರ್ಯ, ಇವಲ್ಲದೇ ಬಹುತೇಕ ಬುಡಕಟ್ಟು ಸಮುದಾಯಗಳು ವಾಸಿಸುವ ಪ್ರದೇಶಗಳು ನೀರು, ರಸ್ತೆ, ವಿದ್ಯುತ್, ರೇಷನ್ – ರೇಷನ್ ಕಾರ್ಡ್, ಆರೋಗ್ಯ ವ್ಯವಸ್ಥೆ, ವಾಹನ ಸಂಪರ್ಕಗಳು ಇಲ್ಲದೇ ಕನಿಷ್ಟ ನಾಗರೀಕ ಸೌಲಭ್ಯಗಳೇ ಇಲ್ಲದೇ ನರಳುವಂತಹವು.

ಆದ್ದರಿಂದ ಇದೇ 2016ರ ನವೆಂಬರ್ 18ರಂದು ಕರ್ನಾಟಕದಾದ್ಯಂತ ನಡೆಯುತ್ತಿರುವ 'ಸಾಮೂಹಿಕ ಜೈಲ್‌ಭರೋ' ಚಳುವಳಿಯಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಆದಿವಾಸಿ ಬುಡಕಟ್ಟು ಸಮುದಾಯಗಳೂ ಭಾಗವಹಿಸಲು ನಿರ್ಧರಿಸಿದ್ದಾರೆ. ರಾಜ್ಯದ ವಿವಿಧ ಕಡೆ ಸಮಾವೇಶ, ಪ್ರತಿಭಟನೆ, ಕಾರ್ಯಕ್ರಮ ಹಮ್ಮಿಕೊಂಡಿವೆ.

ತೊಗರಿಗೆ ರೂ.7,500 ಬೆಂಬಲ ಬೆಲೆ ಘೋಷಿಸಿ: ಮಾನ್ವಡೆ

ಸ್ವಾಮಿನಾಥನ್ ವರದಿಯಂತೆ ಪ್ರತಿಕ್ವಿಂಟಲ್ ತೊಗರಿ ಬೆಂಬಲ ಬೆಲೆಯನ್ನು ರೂ.7,500 ಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಒತ್ತಾಯಿಸಿದರು.

ಕಲಬುರ್ಗಿ ನಗರದ ಎಚ್‌ಕೆಸಿಸಿಐ ಸಭಾಂಗಣದಲ್ಲಿ 'ತೊಗರಿ ಬೆಳೆಗಾರರ ಸಮಸ್ಯೆಗಳು ಮತ್ತು ಪರಿಹಾರದ ಮರ್ಗಗಳು' ಕುರಿತು ಚರ್ಚಿಸಲು ಕರ್ನಾಟಕ ಪ್ರಾಂತ ರೈತ ಸಂಘವು ಅಕ್ಟೋಬರ್ 24 ರಂದು ಏರ್ಪಡಿಸಿದ್ದ ರಾಜ್ಯ ಮಟ್ಟದ ರೈತರ ಸಭೆಯಲ್ಲಿ ಮಾತನಾಡಿದರು.

ಬೆಳೆಗಳ ಉತ್ಪಾದನಾ ವೆಚ್ಚ ಆಧರಿಸಿ 1.5 ಪಟ್ಟು ಬೆಂಬಲ ಬೆಲೆ ಘೋಷಿಸಬೇಕು ಎಂದು ಸ್ವಾಮಿನಾಥನ್ ಅವರು ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಒಂದು ಕ್ವಿಂಟಲ್ ತೊಗರಿ ಬೆಳೆಯುವುದಕ್ಕೆ ರೂ.5 ಸಾವಿರ ಖರ್ಚಾಗುತ್ತದೆ. ಕೇಂದ್ರ ಸರ್ಕಾರವು ಕೂಡಲೇ ನ್ಯಾಯ ಸಮ್ಮತ ಬೆಂಬಲ ಬೆಲೆ ಘೋಷಿಸಬೇಕು ಎಂದು ಒತ್ತಾಯಿಸಿದರು.

ವಿಜಯಪುರ, ಕಲಬುರ್ಗಿ, ರಾಯಚೂರು ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಈ ವರ್ಷ ಅತಿಹೆಚ್ಚು ತೊಗರಿ ಬೆಳೆಯಲಾಗಿದೆ. ಕಳೆದ ವರ್ಷ ಹತ್ತಿ ಬೆಳೆದಿದ್ದ ಜೇವರ್ಗಿ ಹಾಗೂ ರಾಯಚೂರಿನ ಬಹುತೇಕ ರೈತರೆಲ್ಲ ತೊಗರಿ ಬೆಳೆದಿದ್ದಾರೆ. ಆದ-ರೆ ತೊಗರಿ ದರವು ಕಡಿಮೆಯಾಗುತ್ತಿದೆ. ತೊಗರಿ ಹೆಚ್ಚು ಬೆಳೆದಿದ್ದರಿಂದ ದರ ಕುಸಿಯುತ್ತಿಲ್ಲ. ಕೇಂದ್ರ ಸರ್ಕಾರವು ಮೊಜಾಂಬಿಕಾ ದೇಶದಿಂದ ತೊಗರಿ ಆಮದು ಮಾಡಿಕೊಳ್ಳುತ್ತಿರುವುದರಿಂದ ದರ ಕುಸಿಯುತ್ತಿದೆ. ರೈತರ ಹಿತ ಗಮನದಲ್ಲಿಟ್ಟುಕೊಂಡು ಕೂಡಲೇ ಆಮದು ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದರು. ರೈತರ ಆದಾಯವನ್ನು ಎರಡು ಪಟ್ಟು ಹೆಚ್ಚಳ ಮಾಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆರಂಭದಲ್ಲಿ ಹೇಳಿದ್ದರು. ಅಧಿಕಾರಕ್ಕೆ ಬಂದ ಮೇಲೆ ಮರೆತರು. ಹೀಗಾಗಿ ಸ್ವಾಮಿನಾಥನ್ ವರದಿ ಜಾರಿಗೊಳಿಸುವಂತೆ ರೈತ ಮುಖಂಡರೊಬ್ಬರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಕೋರ್ಟ್ ವರದಿ ಕೇಳಿತ್ತು. ಕೃಷಿ ಸಚಿವ ರಾಧಾಮೋಹನ್‌ಸಿಂಗ್ ಅವರು ವರದಿ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಉತ್ತರ ನೀಡಿದ್ದಾರೆ. ಈ ಮೂಲಕ ಕೃಷಿ ಹಾಗೂ ಕೃಷಿಕರನ್ನು ಹಾಳು ಮಾಡಲು ಸರ್ಕಾರ ಸಜ್ಜಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸದ್ಯಕ್ಕೆ ಕೇಂದ್ರವು ತೊಗರಿಗೆ ರೂ.4,625 ಬೆಂಬಲ ಬೆಲೆ ಘೋಷಿಸಿದೆ. ಅದಕ್ಕೆ ರೂ.425 ಬೋನಸ್ ಸೇರಿಸಲಾಗುವುದು ಎಂದು ಹೇಳಿದ್ದಾರೆ. ಹೀಗಾಗಿ ತೊಗರಿಗೆ ಬೆಂಬಲ ಬೆಲೆ ಕ್ವಿಂಟಲ್‌ಗೆ ರೂ.5,050 ರಷ್ಟಿದೆ. ಒಂದು ಕ್ವಿಂಟಲ್ ತೊಗರಿ ಉತ್ಪಾದನಾ ವೆಚ್ಚ ರೂ.5000, ಅದಕ್ಕೆ ರೂ. 50 ಮಾತ್ರ ಹೆಚ್ಚಳ ಸೇರಿಸಲಾಗಿದೆ. ರೈತರು ಒಗ್ಗಟ್ಟಾಗಿ ಹೋರಾಟ ಆರಂಭಿಸದಿದ್ದರೆ ಸರ್ಕಾರ ಕಣ್ಣು ತೆರೆಯುವುದಿಲ್ಲ ಎಂದು ಹೇಳಿದರು.

ಶಿವರಾಜ ಮಲ್ಕಪ್ಪಗೋಳ, ಸಿದ್ಧಲಿಂಗಯ್ಯ ಸ್ವಾಮಿ, ಗೌರಮ್ಮ ಪಾಟೀಲ್, ಶರಣ ಬಸಪ್ಪ ಮಮಶೆಟ್ಟಿ ವೇದಿಕೆಯಲ್ಲಿದ್ದರು.

ತಾರತಮ್ಯ ಮಾಡುವವರು ಮಾನವೀಯತೆಯ ಶತ್ರುಗಳು

ಉಡುಪಿ ಜಿಲ್ಲಾ ಕೃಷಿ ಕೂಲಿಕಾರರ ಸಂಘದ ಸಮ್ಮೇಳನದಲ್ಲಿ ನಿತ್ಯಾನಂದಸ್ವಾಮಿ

ಬುದ್ಧಿವಂತರ ಜಿಲ್ಲೆ ಎನಿಸಿರುವ ಉಡುಪಿ ಜಾತಿ, ವಿಚಾರದಲ್ಲಿ ಇನ್ನು ಅನಿಷ್ಠ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಸಾರ್ವಜನಿಕ ಸ್ಥಳದಲ್ಲಿ ಪಂಕ್ತಿ, ಪ್ರಸಾದ ವಿತರಣೆ ವಿಚಾರದಲ್ಲಿ ಜಾತಿ ತಾರತಮ್ಯ ಮಾಡಬಾರದು. ಈ ರೀತಿ ಧರ್ಮ, ಜಾತಿ ತಾರತಮ್ಯ ಮಾಡುವವರು ಮಾನವೀಯತೆಯ ಶತ್ರುಗಳು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದ ಸ್ವಾಮಿ ಆರೋಪಿಸಿದ್ದಾರೆ.

ಅಕ್ಟೋಬರ್ 23ರಂದು ಉಡುಪಿಯ ಸಾಯಿ ರೆಸಿಡೆನ್ಸಿ ಹೋಟೇಲ್ ಸಭಾಂಗಣದಲ್ಲಿ ನಡೆದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು)ದ ಉಡುಪಿ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಧರ್ಮ, ಜಾತಿ ಆಧಾರದಲ್ಲಿ ದೇಶವು ಇಂದು ಇಡೀ ಜಗತ್ತಿನ ಎದುರು ತಲೆತಗ್ಗಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಾರ್ವಜನಿಕ ಸ್ಥಳ ಮತ ಮಂದಿರಗಳಲ್ಲಿ ಜಾತಿ ತಾರತಮ್ಯ ಮಾಡದೇ ಎಲ್ಲರಿಗೂ ಸಮಾನ ಅವಕಾಶ ನೀಡಬೇಕು. ನಮ್ಮಲ್ಲಿ ಧರ್ಮದ ವ್ಯತ್ಯಾಸಗಳಿದ್ದರೂ ಅದನ್ನು ತಮ್ಮ ತಮ್ಮ ಮನೆಗಳಲ್ಲಿ ಮಾಡಿಕೊಳ್ಳಬೇಕು. ಧರ್ಮದ ವಿಚಾರದಲ್ಲಿ ಗಲಭೆ ಸೃಷ್ಟಿಸುವವರ ಬಗ್ಗೆ ಜಾಗರೂಕರಾಗಿರಬೇಕಿದೆ ಎಂದರು.



ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಿರ್ನಾಮ ಮಾಡಲು ಬಿಜೆಪಿ ಹಾಗೂ ಕಾಂಗ್ರೆಸ್ ಸರಕಾರಗಳು ಯತ್ನಿಸುತ್ತಿದ್ದು, ಈ ಯೋಜನೆಗೆ ಅಗತ್ಯ ಹಣಕಾಸು ನೀಡುವ ಬದಲು ಅನುದಾನವನ್ನೇ ಕಡಿತ ಮಾಡಲಾಗುತ್ತಿದೆ. ಜನಪರ ಕಾನೂನುಗಳನ್ನು ಜಾರಿಗೊಳಿಸದೆ ಸರಕಾರಗಳೇ ಕಾನೂನು ಉಲ್ಲಂಘನೆ ಮಾಡುತ್ತಿದೆ. ಭೂಮಿ ಇಲ್ಲದವರಿಗೆ ಭೂಮಿ ಕೊಡುವ ಬದಲು ಭೂಮಿ ಇದ್ದವರಿಗೆ ಭೂಮಿ ಸಿಗುವಂತಹ ಕಾನೂನು ಬದಲಾವಣೆ ಮಾಡುತ್ತಿದೆ. ಈ ಎಲ್ಲಾ ಧೋರಣೆಗಳ ವಿರುದ್ಧ ಬೃಹತ್ ಆಂದೋಲನ ಕಟ್ಟುವ ಅಗತ್ಯ ಎದುರಾಗಿದೆ ಎಂದವರು ಹೇಳಿದರು.

ಪಡಿತರ ಪಡೆಯುವುದು ಪ್ರತಿಯೊಬ್ಬ ಪ್ರಜೆ-ಯ ಹಕ್ಕು. ಹಾಗಾಗಿ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸುವುದು ಅಗತ್ಯವಿಲ್ಲ. ಅಧಿಕಾರಿಗಳಿಗೆ ಪಡಿತರ ಚೀಟಿ ಇಲ್ಲದವರನ್ನು ಗುರುತಿಸಿ ಅವರ ಮನೆಗೆ ತೆರಳಿ ನೀಡುವ ಕಾರ್ಯವಾಗಬೇಕು. ಇಲ್ಲದಿದ್ದರೆ ಇದು ಪ್ರಜಾಪ್ರಭುತ್ವ ಅಲ್ಲ. ಇನ್ನೂ ಕೂಡ ದೇಶದಲ್ಲಿ ಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲ. ಆರ್ಥಿಕ ಸ್ವಾತಂತ್ರ್ಯ ನಮಗೆ ಬಂದೇ ಇಲ್ಲ ಎಂದವರು ಟೀಕಿಸಿದರು.

1990 ರ ನಂತರ ಸುಧಾರಣೆ ಹೆಸರಿನಲ್ಲಿ ಸರಕಾರಗಳು ಜಾರಿಗೆ ತಂದ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ನೀತಿಗಳಿಂದ ಕೃಷಿ ಹಾಗೂ ಕೃಷಿ ಕೂಲಿಕಾರರ ಬದುಕು ಜರ್ಜರಿತವಾಗಿದೆ. ಈ ಮೂಲಕ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೂ ಕೃಷಿಯನ್ನು ತೊರೆದು ನಗರಕ್ಕೆ ವಲಸೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ. ಇದರ ಪರಿಣಾಮವಾಗಿ ರೈತರ ಬದುಕಿನಲ್ಲಿ ಅನಿಶ್ಚಿತತೆ ಕಾಡುತ್ತಿದೆ ಎಂದವರು ಅಸಮಾಧಾನ ವ್ಯಕ್ತಪಡಿಸಿದ್ದರು.

ಸಂಘದ ಜಿಲ್ಲಾಧ್ಯಕ್ಷ ಯು.ದಾಸಭಂಡಾರಿ ಸಮ್ಮೇಳನದ ಆರಂಭದಲ್ಲಿ ಧ್ವಜಾರೋಹಣ ಮಾಡಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಕಳೆದ 3 ವರ್ಷಗಳ ಚಟುವಟಿಕೆಯ ಕರಡು ವರದಿಯನ್ನು ಮಂಡಿಸಿದ್ದರು. ಸಿಐಟಿಯು ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ ಪ್ರಧಾನ ಕಾರ್ಯದರ್ಶಿ ಕೆ.ಶಂಕರ, ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಎಚ್.ವಿಠಲ ಪೂಜಾರಿ, ರವಿರಾಜ ಎಸ್. ಉಡುಪಿ, ಕಾರ್ಕಳದ ಪದ್ಮಬೆಳ್ಮಣ್, ದಾಮೋದರ, ನಾಗರತ್ನ ನಾಡ, ರಾಜೀವ ಪಡು-ಕೋಣೆ, ಉಪಸ್ಥಿತರಿದ್ದರು.

ನವಂಬರ 18ರ ರಾಜ್ಯ ವ್ಯಾಪಿ ನಿವೇಶನ ರಹಿತರ ಭೂಮಿ ಹಕ್ಕಿನ ಜೈಲ್‌ಬರೋ – ಬಂಧನಕ್ಕೊಳಕ್ಕಾಗುವ ಹೋರಾಟವನ್ನು ಉಡುಪಿ ಜಿಲ್ಲೆಯಲ್ಲೂ ಯಶಸ್ವಿಗೊಳಿಸುವುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಸಮರ್ಪಕ ಜಾರಿಗೆ, ಬೆಲೆ ಏರಿಕೆ ವಿರೋಧಿಸಿ, ಹಾಗೂ ಮನೆ ನಿವೇಶನ ರಹಿತರಿಗೆ ಭೂಮಿ ಹಕ್ಕು ಪತ್ರ ವಿತರಣೆಗೆ ಒತ್ತಾಯಿಸಿ, ಸಮ್ಮೇಳನದಲ್ಲಿ ಠರಾವು ಮಂಡಿಸಲಾಯಿತು.

ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿಗೆ ನೂತನ ಅಧ್ಯಕ್ಷರಾಗಿ ಯು.ದಾಸಭಂಡಾರಿ, ಪ್ರಧಾನ ಕಾರ್ಯದರ್ಶಿಯಾಗಿ ವೆಂಕಟೇಶ ಕೋಣಿ, ಕೋಶಾಧಿಕಾರಿಯಾಗಿ ರವಿರಾಜ್ ಎಸ್. ಉಡುಪಿ ಇವರನ್ನು ಒಳಗೊಂಡಂತೆ 25 ಮಂದಿ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಯಿತು.

ವರದಿ : ವೆಂಕಟೇಶ ಕೋಣಿ

ಮಾದಕ ವಸ್ತುಗಳ ವಿರುದ್ಧ ಜನಜಾಗೃತಿ ಕಾರ್ಯಕ್ರಮ

ಮಂಗಳೂರು ಉಳ್ಳಾಲ ಕ್ಷೇತ್ರದ ಮುನ್ನೂರು ಗ್ರಾಮ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಗಾಂಜಾ, ಅಫೀಮು ಇತರ ಮಾದಕ ವಸ್ತುಗಳ ಸೇವನೆಯ ವಿರುದ್ಧ ಡಿವೈಎಫ್ಐ ಸಂಘಟನೆ ನೇತೃತ್ವದಲ್ಲಿ ಅಕ್ಟೋಬರ್ 23ರಂದು ಕಾರ್ಯಕ್ರಮ ನಡೆಸಲಾಯಿತು. ಡಿವೈಎಫ್ಐ ಜಿಲ್ಲಾಧ್ಯಕ್ಷರು ಹಾಗೂ ಮಂಗಳೂರು ನಗರ ಪಾಲಿಕೆ ಸದಸ್ಯರಾದ ದಯಾನಂದ ಶೆಟ್ಟಿರವರು ಗ್ರಾಮದ ಕುತ್ತಾರ್ ಜಂಕ್ಷನ್‌ನಲ್ಲಿ ಜಾಥಾವನ್ನು ಶ್ವೇತ ಪತಾಕೆಯನ್ನು ಗ್ರಾಮ ಸಂಚಾಲಕರಿಗೆ ಹಸ್ತಾಂತರಿಸುವ ಮೂಲಕ ಚಾಲನೆ ನೀಡಿದರು.

ದಯಾನಂದ ಶೆಟ್ಟಿರವರು ಮಾತನಾಡಿ "ಜಿಲ್ಲೆಯಲ್ಲಿ ಆಗಾಗ ನಡೆಯುವ ಕೋಮುಗಲಭೆ, ಅಪರಾಧ ಪ್ರಕರಣ, ಅಶಾಂತಿ ಸೃಷ್ಟಿಯ ಹಿಂದೆ ನಿಷೇಧಿತ ಮಾದಕ ವಸ್ತುಗಳ ಕೈವಾಡವಿದೆ. ಇದನ್ನು ತಡೆಯಬೇಕಾದರೆ ಜನರ ಮನಪರಿವರ್ತನೆ ಮಾಡುವ ಕಾರ್ಯಕ್ರಮಗಳು ಆಯೋಜಿಸಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಉಳ್ಳಾಲ ಪೊಲೀಸ್ ಠಾಣೆಯ ನಿರೀಕ್ಷರಾದ ಶಿವಪ್ರಕಾಶ್ ಮಾದಕ ವ್ಯಸನ ಮಟ್ಟಹಾಕುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆ, ಗ್ರಾಮಗಳಲ್ಲಿ ಈ ರೀತಿಯ ಜಾಗೃತಿ ಕಾರ್ಯಕ್ರಮಗಳು ಅವಶ್ಯಕ ಎಂದು ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿ ಸುದೇಶ್ ದೇರೆಬೈಲ್, ಕಾರ್ಮಿಕ ಮುಖಂಡರಾದ ಕೃಷ್ಣಪ್ಪ ಸಾಲ್ಯಾನ್, ಡಿವೈಎಫ್ಐ ವಲಯ ಅಧ್ಯಕ್ಷರಾದ ಅಶೋಕ್ ಶೆಟ್ಟಿ ಚೆಂಬುಗುಡ್ಡೆ, ಕಾರ್ಯದರ್ಶಿ ಜೀವನ್ ರಾಜ್ ಕುತ್ತಾರ್, ಎಸ್ಎಫ್ಐ ಜಿಲ್ಲಾಧ್ಯಕ್ಷರಾದ ನಿತಿನ್ ಕುತ್ತಾರ್, ರಫೀಕ್ ಹರೇಕಳ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬೀದಿನಾಟಕವನ್ನು ಮುರಾರಿ ಕಾಸರಗೋಡು ನಿರ್ದೇಶಿಸಿದ್ದು, ಪ್ರಥಮ ಪ್ರಯೋಗವಾಗಿರುವ ನಾಟಕವನ್ನು ಸೌಹಾರ್ದ ಕಲಾವಿದ ಸದಸ್ಯರಾದ ಉದಯ್ ಮದಕ, ಸಂಕೇತ್ ಕುತ್ತಾರ್, ವಿಕಾಸ್, ಲಿಮಿತ, ಕಾವ್ಯ, ಮಯೂರಿ, ಮನೀಷ್, ಗೌತಮ್, ಸುಶಾಂತ್, ವಿವೇಕ್ ನಟಿಸಿದ್ದು, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಸುಮಾರು 50ಕ್ಕೂ ಹೆಚ್ಚಿನ ಬೈಕ್ ರ‍್ಯಾಲಿ ಮೂಲಕ ಮುನ್ನೂರು ಗ್ರಾಮದ ಕುತ್ತಾರ್, ಸುಭಾಸ್ ನಗರ, ರಾಣಿಪುರ, ದೆರೋಡಿ, ಸಂತೋಷ್ ನಗರ, ಪಂಡಿತ್ ಹೌಸ್, ಮದನಿ ನಗರ, ಯೆನೆಪೋಯ ಸಾಗಿ ಕೊನೆಗೆ ತೇವುಲ ಪ್ರದೇಶದಲ್ಲಿ ಸಮಾರೋಪವಾಯಿತು.

ಸಮಾರೋಪ ಸಮಾರಂಭದಲ್ಲಿ ಡಿವೈಎಫ್ಐ ಜಿಲ್ಲಾ ಉಪಾಧ್ಯಕ್ಷರಾದ ಬಿ.ಕೆ.ಇಮ್ತಿಯಾಜ್ ಕಾರ್ಯಕ್ರಮದ ಬಗ್ಗೆ ಮುಚ್ಚುಗೆ ವ್ಯಕ್ತಪಡಿಸಿದರು. ಜಾಥಾ ಸಂಚಾಲಕರಾದ ಸುನೀಲ್ ತೇವುಲ, ಸಹಸಂಚಾಲಕರಾದ ಭರತ್ ರಾಜ್ ಕೆ., ಸುರೇಶ್ ಪೂಜಾರಿ ತಳೆನೀರು ನೇತೃತ್ವ ವಹಿಸಿದ್ದರು. ಕಾರ್ಮಿಕ ಮುಖಂಡರಾದ ಜನಾರ್ಧನ್ ಕುತ್ತಾರ್ ಮತ್ತು ಸಂಘದ ಮುಖಂಡರಾಧ ಮಹಾಬಲ ಟಿ., ಚಂದ್ರಹಾಸ, ಮಿಥುನ್ ರಾಜ್, ದೀಕ್ಷಿತ್ ತೇವುಲ, ಗಣೇಶ್ ತಲೆನೀರು, ಯೋಗೀಶ್, ಶರತ್, ಅಶ್ವಿತ್, ಕಾರ್ತಿಕ ದೇಸೋಡಿ, ಶ್ರಾವಣ್, ದಿವ್ಯಾನ್, ಅಭಿಷೇಕ್ ಗಾಣದಮನೆ, ಅವಿನಾಶ್ ಮತ್ತಿತರರು ಉಪಸ್ಥಿತರಿದ್ದರು.



ವರದಿ : ಜೀವನ್ ರಾಜ್ ಕುತ್ತಾರ್

ಕಾ॥ಚನ್ನಪ್ಪ ಭವನಕ್ಕೆ ಅಡಿಗಲ್ಲು ಸಮಾರಂಭ



ತುಮಕೂರಿನಲ್ಲಿ ಜನ ಚಳುವಳಿಯ ಕೇಂದ್ರವನ್ನಾಗಿ ಬಳಸಿಕೊಳ್ಳಲು ಕಾ. ಹೆಚ್.ಸಿ.ಚನ್ನಪ್ಪ ಭವನ ನಿರ್ಮಾಣಕ್ಕೆ ಅಕ್ಟೋಬರ್ 25ರಂದು ಚಾಲನೆ ನೀಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟಿದ ಕೆ.ಆರ್.ನಾಯಕ್, ಮತ್ತು ಅವರ ಒಡನಾಡಿಗಳಾಗಿ ಶ್ರಮಿಸಿದ ಕಾರ್ಮಿಕ ನಾಯಕ ಮಹಮ್ಮದ್ ದಸ್ತಗೀರ್ ಮತ್ತು ಹೆಚ್.ಸಿ.ಚನ್ನಪ್ಪನವರು ಆದರ್ಶವಾಗಿದ್ದವರು. ದಶಕಗಳ ಕಾಲ ಕಾರ್ಮಿಕರು, ರೈತರು, ಕೃಷಿಕೂಲಿಕಾರರ ಪರವಾಗಿ ನಿರಂತರವಾಗಿ ಚಳುವಳಿಯನ್ನು ಮುನ್ನಡೆಸಿದ ಕೀರ್ತಿ ಚನ್ನಪ್ಪನವರಿಗೆ ಸಲ್ಲುತ್ತದೆ.

ತುಮಕೂರಿನ ಗಾಂಧಿನಗರದ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಅಡಿಗಲ್ಲು ಸಮಾರಂಭದಲ್ಲಿ ನಿವೃತ್ತ ನ್ಯಾಯಾಧೀಶರಾದ ಟಿ.ಜಿ.ಮರಿಯಪ್ಪ, ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್.ರೇವಣ್ಣ, ವಿಜ್ಞಾನ ಲೇಖಕ ಡಾ. ಹೆಚ್.ಎಸ್.ನಿರಂಜನಾರಾಧ್ಯ, ಹಿರಿಯ ವಕೀಲ ಬಿ.ಡಿ.ರಾಮಯ್ಯ, ರಾಜೇಂದ್ರ ನಾಯಕ್, ಪ್ರೊ.ಜಿ.ಎಂ.ಶ್ರೀನಿವಾಸಯ್ಯ, ಹಿರಿಯ ಕಾರ್ಮಿಕ ಮುಖಂಡರಾದ ಕೋದಂಡರಾಮ್, ನಿವೃತ್ತ ಅಭಿಯಂತರರಾದ ಪುಟ್ಟಯ್ಯ, ಪ್ರೋ ಕೆ.ದೊರೈರಾಜ್, ಈ.ಬಸವರಾಜು, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಮತ್ತಿತರ ಮುಖಂಡರು ಮತ್ತು ಅಪಾರ ಅಭಿಮಾನಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷರಾದ ಬಿ.ಉಮೇಶ್ ಆಡಿದರು. ಸ್ವಾಗತ ಎನ್.ಕೆ.ಸುಬ್ರಮಣ್ಯ ಮತ್ತು ವಂದನಾರ್ಪಣೆ ನೌಷಾದ್ ಸೆಹಗನ್ ಮಾಡಿದರು.

ಈ ವಾರ ಚರಿತ್ರೆಯಲ್ಲಿ

3 ನವೆಂಬರ್ 1980

ಡಿ.ವೈ.ಎಫ್.ಐ. ಸ್ಥಾಪನಾ ದಿನ

1980 ನವೆಂಬರ್ 3 ಪಂಜಾಬಿನ ಲೂದಿಯಾನದಲ್ಲಿ ಭಾರತದ ಎಲ್ಲಾ ರಾಜ್ಯಗಳ ಯುವಜನ ಚಳುವಳಿಗಳ ಸಮಾವೇಶ ನಡೆದು ಡಿ.ವೈ.ಎಫ್.ಐ (ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್) ಸ್ಥಾಪನೆಯಾಯಿತು. ಭಗತ್ ಸಿಂಗ್ ಜೊತೆಗಾರರಾಗಿದ್ದ ಹಾಗೂ ದಶಕಗಳ ಕಾಲ ಜೈಲು ಅನುಭವಿಸಿದ ಅಂದಿಗೆ ಎಂಬತ್ತು ವರ್ಷ ಪೂರೈಸಿದ ಸಂಗಾತಿ ಕಿಶೋರಿಲಾಲ್ ಶುಭಾಶಯ ಸಲ್ಲಿಸಿದರು. ಡಿ.ವೈ.ಎಫ್.ಐ. ಗೆ ಈಗ 36 ರ ಹರೆಯ. ಕೋಮುವಾದ, ಪ್ರತ್ಯೇಕತಾವಾದದ ವಿರುದ್ಧ, ಯುವಜನರ ಉದ್ಯೋಗದ ಹಕ್ಕಿಗಾಗಿ ಅಪಾರ ತ್ಯಾಗ-ಬಲಿದಾನ ಇತ್ತು ಹೋರಾಡುತ್ತಿದೆ. ಆ ಮೂಲಕ ದೇಶದ ಅತಿ ದೊಡ್ಡ ಯುವಜನ ಸಂಘಟನೆಯಾಗಿ ಹೊಮ್ಮಿದೆ,

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಉಡುಪಿ ಚಲೋ, ಮುಂದೇನು?



ನಮ್ಮ ಕೊಳಕುಮಂಡಲ ಮಾಧ್ಯಮಗಳಿಂದಾಗಿ ಇಡೀ ಉಡುಪಿ ಚಲೋ ಕಾರ್ಯಕ್ರಮವನ್ನು ಪೇಜಾವರರೊಂದಿಗೆ ಸಂವಾದವನ್ನಾಗಿ ಮಾಡಿಬಿಡಲಾಗಿದೆ. ಅಥವಾ ಶುದ್ಧೀಕರಣದ ಬಗ್ಗೆ ವಿವಾದವನ್ನಾಗಿಸಲಾಗಿದೆ. ಇದೆಲ್ಲದರಲ್ಲಿ ನಾವು ನಮ್ಮ ಶಕ್ತಿಯನ್ನು ವ್ಯಯಮಾಡುವುದು ಬೇಡ. ಹೊಸದಾಗಿ ಮೂಡಿದ ದಲಿತ ಪ್ರಜ್ಞೆಯು ಮೂರ್ತವಾದ ಒಳ್ಳೆಯ ರಾಜಕೀಯ ಕಾರ್ಯಕ್ರಮಗಳಿಂದ ಮಾತ್ರ ಗಟ್ಟಿಯಾಗಿ ಬೆಳೆಯಬಲ್ಲದು.

ಅರವತ್ತರ ಆಸುಪಾಸಿನ ನಮ್ಮಂಥವರಿಗೆ ಯಾರೋ ಮರುಜೀವಣಿಯಿಂದ ಮತ್ತೊಂದು ಜನ್ಮ ಕೊಟ್ಟಂತಾಗಿತ್ತು. ಉಡುಪಿ ಚಲೋ ಕಾರ್ಯಕ್ರಮದ ಭಾಗವಾಗಿ ಆ ಊರಿನ ಬೀದಿಗಳಲ್ಲಿ ಏರು ಬಿಸಿಲಿನಲ್ಲಿ ಮೆರವಣಿಗೆಯಲ್ಲಿ ನಡೆಯುವುದೆಂದರೆ ಎಲ್ಲೋ ಹೊಸ ಮನ್ವಂತರಕ್ಕೆ ಹೆಜ್ಜೆ ಇಡುತ್ತಿದ್ದೇವೆ ಅನ್ನಿಸಿತು. ನಂತರದ ಸಮಾವೇಶದಲ್ಲಿ ಎಲ್ಲರಲ್ಲೂ ಒಂದು ಹೊಸ ಆಸೆ, ಭರವಸೆ ಮತ್ತು ಹುಮ್ಮಸ್ಸು. ಕಾರಣವಿಷ್ಟೆ. ಅದು ಅಪ್ಪಟ ಯುವಶಕ್ತಿಯ ಕಾರ್ಯಕ್ರಮವಾಗಿತ್ತು. ಕಾರ್ಯಕ್ರಮವನ್ನು ಯೋಜಿಸಿದವರು, ರೂಪಿಸಿದವರು, ನಡೆಸಿದವರು ಹಾಗೂ ಅಂದು ವೇದಿಕೆಯಲ್ಲಿ ಮಾತನಾಡಿದವರು ಮುಖ್ಯವಾಗಿ ಮೂಲತಃ ಯುವಕರೇ ಆಗಿದ್ದರು. ಹೊಸದಾದ ದಲಿತ ಪ್ರಜ್ಞೆಯೊಂದು ಈ ದೇಶದಲ್ಲಿ ಹುಟ್ಟಿಕೊಂಡಿದೆ. ರೋಹಿತ ವೇಮುಲ, ಜೆ.ಎನ್.ಯು. ವಿದ್ಯಾರ್ಥಿಗಳು ಸಾಮಾಜಿಕ ತಾಣದಲ್ಲಿ ಬಲಪಂಥೀಯರೊಂದಿಗೆ ಮಹಾಯುದ್ಧದಲ್ಲಿಯೇ ತೊಡಗಿರುವವರು, ಅಂಬೇಡ್ಕರ್‌ರಲ್ಲಿ ಇಂದಿನ ಜಗತ್ತಿನ ಸಮಸ್ಯೆಗಳಿಗೆ ಉತ್ತರ ಹುಡುಕುತ್ತಿರುವವರು ಇವರೆಲ್ಲ ಈ ಹೊಸ ದಲಿತ ಪ್ರಜ್ಞೆಯ ಹರಿಕಾರರು. ಹೊಸ ಚಿಂತನೆ, ಹೊಸ ಪರಿಭಾಷೆ ಪ್ರಾಮಾಣಿಕತೆ ಇವುಗಳು ಯಾವೂ ಇಲ್ಲದೆಯೇ ಬರಿ ತೌಡು ಕುಟ್ಟುತ್ತಿರುವ ಹಳೆಯ ತಲೆಮಾರಿನ ದಲಿತ ನಾಯಕರು ಈಗ ಒಣಗಿದ ಎಲೆಗಳಂತೆ ಕಳಸಿಹೋಗುತ್ತಿರುವುದು ಆರೋಗ್ಯಕರವಾದ ಸಂಗತಿಯಾಗಿದೆ. ಅವರು ಕ್ರಾಂತಿಕಾರಿಗಳ ಬದಲಾಗಿ ಕೋಡಂಗಿಗಳಾಗಿ ಕಾಣುತ್ತಿದ್ದಾರೆ. ಪೇಜಾವರರಿಗೆ ಸಾಷ್ಟಾಂಗ ಬೀಳುವ ಕ್ರಾಂತಿಕಾರಿ ದಲಿತ ಕವಿ, ಎಡ ಬಲಗಳ ತಿರುಗಣೆಯಲ್ಲಿ ಬಿದ್ದಿರುವ ಮಾಜಿ ದಲಿತ ಬರಹಗಾರರು, ಅಂದಿನ ಕಾಲದ ದಲಿತ ಚಳುವಳಿಯ ಹ್ಯಾಂಗ್ ಓವರ್‌ನಲ್ಲಿಯೇ ಇರುವ ಮಂದಿ ಇವರನ್ನೆಲ್ಲಾ ಗುಡಿಸಿ ಸಾರಿಸಿ ಆಚೆಗೆ ತಳ್ಳುವ ಶಕ್ತಿ ಈ ಹೊಸ ಪ್ರಜ್ಞೆಯ ಯುವಶಕ್ತಿಗೆ ಇದೆ. ಇದರ ಸಂಕೇತವಾಗಿ ಹಿಂದುತ್ವದ ಪ್ರಯೋಗಾಲಯವೆಂದು ಕುಖ್ಯಾತವಾದ ಗುಜರಾತ್ ರಾಜ್ಯದ ಸರಕಾರವನ್ನು ಮಂಡಿ ಊರಿಸಿದ ಜಿಗ್ನೇಶ್ ಮೇವಾನಿ ಈ ಕಾರ್ಯಕ್ರಮದ ಕೇಂದ್ರ ಬಿಂದುವಾಗಿದ್ದರು. 'ಗೋವಿನ ಬಾಲ ನೀವೇ ಇಟ್ಟುಕೊಳ್ಳಿ, ನಮಗೆ ಭೂಮಿ ಕೊಡಿ' ಎನ್ನುವ ಘೋಷಣೆಯಾಗಲಿ 'ನಾವು ಇನ್ನು ಅವಮಾನ ತರುವ ಯಾವ ಚಾಕರಿಯನ್ನೂ ಮಾಡುವುದಿಲ್ಲ' ಎನ್ನುವ ದಲಿತರ ಪ್ರತಿಜ್ಞೆಯಾಗಲಿ ಅದೆಷ್ಟುಅಪಾರಸಾಧ್ಯತೆಗಳನ್ನು ಹೊಂದಿವೆಯೆಂದರೆ ಅಂಬೇಡ್ಕರ್ ಆರಂಭಿಸಿದ್ದ ಕ್ರಾಂತಿಯನ್ನು ಅವು ಪೂರ್ಣಗೊಳಿಸಬಲ್ಲವು.



'ಹಿಂದುತ್ವದ ಕಾಲಾಳುಗಳು ಹಿಂದಕ್ಕೆ ಬನ್ನಿ'

ಇಡೀ ಸಮಾವೇಶದಲ್ಲಿ ನನ್ನನ್ನು ಆವರಿಸಿಕೊಂಡ ಎರಡು ಸಂಗತಿಗಳೆಂದರೆ ಒಂದು ಪ್ರಾಸ್ತಾವಿಕವಾಗಿ ಮಾತನಾಡಿದ ಅನೇಕ ಯುವ ಸಂಗಾತಿಗಳು "ಹಿಂದುತ್ವದ ಕಾಲಾಳುಗಳಾಗಿ ದುಡಿಯುತ್ತಿರುವವರು ದಲಿತ ಹಾಗೂ ಹಿಂದುಳಿದ ಜಾತಿಗಳ ಯುವಕರು, ನಮ್ಮ ಸಮಾವೇಶ ಅವರನ್ನು ಎಚ್ಚರಿಸುವ ಉದ್ದೇಶಕ್ಕಾಗಿಯೂ ಇದೆ" ಎಂದು ಹೇಳಿದ್ದು. ಇದು ಅತ್ಯಂತ ಮಹತ್ವದ ವಿಷಯ. ಬ್ರಾಹ್ಮಣರು, ಬನಿಯಾ ವರ್ಗಗಳು ಹಿಂದುತ್ವದ ಸಮರ್ಥಕರಾಗಿರುವುದು ಆಶ್ಚರ್ಯದ ವಿಷಯವೇ ಅಲ್ಲ. ಅದೇ ರೀತಿ ಈ ದೇಶದ ಕಾರ್ಮಿಕರು ರೈತರು ಸುರಿಸಿದ ಬೆವರಿನಿಂದ ಉನ್ನತ ಶಿಕ್ಷಣ ಪಡೆದು ಐಟಿ, ಬಿಟಿಗಳಲ್ಲಿರುವ ಜನದ್ರೋಹಿ ಯುವ ಜನಾಂಗವು ಹಿಂದುತ್ವದ ಬೆಂಬಲಿಗರಾಗಿರುವುದು ಅನಿರೀಕ್ಷಿತವೇನಲ್ಲ. ಏಕೆಂದರೆ ಶಿಕ್ಷಿತ "ನಾಗರೀಕ" ವರ್ಗಗಳು ಮನುಷ್ಯತ್ವದ ಪರವಾಗಿ ಇದ್ದ ಒಂದೇ ಉದಾಹರಣೆಯು ಈ ದೇಶದ ಇತಿಹಾಸದಲ್ಲಿಯೇ ಇಲ್ಲ. ಆದರೆ ಆತಂಕದ ವಿಷಯವೆಂದರೆ ಇಂದು ಮೇಲ್ಜಾತಿಯ ಯುವಕ ಯುವತಿಯರು ಉತ್ತಮ ಶಿಕ್ಷಣ ಪಡೆದು ವಿದೇಶಗಳಲ್ಲಿ ನೆಲೆಸಿ ಅಲ್ಲಿಂದಲೇ ಸಾಮಾಜಿಕ ತಾಣಗಳಲ್ಲಿ ಹಿಂದುತ್ವದ ವಿಷವನ್ನು ಕಕ್ಕುತ್ತ ತಮ್ಮ ದೇಶಪ್ರೇಮವನ್ನು ಸಾರುತ್ತಿದ್ದರೆ' ದಲಿತ ಹಿಂದುಳಿದ ಜಾತಿಯ ಯುವಜನರು ಬಲಪಂಥೀಯ ಅಮಲನ್ನು ಏರಿಸಿಕೊಂಡು ಸಾಂಸ್ಕೃತಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ನಮ್ಮೆದುರಿಗಿನ ಅತಿ ಮುಖ್ಯ ಕಾರ್ಯಸೂಚಿಯೆಂದರೆ ದಾರಿತಪ್ಪಿದ ದಲಿತ ಯುವಕರನ್ನು ಹಿಂದುಳಿದ ಜಾತಿಯ ಯುವಕರನ್ನು ಮತ್ತೆ ಮನೆಗೆ ಕರೆತರುವುದಾಗಿದೆ. ಉಡುಪಿ ಚಲೋ ಕಾರ್ಯಕ್ರಮದಲ್ಲಿ ಮಾತನಾಡಿದ ಯುವಕರು ತಮ್ಮ ಅಣ್ಣ ತಮ್ಮಂದಿರನ್ನು ಪ್ರೀತಿ ಮತ್ತು ಆತಂಕದಿಂದ ಸಂಬೋಧಿಸಿದ್ದು ಈ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿತ್ತು. ಬ್ರಾಹ್ಮಣಶಾಹಿಯ ವಿರುದ್ಧ ಅದೇ ಹಳೆಯ ಡೈಲಾಗ್ ಹೊಡೆಯುವವರಿಗಿಂತ ಭಿನ್ನ ಕಳಕಳಿಯು ಅದರಲ್ಲಿತ್ತು. ಗುಜರಾತ್‌ನಲ್ಲಿ ನಡೆದ ಗಲಭೆಗಳಲ್ಲಿ ಸೆರೆಸಿಕ್ಕು ಈಗ ವಿಚಾರಣಾಧೀನ ಕೈದಿಗಳಾಗಿ ಕೊಳೆಯುತ್ತಿರುವವರು ದಲಿತ ಹಾಗೂ ಹಿಂದುಳಿದ ಯುವಕರೇ ಎಂದು ಅಂಕಿಸಂಖ್ಯೆಗಳನ್ನು ಬಿಚ್ಚಿಟ್ಟ ಜಿಗ್ನೇಶ್ ಮೇವಾನಿಯವರೂ ಇದೇ ದಿಕ್ಕಿನಲ್ಲಿ ಸಮಾವೇಶವು ಚಿಂತಿಸುವಂತೆ ಮಾಡಿದರು.

ಮೂರ್ತವಾದ ಕಾರ್ಯಕ್ರಮಗಳು ಬೇಕು

ಜಿಗ್ನೇಶ್ ಅವರ ಮಾತುಗಳಿಂದ ಹೊಳೆದದ್ದೆಂದರೆ ಅವರು ಕೇವಲ ದಲಿತ ಪ್ರಜ್ಞೆಯ ಬಗ್ಗೆ ಚಿಂತಿಸುತ್ತಿಲ್ಲ. ಅವರ ಮಾತುಗಳು ಮೂರ್ತವಾದ ಕಾರ್ಯಕ್ರಮಗಳ ಬಗ್ಗೆ ಇದ್ದವು. ದಲಿತರಿಗೆ ಭೂಮಿ ಕೊಡಿ ಎಂದರೆ ಭೂಮಿ ಎಲ್ಲಿದೆ ಎಂದು ಕೇಳಿದವರಿಗೆ RTI ಮೂಲಕ ಪಡೆದ ವಿವರಗಳನ್ನು ಒದಗಿಸಿ ನೋಡಿ ಇಲ್ಲಿದೆ ಎಂದು ತೋರಿಸಿದ್ದು; ಭೂಸುಧಾರಣೆ ಕಾನೂನುಗಳ ದುರ್ಬಳಕೆ ಅಥವಾ ಅಲಕ್ಷದಿಂದ ಭೂಮಿ ಬಲಿಷ್ಠ ಜಾತಿ–ವರ್ಗಗಳ ಪಾಲಾದದ್ದನ್ನು ತೋರಿಸಿ ಕೊಟ್ಟಿದ್ದು; ಸಫಾಯಿ ಕರ್ಮಚಾರಿಗಳನ್ನು ಗುತ್ತಿಗೆ ಕೂಲಿಗಳಂತೆ ಪರಿಗಣಿಸುವುದನ್ನು ನಿಲ್ಲಿಸಬೇಕೆಂದೂ ಯಶಸ್ವಿಯಾಗಿ ಪ್ರತಿಭಟಿಸಿದ್ದು – ಹೀಗೆ ಒಂದಾದ ಮೇಲೊಂದು ಕಾರ್ಯಕ್ರಮಗಳನ್ನು ಅವರು ವಿವರಿಸಿದರು. ಇದೆಲ್ಲದಕ್ಕೆ ಕಿರೀಟದಂತೆ ಹೇಳಿದ್ದೆಂದರೆ ದಲಿತರಿಗೆ ಭೂಮಿ ಕೊಡುವಾಗ ಅದನ್ನು ದಲಿತ ಪುರುಷರ ಹೆಸರಲ್ಲಿ ಅಲ್ಲ ದಲಿತ ಮಹಿಳೆಯರ ಹೆಸರಲ್ಲಿ ನೊಂದಣಿ ಮಾಡಿಸಿ ಎಂದು ಹೇಳಿದ್ದು.

'ಚಲೋ ಉಡುಪಿ, ಮುಂದೇನು' ಎಂದು ಯೋಚಿಸುವಾಗ ನನಗೆ ಅನ್ನಿಸಿದ್ದು ನಮ್ಮ ತುರ್ತು ಅವಶ್ಯಕತೆಯೆಂದರೆ ಮೂರ್ತವಾದ ಕಾರ್ಯಕ್ರಮಗಳು. ಅಂದರೆ ಸರಕಾರವು ತಕ್ಷಣವೇ ಮಾಡಲೇಬೇಕಾದ ಕಾರ್ಯಗಳ ಪಟ್ಟಿಗೆ ಒತ್ತಾಯಿಸುವ ಕೆಲಸಗಳು. ಜಿಗ್ನೇಶ್‌ರವರು ಕರ್ನಾಟಕ ಸರಕಾರವು ಭೂಸುಧಾರಣೆ, ದಲಿತರಿಗೆ ಭೂ ಹಂಚಿಕೆ ಕುರಿತು ಶ್ವೇತ ಪತ್ರವನ್ನು ಪ್ರತಿಭಟಿಸಬೇಕೆಂದು ಒತ್ತಾಯಿಸಿದ್ದು ಸರಿಯಾಗಿತ್ತು. ಇದೆಲ್ಲ ಯಾಕೆ ಮುಖ್ಯವೆಂದರೆ ನಮ್ಮ ಕೊಳಕುಮಂಡಲ ಮಾಧ್ಯಮಗಳಿಂದಾಗಿ ಇಡೀ ಉಡುಪಿ ಚಲೋ ಕಾರ್ಯಕ್ರಮವನ್ನು ಪೇಜಾವರರೊಂದಿಗೆ ಸಂವಾದವನ್ನಾಗಿ ಮಾಡಿಬಿಡಲಾಗಿದೆ. ಅಥವಾ ಶುದ್ಧೀಕರಣದ ಬಗ್ಗೆ ವಿವಾದವನ್ನಾಗಿಸಲಾಗಿದೆ. (ಅಂದ ಹಾಗೆ ನಾನು ಉಡುಪಿಗೆ ಹೋದಾಗ ಬಿಟ್ಟುಬಂದ ಪಾದದ ಧೂಳಿಯನ್ನು ತೊಳೆದು ಸಾಂಕೇತಿಕವಾಗಿ ನನ್ನ ಪಾದಪೂಜೆಯನ್ನು ಸೂಲಿಬೆಲೆ ಆ್ಯಂಡ್ ಕಂಪನಿಯವರು ಮಾಡುವುದಾದರೆ ನಾನೇಕೆ ಪ್ರತಿಭಟಿಸಲಿ!?) ಇದೆಲ್ಲದರಲ್ಲಿ ನಾವು ನಮ್ಮ ಶಕ್ತಿಯನ್ನು ವ್ಯಯಮಾಡುವುದು ಬೇಡ. ಹೊಸದಾಗಿ ಮೂಡಿದ ದಲಿತ ಪ್ರಜ್ಞೆಯು ಮೂರ್ತವಾದ ಒಳ್ಳೆಯ ರಾಜಕೀಯ ಕಾರ್ಯಕ್ರಮಗಳಿಂದ ಮಾತ್ರ ಗಟ್ಟಿಯಾಗಿ ಬೆಳೆಯಬಲ್ಲದು. ●

ಕೇಳಿಸಿದ್ದು

"ನಾಸಾ ರಾಕೆಟ್ ಕಾರ್ಯಕ್ರಮದ ಮುಖ್ಯ ಕಚೇರಿಯಲ್ಲಿ ಒಂದು ಕಲಾಕೃತಿ ನೋಡಿದೆ. ಅದರಲ್ಲಿ ಯುದ್ಧ ದೃಶ್ಯದಲ್ಲಿ ರಾಕೆಟ್ ಸಿಡಿಸುವುದನ್ನು ತೋರಿಸಲಾಗಿತ್ತು. ನಾನು ಆ ಕಲಾಕೃತಿಯನ್ನು ಗಮನವಿಟ್ಟು ನೋಡಿದಾಗ ಅದು ಬ್ರಿಟಿಶರ ಜತೆ ಟಿಪ್ಪು ಯುದ್ಧದ ದೃಶ್ಯವಾಗಿತ್ತು. ಈ ಕಲಾಕೃತಿ ಟಿಪ್ಪುವಿನ ಬಗ್ಗೆ ದೇಶದಲ್ಲೇ ಮರೆತು ಬಿಟ್ಟಿರುವ ವಾಸ್ತವ ಸಂಗತಿಯನ್ನು ಜಗತ್ತಿನ ಇನ್ನೊಂದು ಮೂಲೆಯಲ್ಲಿ ತೋರಿಸುತ್ತಿತ್ತು. ಒಬ್ಬ ಭಾರತೀಯನನ್ನು ನಾಸಾ ಮಿಲಿಟರಿ ರಾಕೆಟಿನ ಹೀರೋ ಎಂದು ವೈಭವೀಕರಿಸಿದ್ದು ಕಂಡು ನನಗೆ ಹೆಮ್ಮೆ ಎನಿಸಿತು."

– ಡಾ. ಅಬ್ದುಲ್ ಕಲಾಮ್

(ಆತ್ಮಕತೆ 'ವಿಂಗ್ಸ್ ಆಫ್ ಫೈರ್' ನಲ್ಲಿ)

ಮಹಿಳಾ ಕಾರ್ಮಿಕರ ಮೇಲೆ ದೌರ್ಜನ್ಯ



ವೈದ್ಯಕೀಯ ಔಷಧ ತಯಾರಿಕ ಕಂಪನಿಯಾದ ಮೇಯರ್ ಆರ್ಗ್ಯಾನಿಕ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಮಾಲಕರು ಕಾರ್ಮಿಕರ ಮೇಲೆ, ಮಹಿಳೆಯರೇ ಹೆಚ್ಚಾಗಿದ್ದು ಅವರ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಸಿ ಕಿರುಕುಳ ನೀಡುತ್ತಿದ್ದಾರೆ ಎಂದು ಮಾಲೀಕರ ವಿರುದ್ಧ ಕಾರ್ಮಿಕರು ಅಕ್ಟೋಬರ್ 26ರಂದು ಸಿಐಟಿಯು ನೇತೃತ್ವದಲ್ಲಿ ಕಂಪನಿ ಮುಂಭಾಗ ಮತ್ತು ಕಾರ್ಮಿಕ ಆಯುಕ್ತರ ಕಛೇರಿ ಮುಂಭಾಗ ನಡೆಸಿದರು.

ಸುಮಾರು 200 ಜನ ಗುತ್ತಿಗೆ ನೌಕರರು ಮತ್ತು 50 ಜನ ಖಾಯಂ ನೌಕರರು ಇದ್ದಾರೆ. ಕಾರ್ಮಿಕರ ಮೇಲೆ ಹಲವು ವರ್ಷದಿಂದ ಕಿರುಕುಳ ನೀಡಲಾಗುತ್ತಿದೆ. ಕಳೆದ ಮೂರು ವರ್ಷದ ಹಿಂದ ಕಾರ್ಮಿಕ ಸಂಘ ಸ್ಥಾಪನೆ ಮಾಡಿದ್ದನ್ನು ವಿರೋಧಿಸಿ ಹತ್ತಾರು ವರ್ಷಗಳಿಂದ ಕೆಲಸ ಮಾಡುವ ಸುಮಾರು 14 ಜನರನ್ನು ಕೆಲಸದಿಂದ ಹೊರ ಹಾಕಲಾಗಿದೆ.

ಈಗಾಗಲೇ ಮಾಲೀಕರು ವಿರುದ್ಧ ಕಿರುಕುಳದ ವಿರುದ್ಧ 6ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಕಿರುಕುಳದ ವಿರುದ್ಧ ಈಗಾಗಲೇ ಹಲವು ಬಾರಿ ಪ್ರತಿಭಟನೆಗಳು ನಡೆದಿದೆ. ಮಹಿಳಾ ಆಯೋಗದಲ್ಲಿಯೂ ದೂರು ದಾಖಲಾಗಿದೆ.

ಮಹಿಳೆಯರ ಮೇಲಿನ ಕಿರುಕುಳ ನಿಲ್ಲಿಸಬೇಕು, ಮಹಿಳೆಯರಿಗೆ ವಿಶೇಷ ಸೌಲಭ್ಯಕ್ಕಾಗಿ ಮತ್ತು ವಜಾ ಆದ ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಧರಣಿಯಲ್ಲಿ ಸಂಘದ ಅಧ್ಯಕ್ಷರಾದ ಮಂಗಳಮ್ಮ, ಪ್ರಧಾನ ಕಾರ್ಯದರ್ಶಿ ಯೋಗೀಶ್, ಉಪಾಧ್ಯಕ್ಷರಾದ ಲಕ್ಷ್ಮಮ್ಮ, ಕಾರ್ಯದರ್ಶಿ ರತ್ನ, ಮುಖಂಡರಾದ ಪುಷ್ಪಲತಾ, ಮಂಜುಳ ನೇತೃತ್ವ ವಹಿಸಿದ್ದರು. ಸಿಐಟಿಯು ಮುಖಂಡರಾದ ಪ್ರತಾಪ್ ಸಿಂಹ, ವಿಜಯಲಕ್ಷ್ಮಿ, ಎಂ.ಎಸ್.ನಿತಿನ್ ಮಾತನಾಡಿದರು. ●



ಅಕ್ಟೋಬರ್ ಕ್ರಾಂತಿ
ಒಂದು ಹೊಸ ಜಗತ್ತಿನ ಹರಿಕಾರ



ಸೋವಿಯತ್ ಒಕ್ಕೂಟ ತುಂಬಾ ಕಡಿಮೆ ಅವಧಿಯಲ್ಲಿ ಅನೇಕ ಐತಿಹಾಸಿಕ ಸಾಧನೆಗಳನ್ನು ಮಾಡಿ ಸಮಾಜವಾದಿ ವ್ಯವಸ್ಥೆಯ ಅಪಾರ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. ಆದರೆ, 1991ರಲ್ಲಿ ಸೋವಿಯತ್ ಒಕ್ಕೂಟದ ಅಂತ್ಯ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗೆ ಅಕ್ಟೋಬರ್ ಕ್ರಾಂತಿಯ ಸಾರದ ನಿರಾಕರಣೆಗೆ ಮುಂದಾಗಲು, ಅದರ ಅರ್ಥವನ್ನು ವಿರೂಪಗೊಳಿಸಲು ಹಾಗೂ ಸಮಾಜವಾದದ ಸ್ಮರಣೀಯ ಸಾಧನೆಗಳನ್ನು ಅಳಿಸಿಹಾಕಲು ಅವಕಾಶ ಒದಗಿಸಿತು. ಹೀಗಾಗಿ, ಅಕ್ಟೋಬರ್ ಕ್ರಾಂತಿಯ ಕ್ರಾಂತಿಕಾರಿ ಸತ್ವವನ್ನು ಮತ್ತು ಇತಿಹಾಸದಲ್ಲಿ ಅದರ ವಿಮೋಚನಕಾರಿ ಪಾತ್ರವನ್ನು ಎತ್ತಿ ತೋರುವುದು ತುಂಬಾ ಮಹತ್ವದ್ದಾಗಿದೆ. ಅಕ್ಟೋಬರ್ ಕ್ರಾಂತಿ, ಸೋವಿಯತ್ ಒಕ್ಕೂಟ ಮತ್ತು ಕಮ್ಯೂನಿಸಂ ಕುರಿತ ಸುಳ್ಳಿನ ಕಂತೆಗಳನ್ನು ಬಯಲು ಮಾಡುವುದು ಅಗತ್ಯವಾಗಿದೆ.



ಪ್ರಕಾಶ ಕಾರಟ್

ಈ ವರ್ಷದ ನವೆಂಬರ್ 7ರಂದು ರಷ್ಯಾದ ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಆಚರಣೆ ಆರಂಭವಾಗುತ್ತದೆ. (ಹಳೆಯ ರಷ್ಯನ್ ಕ್ಯಾಲೆಂಡರ್ ಪ್ರಕಾರ ಅಕ್ಟೋಬರ್ 25ರಂದು ಕ್ರಾಂತಿ ನಡೆದಿತ್ತು). ಅಕ್ಟೋಬರ್ 1917 ಮಾನವ ಇತಿಹಾಸದಲ್ಲಿ ಹೊಸದೊಂದು ಯುಗದ– ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಸಂಕ್ರಮಣದ ಯುಗದ, ಆರಂಭವನ್ನು ಸಾರಿತ್ತು. ಇದು ಜಗತ್ತಿನಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ದುಡಿಯುವ ಜನತೆ ನಡೆಸಿದ ಮೊತ್ತಮೊದಲ ಕ್ರಾಂತಿ. ಅದಕ್ಕೂ ಮುನ್ನ 18 ಮತ್ತು 19ನೇ ಶತಮಾನದಲ್ಲಿ ನಡೆದ ಕ್ರಾಂತಿಗಳೆಲ್ಲವೂ ಪಾಳೇಗಾರಿ ಪ್ರಭುತ್ವಗಳನ್ನು ಕಿತ್ತೊಗೆಯಲು ನಡೆದ ಬಂಡವಾಳಶಾಹಿ ಕ್ರಾಂತಿಗಳಾಗಿದ್ದವು. 1789ರ ಫ್ರೆಂಚ್ ಕ್ರಾಂತಿ ಬಂಡವಾಳಶಾಹಿಯ ಪ್ರಜಾಸತ್ತಾತ್ಮಕ ಕ್ರಾಂತಿಗೆ ಒಂದು ಉತ್ತಮ ಉದಾಹರಣೆ.

1871ರ ಪ್ಯಾರಿಸ್ ಕಮ್ಯೂನ್ ಅಕ್ಟೋಬರ್ ಕ್ರಾಂತಿಯ ಐತಿಹಾಸಿಕ ಪೂರ್ವವರ್ತಿಯಾಗಿತ್ತು. ಅದು ಅದು ಅಧಿಕಾರವನ್ನು ಹಿಡಿಯಲು ಶ್ರಮಜೀವಿ ವರ್ಗ ನಡೆಸಿದ ಪ್ರಥಮ ಪ್ರಯತ್ನವಾಗಿತ್ತು. ಅದರ ಬಾಳುವೆ ಸಂಕ್ಷಿಪ್ತವಾಗಿದ್ದರೂ ಅದು ಒಂದು ಸಮಾಜವಾದಿ ಪ್ರಭುತ್ವವನ್ನು ಸ್ಥಾಪಿಸುವ ಮೊದಲ ಪ್ರಯತ್ನವಾಗಿತ್ತು.

ಸ್ಮರಣೀಯ ಸಾಧನೆಗಳು

ಸೋವಿಯತ್ ಒಕ್ಕೂಟ ತುಂಬಾ ಕಡಿಮೆ ಅವಧಿಯಲ್ಲಿ ಅನೇಕ ಐತಿಹಾಸಿಕ ಸಾಧನೆಗಳನ್ನು ಮಾಡಿ ಸಮಾಜವಾದಿ ವ್ಯವಸ್ಥೆಯ ಅಪಾರ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. ಕೈಗಾರಿಕೆ ಮತ್ತು ಕೃಷಿ ಅಭಿವೃದ್ಧಿಯಲ್ಲಿ ಅದು ತ್ವರಿತವಾದ ದಾಪುಗಾಲುಗಳನ್ನಿಟ್ಟಿತು; ಅನಕ್ಷರತೆಯನ್ನು ತೊಡೆದುಹಾಕಿತು ಮತ್ತು ಸಾರ್ವತ್ರಿಕ ಶಿಕ್ಷಣ ಹಾಗೂ ಪುಕ್ಕಟೆ ಆರೋಗ್ಯ ಸೇವೆಯನ್ನು ಒದಗಿಸಿತು; ನಿರುದ್ಯೋಗವನ್ನು ಅಂತ್ಯಗೊಳಿಸಿತು; ಮಹಿಳೆಯರಿಗೆ ಎಲ್ಲಾ ರಂಗಗಳಲ್ಲಿ ಸಮಾನ ಹಕ್ಕುಗಳನ್ನು ಒದಗಿಸಿತು ಮತ್ತು ನಾಲ್ಕು ವರ್ಷ ಕಾಲದ ವಿನಾಶಕಾರಿ ಅಂತಃಕಲಹದ ಹೊರತಾಗಿಯೂ ಸಮಾಜವಾದದ ಎರಡು ದಶಕಗಳೊಳಗೆ ಜನರ ಭೌತಿಕ ಮತ್ತು ಸಾಂಸ್ಕೃತಿಕ ಮಟ್ಟಗಳನ್ನು ಅದು ಹೆಚ್ಚಿಸಿತು.

ನಾಜಿ ಆಕ್ರಮಣವನ್ನು ತಡೆಯಲು ಸಾಧ್ಯವಾಗಿದ್ದು ಮತ್ತು ಫ್ಯಾಸಿಸಂ ವಿರುದ್ಧದ ಯುದ್ಧದಲಿ ಜಗತ್ತಿನ ಅತ್ಯಂತ ಬಲಶಾಲಿ ಮಿಲಿಟರಿ ಯಂತ್ರವನ್ನು ಎದುರಿಸಿ ಸೋಲಿಸಲು ಸಾಧ್ಯವಾಗಿದ್ದು ಸೋವಿಯತ್ ಒಕ್ಕೂಟದಲ್ಲಿ ಸೃಷ್ಟಿಸಿದ ಸಮಾಜವಾದಿ ಪದ್ಧತಿಗೇ. ಫ್ಯಾಸಿಸ್ಟ್ ಶಕ್ತಿಯ ವಿರುದ್ಧ ಸೋವಿಯತ್ ಒಕ್ಕೂಟ ಒಂದು ಕೊತ್ತಳದಂತೆ ಇಲ್ಲದಿರುತ್ತಿದ್ದರೆ ಜಗತ್ತು ಅನಾಗರಿಕತೆಗೆ ಜಾರಬೇಕಾಗುತ್ತಿತ್ತು.

ಅಕ್ಟೋಬರ್ ಕ್ರಾಂತಿ ಮತ್ತು ಸೋವಿಯತ್ ಒಕ್ಕೂಟದ ಅಸ್ತಿತ್ವವು ಜಗತ್ತಿನೆಲ್ಲೆಡೆ ವಸಾಹತುವಾದ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಪ್ರಬಲ ಸ್ಫೂರ್ತಿ ಒದಗಿಸಿದವು. ಅಕ್ಟೋಬರ್ ಕ್ರಾಂತಿಯ ಐದು ದಶಕಗಳೊಳಗೆ ಜಗತ್ತಿನ ಬಹುತೇಕ ಭಾಗಗಳು ಸಾಮ್ರಾಜ್ಯಶಾಹಿಯ ನೇರ ದಾಸ್ಯದಿಂದ ಬಿಡುಗಡೆ ಹೊಂದಿದವು.

ಆದರೆ, 1991ರಲ್ಲಿ ಸೋವಿಯತ್ ಒಕ್ಕೂಟದ ಅಂತ್ಯ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗೆ ಅಕ್ಟೋಬರ್ ಕ್ರಾಂತಿಯ ಸಾರದ ನಿರಾಕರಣೆಗೆ ಮುಂದಾಗಲು, ಅದರ ಅರ್ಥವನ್ನು ವಿರೂಪಗೊಳಿಸಲು ಹಾಗೂ ಸಮಾಜವಾದದ ಸ್ಮರಣೀಯ ಸಾಧನೆಗಳನ್ನು ಅಳಿಸಿಹಾಕಲು ಅವಕಾಶ ಒದಗಿಸಿತು.

ಹೀಗಾಗಿ, ಅಕ್ಟೋಬರ್ ಕ್ರಾಂತಿಯ ಕ್ರಾಂತಿಕಾರಿ ಸತ್ವವನ್ನು ಮತ್ತು ಇತಿಹಾಸದಲ್ಲಿ ಅದರ ವಿಮೋಚನಕಾರಿ ಪಾತ್ರವನ್ನು ಎತ್ತಿ ತೋರುವುದು ತುಂಬಾ ಮಹತ್ವದ್ದಾಗಿದೆ. ಅಕ್ಟೋಬರ್ ಕ್ರಾಂತಿ, ಸೋವಿಯತ್ ಒಕ್ಕೂಟ ಮತ್ತು ಕಮ್ಯೂನಿಸಂ ಕುರಿತ ಸುಳ್ಳಿನ ಕಂತೆಗಳನ್ನು ಬಯಲು ಮಾಡುವುದು ಅಗತ್ಯವಾಗಿದೆ.

ಸುಳ್ಳಿನ ಕಂತೆಗಳು

ಅಕ್ಟೋಬರ್ ಘಟನೆಯು ಜನತೆಯ ಒಂದು ಕ್ರಾಂತಿಯಲ್ಲ ಬದಲಿಗೆ ಅದೊಂದು ವಿದ್ರೋಹ ಅಥವಾ ಕ್ಷಿಪ್ರಕಾರ್ಯಾಚರಣೆ ಎಂದು ಸಾಬೀತುಪಡಿಸಲು ಸೋವಿಯತ್ ಒಕ್ಕೂಟದ ವಿಘಟನೆಯ ನಂತರದ ಈ 25 ವರ್ಷಗಳಲ್ಲಿ ಬಹಳಷ್ಟು ಇತಿಹಾಸದ ಬರಹಗಳು ಮೂಡಿಬಂದಿವೆ. ಪಿತೂರಿಗಾರರ ಒಂದು ಗುಂಪು ಸರಕಾರವೊಂದನ್ನು ಕಿತ್ತೊಗೆಯುವುದಕ್ಕೆ ವಿದ್ರೋಹ ಎನ್ನುತ್ತಾರೊಂದು ಕ್ಷಿಪ್ರ ಕಾರ್ಯಾಚರಣೆಯಲ್ಲಿ ಸೇನಾಧಿಕಾರಿಗಳ ಅಥವ ಸಶಸ್ತ್ರ ಪಡೆಗಳ ಅಧಿಕಾರಿಗಳ ಒಂದು ಗುಂಪು ಒಳಗೊಂಡಿರುತ್ತದೆ. ಪಾಶ್ಚಾತ್ಯ ವಿದ್ವಾಂಸರ ಈ ಬರಹಗಳ ಪ್ರಕಾರ, ಪೆಟ್ರೊಗ್ರಾಡ್‌ನಲ್ಲಿನ ತಾತ್ಕಾಲಿಕ ಸರಕಾರವನ್ನು 1917ರ ಅಕ್ಟೋಬರ್ 25ರಂದು ಕಿತ್ತೊಗೆಯಲು ಸೈನಿಕರ ಒಂದು ವಿಭಾಗದ ಬೆಂಬಲವಿದ್ದ ಬೊಲ್ಷೆವಿಕ್ ಪಿತೂರಿಗಾರರ ಗುಂಪಿನ ನೇತೃತ್ವವನ್ನು ಲೆನಿನ್ ವಹಿಸಿದ್ದರು.

ಪಿತೂರಿಗಾರರ ವಿದ್ರೋಹದ ಈ ಕಥನವನ್ನು ಅನುಸರಿಸಿ ರಷ್ಯಾದ ಪರಿಷ್ಕರಣವಾದಿ ಇತಿಹಾಸವನ್ನು ಬರೆಯುವವರು ಬೊಲ್ಷೆವಿಕರು ತಮ್ಮ ವಿರೋಧಿಗಳನ್ನು ಸದೆಬಡಿಯಲು ಹಾಗೂ ಕಮ್ಯೂನಿಸ್ಟ್ ಪಕ್ಷದ ಸರ್ವಾಧಿಕಾರ ಸ್ಥಾಪನೆಗೆ ಯಾವ ರೀತಿಯಲ್ಲಿ ಕೆಂಪು ಭಯೋತ್ಪಾದನೆ ಉಂಟು ಮಾಡಿದರು ಎಂದು ವರ್ಣಿಸುತ್ತಾರೆ.

ನಂತರದ ಸೈದ್ಧಾಂತಿಕ ಕಸರತ್ತು ಎಂದರೆ, ಸೋವಿಯತ್ ಪ್ರಭುತ್ವ ಒಂದು 'ನಿರಂಕುಶ ಸರ್ವಾಧಿಕಾರ'ದ ವ್ಯವಸ್ಥೆ ಎಂದು ಚಿತ್ರಿಸುವುದು ನಿರಂಕುಶ ಸರ್ವಾಧಿಕಾರ ಎಂದರೆ ಬೂರ್ಜ್ವಾ ಪ್ರಜಾಪ್ರಭುತ್ವಕ್ಕೆ ಸ್ಥಾನ ಇಲ್ಲದಿರುವ ಒಂದು ವ್ಯವಸ್ಥೆ ಎಂದು ನಿರೂಪಿಸಲಾಗಿದೆ. ಈ ರೀತಿಯಾಗಿ, ಸೋವಿಯತ್ ಒಕ್ಕೂಟ ಜರ್ಮನಿಯ ನಾಝಿ ಪ್ರಭುತ್ವದಂತಹ ಒಂದು ಸರ್ವಾಧಿಕಾರಿ ಪ್ರಭುತ್ವ, ಮತ್ತು ಕಮ್ಯೂನಿಸಂ ಮತ್ತು ಫ್ಯಾಸಿಸಂ ನಿರಂಕುಶ ಸರ್ವಾಧಿಕಾರದ ಎರಡು ಮುಖಗಳು. ಈ ಅಸಂಗತ ಸಿದ್ಧಾಂತ ಯುರೋಪ್ ಮತ್ತು ಅಮೆರಿಕದಲ್ಲಿ ಚಾಲ್ತಿಯಲ್ಲಿರುವ ಮೂಢ ಸಿದ್ಧಾಂತವಾಗಿದೆ.

ಫ್ಯಾಸಿಸಂ ಮತ್ತು ಕಮ್ಯೂನಿಸಂಅನ್ನು ಸಮೀಕರಿಸುವ ಈ ಒರಟು ಪ್ರಯತ್ನ ಸಾಮ್ರಾಜ್ಯಶಾಹಿ–ನವಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಸೈದ್ಧಾಂತಿಕ ಶ್ರೇಷ್ಠತೆಯನ್ನು ಸ್ಥಾಪಿಸಲು ಕಳೆದ ಎರಡು ದಶಕಗಳಲ್ಲಿ ನಡೆಸಲಾಗುತ್ತಿರುವ ಕಮ್ಯೂನಿಸ್ಟ್–ವಿರೋಧಿ ದಾಳಿಯಿಂದ ಹೊಮ್ಮಿರುವಂತದ್ದು. ಪೂರ್ವ ಯುರೋಪ್‌ನಲ್ಲಿ ಕಮ್ಯೂನಿಸ್ಟ್–ವಿರೋಧಿ ಬಲಪಂಥೀಯ ಸರಕಾರಗಳ ಸ್ಥಾಪನೆ ಮತ್ತು ಪೂರ್ವದತ್ತ ನ್ಯಾಟೋ ಕೂಟದ ವಿಸ್ತರಣೆ ಜೊತೆಜೊತೆಯಲ್ಲೇ ಈ ಕಮ್ಯೂನಿಸ್ಟ್–ವಿರೋಧಿ ಪ್ರಚಾರವನ್ನೂ ಮಾಡಲಾಗುತ್ತಿದೆ.

ಈ ಉದ್ದೇಶದಿಂದಲೇ ಯುರೋಪಿಯನ್ ಸಂಸತ್ತು 2009 ಎಪ್ರಿಲ್ 2ರಂದು ಅಂಗೀಕರಿಸಿದ ಸರ್ವಾಧಿಕಾರಿ ಅಪರಾಧಗಳನ್ನು ಖಂಡಿಸುವ ನಿರ್ಣಯದಲ್ಲಿ 'ಕಮ್ಯೂನಿಸಂ, ನಾಜಿವಾದ ಮತ್ತು ಫ್ಯಾಸಿಸಂ ಒಂದೇ ಪರಂಪರೆಯ ಭಾಗೀದಾರರು' ಎಂದು ಗುರುತಿಸಬೇಕು ಎಂಬುದಾಗಿ ಕರೆ ನೀಡಲಾಯಿತು. ಅದರ ಬೆನ್ನಲ್ಲೇ, 'ಯುರೋಪ್‌ನಲ್ಲಿ ಭದ್ರತೆ ಮತ್ತು ಸಹಕಾರದ ಸಂಘಟನೆ' (ಓಎಸ್‌ಸಿಇ) ಗೊತ್ತುವಳಿಯೊಂದನ್ನು ಅಂಗೀಕರಿಸಿ 2009ರ ಆಗಸ್ಟ್ 23ನ್ನು 'ಸ್ಟಾಲಿನಿಸಂ ಮತ್ತು ನಾಜಿಸಂಗೆ ಬಲಿಯಾದವರನ್ನು ನೆನೆಯುವ' ದಿನವಾಗಿ ಆಚರಿಸಬೇಕೆಂದು ಹೇಳಿತು.

ಬಯಲಿಗೆಳೆಯಬೇಕಾಗಿದೆ

ಈ ಸುಳ್ಳಿನ ಈ ಕಂತೆಗಳನ್ನು ಅನಾವರಣಗೊಳಿಸಬೇಕಾಗಿದೆ ಮತ್ತು ಅವುಗಳ ಸೈದ್ಧಾಂತಿಕ ಉದ್ದೇಶಗಳನ್ನು ಬಯಲುಗೊಳಿಸಬೇಕಾಗಿದೆ. ಅಕ್ಟೋಬರ್ ಕ್ರಾಂತಿ ಒಂದು ಸಾಮೂಹಿಕ ಕ್ರಾಂತಿ. ಜನಸಂಖ್ಯೆಯ ದೊಡ್ಡ ವಿಭಾಗವಾಗಿದ್ದ ಕಾರ್ಮಿಕರು, ರೈತರು ಮತ್ತು ಸೈನಿಕರು ಈ ಕ್ರಾಂತಿಯ ಚಳವಳಿಯ ಪ್ರಮುಖ ಶಕ್ತಿಗಳಾಗಿದ್ದರು. ಇಡೀ ದೇಶದಾದ್ಯಂತ ಸೋವಿಯತ್‌ಗಳು ಎದ್ದು ಬಂದವು. ಜನತೆಯ ನಿರ್ದಿಷ್ಟ ವರ್ಗವೊಂದರ ಚುನಾಯಿತ ಪ್ರಾತಿನಿಧಿಕ ಸಂಸ್ಥೆಯೇ ಈ ಸೋವಿಯತ್‌ಗಳು. ಅವು ಕಾರ್ಮಿಕರ ಸೋವಿಯತ್‌ಗಳು, ರೈತರ ಸೋವಿಯತ್‌ಗಳು ಮತ್ತು ಸೈನಿಕರ ಸೋವಿಯತ್‌ಗಳು. 1917 ಅಕ್ಟೋಬರ್‌ನಲ್ಲಿ ರಷ್ಯಾದಲ್ಲಿ ರೈತ ಡೆಪ್ಯುಟಿಗಳ 455 ರೈತ ಪ್ರತಿನಿಧಿಗಳ ಸೋವಿಯತ್‌ಗಳ ಸಹಿತ ಒಟ್ಟು 1429 ಸೋವಿಯತ್‌ಗಳಿದ್ದವು. ಅಖಿಲ ರಷ್ಯನ್ ಸೋವಿಯತ್‌ಗಳ ಸಮ್ಮೇಳನ 2.03 ಕೋಟಿ ಜನರನ್ನು ಪ್ರತಿನಿಧಿಸುತ್ತಿತ್ತು. ಅವರಲ್ಲಿ 60ಲಕ್ಷ ಕಾರ್ಮಿಕರು, ಐವತ್ತು ಲಕ್ಷ ರೈತರು ಮತ್ತು 90 ಲಕ್ಷ ಸೈನಿಕರಿದ್ದರು. (ಸೈನಿಕರ ಪೈಕಿ ಮೂರನೇ ಎರಡರಷ್ಟು ಮಂದಿ ರೈತರು ಹಾಗೂ ಕೃಷಿ ಕಾರ್ಮಿಕರಾಗಿದ್ದರು).

ಅಕ್ಟೋಬರ್ ಕ್ರಾಂತಿಯ ಹೊತ್ತಿಗೆ, ಪೆಟ್ರೊಗ್ರಾಡ್ ಮತ್ತು ಮಾಸ್ಕೋದಲ್ಲಿನ ಕಾರ್ಮಿಕರ ಸೋವಿಯತ್‌ಗಳ ಒಂದು ದೊಡ್ಡ ವಿಭಾಗ ಬೊಲ್ಷೆವಿಕ್ ಪ್ರಭಾವಕ್ಕೆ ಒಳಗಾಗಿದ್ದವು. ವಿವಿಧ ದಂಡು ಪಾಳೆಯಗಳ ಮತ್ತು ಯುದ್ಧರಂಗದಲ್ಲಿನ ಸೈನಿಕರ ಸೋವಿಯತ್‌ಗಳೂ ಕೂಡ ಇದೇ ರೀತಿಯ ಪ್ರಭಾವಕ್ಕೆ ಒಳಗಾಗಿದ್ದವು. ಬೊಲ್ಷೆವಿಕ್ ಪಕ್ಷದ ಸದಸ್ಯತ್ವ ಅಕ್ಟೋಬರ್‌ನಲ್ಲಿ 3,50,000ಕ್ಕೆ ಏರಿತು. ಫೆಬ್ರವರಿ ಕ್ರಾಂತಿಯ ವೇಳೆ ಇದ್ದ ಸದಸ್ಯರ ಸಂಖ್ಯೆ 75,000. ಬೊಲ್ಷೆವಿಕರು ಮತ್ತು ಅವರ ಜೊತೆ ಮೈತ್ರಿ ಮಾಡಿಕೊಂಡ ಎಡ–ಸಮಾಜವಾದಿ ಕ್ರಾಂತಿಕಾರಿಗಳು ಸೋವಿಯತ್‌ಗಳ ಅಖಿಲ ರಷ್ಯನ್ ಸಮ್ಮೇಳನದಲ್ಲಿ ಸ್ಪಷ್ಟ ಬಹುಮತ ಹೊಂದಿದ್ದರು.

ಕ್ರಾಂತಿಕಾರಿ ಅಧಿಕಾರವನ್ನು ವಹಿಸಿಕೊಳ್ಳುವ ಕೆಲಸ ನಿರ್ವಹಿಸಿದ್ದು ವಾಸ್ತವವಾಗಿ ಈ ಸೋವಿಯತ್‌ಗಳೇ. ಇದನ್ನೊಂದು ವಿದ್ರೋಹ ಅಥವ ಕ್ಷಿಪ್ರ ಕಾರ್ಯಾಚರಣೆ ಎಂದು ಕರೆಯುವುದು ಐತಿಹಾಸಿಕ ನಿಜಸಂಗತಿಗಳಿಗೆ ಬಗೆಯುವ ಅಪಚಾರವಾಗುತ್ತದೆ. ಒಂದು ಕಾರ್ಮಿಕ ವರ್ಗದ ಪಕ್ಷ ಕೂಡ ರೈತರನ್ನು ಅಣಿನೆರೆಯಿಸಬಹುದು ಮತ್ತು ಜನತೆಯ ಬಹುಭಾಗವನ್ನು ಪ್ರತಿನಿಧಿಸುವ ಕಾರ್ಮಿಕ–ರೈತರ ಸಖ್ಯತೆಯನ್ನು ಬೆಸೆಯಬಹುದು ಎಂಬ ಸಂಗತಿಯನ್ನು ಮಾನ್ಯ ಮಾಡಲಾಗದ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಈ ಹುಸಿಗಳ ಪ್ರಚಾರವನ್ನು ನಡೆಸುತ್ತವೆ.

ಬಂಡವಾಳಶಾಹಿಯ ಅತಿ ಪ್ರತಿಗಾಮಿ ವಿಭಾಗಗಳಿಂದ ಎದ್ದು ಬರುವ ಒಂದು ವಿದ್ಯಮಾನವಾದ ಫ್ಯಾಸಿಸಂ ಮತ್ತು ಬಂಡವಾಳಶಾಹಿಯ ಪ್ರತಿಗಾಮಿ ವಿಭಾಗಗಳ ಬದ್ಧ ವಿರೋಧಿಯಾದ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಆಧರಿಸಿದ ಕಮ್ಯೂನಿಸಂ ನಡುವೆ ಸಾದೃಶವಾದುದು ಏನೇನೂ ಇಲ್ಲ. ಫ್ಯಾಸಿಸಂ ಹುಟ್ಟಿದ್ದು ಅಕ್ಟೋಬರ್ ಕ್ರಾಂತಿಯ ನಂತರ ಮತ್ತು ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಕಂಡುಬಂದ ಬಂಡವಾಳಶಾಹಿ ವ್ಯವಸ್ಥೆಯ ಆಳವಾದ ಬಿಕ್ಕಟ್ಟಿನ ಅವಧಿಯಲ್ಲಿ. ಹಿಟ್ಲರ್ ಇರಲಿ, ಮುಸಲೋನಿ ಇರಲಿ– ಈ ಎಲ್ಲಾ ಫ್ಯಾಸಿಸ್ಟರು ಕಮ್ಯೂನಿಸಂ ತಮ್ಮ ಬದ್ಧ ವೈರಿ ಎಂದು ಘೋಷಿಸಿದ್ದರು.

ಏಕೆ ಈ ಅಪಪ್ರಚಾರ?

ಫ್ಯಾಸಿಸಂ ಮತ್ತು ಕಮ್ಯೂನಿಸಂ ಎರಡನ್ನೂ ನಿರಂಕುಶ ಸರ್ವಾಧಿಕಾರಿ ಎಂದು ಕರೆಯುವುದು ಯುರೋಪ್‌ನಲ್ಲಿ ಕಳೆದ ಎರಡು ದಶಕಗಳಲ್ಲಿ ತಲೆಯೆತ್ತಿದ ಬಲಪಂಥೀಯ ಮತ್ತು ನವ–ನಾಜಿ ಪ್ರವೃತ್ತಿಗಳನ್ನು ತರ್ಕಸಮ್ಮತಗೊಳಿಸುವ ಹುನ್ನಾರವಾಗಿದೆ.

ಪುಟ 10 ನೋಡಿ

ಅಕ್ಟೋಬರ್ ಕ್ರಾಂತಿ ಜಗತ್ತನ್ನು ಬದಲಿಸಲು ಸಾಧ್ಯವಿದೆ ಎಂದು ತೋರಿಸಿ ಕೊಟ್ಟಿದೆ. ಇದು ಆದರ ಚಿರಂತನ ಪ್ರಸ್ತುತತೆಯಾಗಿ ಉಳಿಯುತ್ತದೆ. ಸೋಲುಗಳೇನೇ ಇದ್ದರೂ ಅಕ್ಟೋಬರ್ ಕ್ರಾಂತಿ ಮತ್ತು ಅದರ ಕೊಡುಗೆಗಳು ಮಾನವ ನಾಗರಿಕತೆಯ ಮುನ್ನಡೆಯ ದಿಕ್ಪಥವನ್ನು ಮುಂದೆಯೂ ರೂಪಿಸುತ್ತವೆ. ಮಾನವೇತಿಹಾಸದ ಈ ಯುಗಾಂತರಕಾರೀ ಘಟನೆ ನಮ್ಮೆಲ್ಲರಿಗೆ ನಮ್ಮ ಕ್ರಾಂತಿಕಾರಿ ಹೋರಾಟಗಳಲ್ಲಿ ಸ್ಫೂರ್ತಿಯ ಸೆಲೆಯಾಗಿಯೇ ಇರುತ್ತದೆ. ಅಕ್ಟೋಬರ್ ಕ್ರಾಂತಿಗೆ ಜಗತ್ತನ್ನು ಬದಲಿಸಲು ಸಾಧ್ಯವಾಗಿದ್ದರೆ, ಭಾರತದ ಕ್ರಾಂತಿಗೂ ಸಾಧ್ಯವಿದೆ. ಈ ಸಾಧ್ಯತೆಯನ್ನು ವಾಸ್ತವಗೊಳಿಸಲು ನಮ್ಮನ್ನು ಸಜ್ಜುಗೊಳಿಸಿಕೊಳ್ಳಬೇಕಾಗಿದೆ.





ಜಗತ್ತನ್ನು ಬದಲಿಸಬಹುದು ಎಂದು ತೋರಿದ ಅಕ್ಟೋಬರ್ ಕ್ರಾಂತಿ

ಸೀತಾರಾಮ್ ಯೆಚೂರಿ

ಈ ವರ್ಷ ನವೆಂಬರ್ 7ರಂದು ನಾವು ಅಕ್ಟೋಬರ್ ಕ್ರಾಂತಿಯ ವಿಜಯದ 100ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಈ ಘಟನೆ 20ನೇ ಶತಮಾನದಲ್ಲಿ ವಿಶ್ವ ಇತಿಹಾಸ ಹಿಡಿದ ದಾರಿಯ ಮೇಲೆ ಆಳವಾದ ಪ್ರಭಾವವನ್ನು ಬೀರಿದೆ, ಮಾನವ ನಾಗರಿಕತೆಯ ಮುನ್ನಡೆಯ ದಿಕ್ಪಥದಲ್ಲಿ ಗುಣಾತ್ಮಕ ಪಲ್ಲಟ ತಂದಿದೆ. ಈ ಯುಗ ಪರಿವರ್ತಕ ಘಟನೆ ಮಾರ್ಕ್ಸ್‌ವಾದದ ಸೃಜನಾತ್ಮಕ ವಿಜ್ಞಾನವನ್ನು ಮತ್ತು ಮಾನವ ನಾಗರಿಕತೆ ಮಾನವ ಶೋಷಣೆಯಿಂದ ಮುಕ್ತವಾದ ಒಂದು ಸಮಾಜ ವ್ಯವಸ್ಥೆಯತ್ತ ಅನಿವಾರ್ಯವಾಗಿಯೇ ಸಾಗುತ್ತದೆ ಎಂಬ ಅದರ ದೃಢ ಪ್ರತಿಪಾದನೆಯನ್ನು ಘಂಟಾಘೋಷವಾಗಿ ಎತ್ತಿ ಹಿಡಿದಿದೆ. ಅದರ ಚಿರಂತನ ಪ್ರಸ್ತುತತೆ ಇರುವುದು ಇಲ್ಲಿಯೇ.

ಕಾರ್ಲ್‌ಮಾರ್ಕ್ಸ್ ನಿಧನರಾದ ಕೂಡಲೇ 1883ರಲ್ಲಿ ಫ್ರೆಡರಿಕ್ ಎಂಗೆಲ್ಸ್ ರವರು ಕಮ್ಯೂನಿಸ್ಟ್ ಪ್ರಣಾಳಿಕೆಯ ಜರ್ಮನ್ ಆವೃತ್ತಿಗೆ ಬರೆದ ಒಂದು ಮನಕಲಕುವ ಮುನ್ನುಡಿಯಲ್ಲಿ “ಪ್ರಣಾಳಿಕೆಯಲ್ಲೆಲ್ಲ ಹರಿದಾಡುವ ಮೂಲ ಚಿಂತನೆ–ಆರ್ಥಿಕ ಉತ್ಪಾದನೆ ಮತ್ತು ಅದರಿಂದ ಮೂಡಿ ಬರುವ ಸಮಾಜದ ರಚನೆ ಪ್ರತಿಯೊಂದು ಚಾರಿತ್ರಿಕ ಕಾಲಘಟ್ಟದಲ್ಲೂ ಆ ಯುಗದ ರಾಜಕೀಯ ಮತ್ತು ಬೌದ್ಧಿಕ ಚರಿತ್ರೆಯ ಅಡಿಪಾಯವಾಗುತ್ತದೆ; ಅದರಿಂದಾಗಿ (ಆದಿಕಾಲದ ಸಾಮುದಾಯಿಕ ಭೂಒಡೆತನ ವಿಸರ್ಜನೆಗೊಂಡಂದಿನಿಂದ) ಎಲ್ಲ ಚರಿತ್ರೆ ವರ್ಗ ಹೋರಾಟಗಳ, ಶೋಷಿತರು ಮತ್ತು ಶೋಷಕರ ನಡುವಿನ, ಸಾಮಾಜಿಕ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಪ್ರಾಬಲ್ಯಕ್ಕೆ ಒಳಗಾದವರು ಮತ್ತು ಪ್ರಾಬಲ್ಯ ನಡೆಸುವವರ ನಡುವಿನ ಹೋರಾಟಗಳ ಒಂದು ಚರಿತ್ರೆಯಾಗಿದೆ, ಈ ಹೋರಾಟ ಈಗ ಶೋಷಿತ ಮತ್ತು ದಮನಿತ ವರ್ಗ (ಶ್ರಮಜೀವಿ ವರ್ಗ) ಶೋಷಕ ಮತ್ತು ದಮನ ಮಾಡುವ ವರ್ಗದಿಂದ(ಬಂಡವಾಳಶಾಹಿಯಿಂದ) ತನ್ನ ವಿಮೋಚನೆ ಮಾಡಿಕೊಳ್ಳಬೇಕಾದರೆ ಅದು ಇಡೀ ಸಮಾಜವನ್ನು ಶೋಷಣೆ, ದಮನ ಮತ್ತು ವರ್ಗ ಹೋರಾಟಗಳಿಂದ ಶಾಶ್ವತವಾಗಿ ಮುಕ್ತಗೊಳಿಸದೆ ಸಾಧ್ಯವಿಲ್ಲ ಎಂಬ ಹಂತ ತಲುಪಿದೆ. ಈ ಮೂಲ ಚಿಂತನೆ ಸಂಪೂರ್ಣವಾಗಿ ಕೇವಲ ಮಾರ್ಕ್ಸ್‌ರವರಿಗೇ ಸೇರಿದ್ದು” ಎಂದಿದ್ದರು.

ಇದನ್ನೇ ಅಕ್ಟೋಬರ್ ಕ್ರಾಂತಿ ಸಾಧಿಸಿದ್ದು. ಅಂದರೆ ‘ಇಡೀ ಸಮಾಜವನ್ನು ಶೋಷಣೆಯಿಂದ ಮುಕ್ತಗೊಳಿಸುವುದು”. ಸಹಜವಾಗಿ ಅಂತರ್ರಾಷ್ಟ್ರೀಯ ಪ್ರತಿಗಾಮಿಗಳು ಮಾರ್ಕ್ಸ್‌ವಾದದ ಮೇಲೆ ಎರಗಿದವು, ಅದರ ತೀರ್ಮಾನಗಳು ಈಡೇರದ ಕನಸೆಂದು ಹೀಗಳೆದರು. ರಷ್ಯಾ ಕ್ರಾಂತಿ ಮತ್ತು ನಂತರ ಸೋವಿಯತ್ ಒಕ್ಕೂಟದ ಸ್ಥಾಪನೆ ಮಾರ್ಕ್ಸ್‌ವಾದ ವೈಜ್ಞಾನಿಕ ಸತ್ಯವನ್ನು ಆಧರಿಸಿರುವ ಒಂದು ಸೃಜನಾತ್ಮಕ ವಿಜ್ಞಾನ ಎಂಬುದನ್ನು ಒತ್ತು ನೀಡಿ ಸ್ಥಿರೀಕರಿಸಿದೆ.

ಅಕ್ಟೋಬರ್ ಕ್ರಾಂತಿಯು ಪ್ರಾಮುಖ್ಯತೆ ಇರುವುದೇ ಇಲ್ಲಿ. ಶೋಷಣೆಯಿಲ್ಲದ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆಯ ಗುರಿ ಈಡೇರಿಸಬಹುದಾದ್ದು ಎಂಬುದು ಮಾನವ ಸೃಜನಾತ್ಮಕತೆಯ ಇದುವರೆಗೆ ಕಾಣದ ಆಯಾಮಗಳನ್ನು ತೆರೆಯುತ್ತದೆ ಕೂಡ. ಸಮಾಜವಾದದ ದಾಪುಗಾಲಿನ ಮುನ್ನಡೆ, ಒಂದೊಮ್ಮೆ ಹಿಂದುಳಿದ ಆರ್ಥಿಕ ವ್ಯವಸ್ಥೆಯನ್ನು ಒಂದು ಬಲಿಷ್ಟವಾದ ಆರ್ಥಿಕ ಮತ್ತು ಮಿಲಿಟರಿ ಕೊತ್ತಳವಾಗಿಸಿ ಸಾಮ್ರಾಜ್ಯಶಾಹಿಯ ಎದುರು ಸೆಟೆದು ನಿಲ್ಲುವಂತೆ ಮಾಡಿದ್ದು ಸಮಾಜವಾದಿ ಪದ್ಧತಿಯ ಶ್ರೇಷ್ಟತೆಯನ್ನು ಸಾರಿದೆ. ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದವನ್ನು ಕಟ್ಟಿದ ಬಗೆ ಮಾನವ ಪ್ರಯತ್ನದ ಒಂದು ಬೃಹತ್ ಗಾಥೆ.

ಸಾಧನೆಗಳು

20ನೇ ಶತಮಾನದ ಚರಿತ್ರೆಯನ್ನು ಪ್ರಧಾನವಾಗಿ ಅಕ್ಟೋಬರ್ ಕ್ರಾಂತಿಯನ್ನು ಅನುಸರಿಸಿ ನಡೆದ ಸಮಾಜವಾದದ ಸ್ಥಾಪನೆ ನಿರ್ಧರಿಸಿದೆ. ಸೋವಿಯತ್ ಒಕ್ಕೂಟ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವಲ್ಲಿ ವಹಿಸಿದ ನಿರ್ಣಾಯಕ ಪಾತ್ರ’ ಮತ್ತು ತನ್ಮೂಲಕ ಪೂರ್ವ ಯೂರೋಪಿನಲ್ಲಿ ಸಮಾಜವಾದಿ ರಾಷ್ಟ್ರಗಳು ಮೂಡಿ ಬಂದದ್ದು ಪ್ರಪಂಚದ ಬೆಳವಣಿಗಳ ಮೇಲೆ ಗಾಢ ಪರಿಣಾಮವನ್ನೇ ಬೀರಿದೆ. ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಮೇಲಿನ ವಿಜಯ–ಕ್ಕೆ ಪ್ರಧಾನ ಕಾರಣ ಸೋವಿಯತ್ ಕೆಂಪು ಸೈನ್ಯ ವಹಿಸಿದ ನಿರ್ಣಾಯಕ ಪಾತ್ರ. ಇದು ವಸಾಹತುಶಾಹಿ ಶೋಷಣೆಯಿಂದ ದೇಶಗಳ ವಿಮೋಚನೆ ಮಾಡಿ ವಸಾಹತುಶಾಹಿಯ ಅಂತ್ಯದ ಪ್ರಕ್ರಿಯೆಗೆ ಪ್ರೇರಣೆ ಒದಗಿಸಿತು. ಚೀನಾ ಕ್ರಾಂತಿಯ ಚಾರಿತ್ರಿಕ ವಿಜಯ, ವಿಯೆಟ್ನಾಮೀ ಜನತೆಯ ಧೀರ ಹೋರಾಟ, ಕೊ–ರಿಯಾದ ಜನತೆಯ ಹೋರಾಟ ಮತ್ತು ಕ್ಯೂಬಾ ಕ್ರಾಂತಿಯ ವಿಜಯ ಪ್ರಪಂಚದ ಬೆಳೆವಣಿಗೆಗಳ ಮೇಲೆ ಮಹತ್ತರ ಪಾತ್ರ ಬೀರಿವೆ.

ಸಮಾಜವಾದಿ ರಾಷ್ಟ್ರಗಳ ಸಾಧನೆಗಳು–ನಿರುದ್ಯೋಗದ ನಿರ್ಮೂಲನೆ, ಶಿಕ್ಷಣ, ಆರೋಗ್ಯ, ವಸತಿ ಮುಂತಾದ ರಂಗಗಳಲ್ಲಿ ಸಾಮಾಜಿಕ ಭದ್ರತೆ–ಯ ವಿಶಾಲ ಜಾಲ ವ್ಯವಸ್ಥೆ–ಜಗತ್ತಿನಾದ್ಯಂತ ಎಲ್ಲಾ ದುಡಿಯುವ ಜನಗಳಿಗೂ ತಮ್ಮ ಹೋರಾಟಗಳಲ್ಲಿ ಆತ್ಮವಿಶ್ವಾಸ ಮತ್ತು ಸ್ಫೂರ್ತಿ ನೀಡಿವೆ.

ಸಮಾಜವಾದದ ಸವಾಲನ್ನು ಜಾಗತಿಕ ಬಂಡವಾಳಶಾಹಿ ಭಾಗಶಃ ಕಲ್ಯಾಣ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮತ್ತು ಹಿಂದೆಂದೂ ದುಡಿಯುವ ಜನಗಳಿಗೆ ನೀಡಿರದಿದ್ದ ಹಕ್ಕುಗಳನ್ನು ನೀಡುವ ಮೂಲಕ ಎದುರಿಸಿತು. ಎರಡನೇಯ ಮಹಾಯುದ್ಧದ ನಂತರ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಇಡೀ ಕಲ್ಯಾಣ ಪ್ರಭುತ್ವದ ಪರಿಕಲ್ಪನೆ ಬಂದದ್ದು ಮತ್ತು ಸಾಮಾಜಿಕ ಭದ್ರತಾ ಜಾಲ ನಿರ್ಮಿಸಿದ್ದು ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ಸಾಧನೆಗಳಿಂದ ಸ್ಫೂರ್ತಿಗೊಂಡ ದುಡಿಯುವ ಜನಗಳ ಹೋರಾಟಗಳ ಒಂದು ಫಲಿತಾಂಶವಾಗಿಯೇ. ಇಂದು ಮಾನವ ನಾಗರಿಕತೆ–ಯ ಅವಿಭಾಜ್ಯ ಅಂಶವೆಂದು ಪರಿಗಣಿಸಿರುವ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರೀಕ ಸ್ವಾತಂತ್ರ್ಯಗಳು ಸಾಮಾಜಿಕ ಪರಿವರ್ತನೆಗಾಗಿ ಜನಗಳ ಹೋರಾಟದ ಫಲವೇ ಹೊರತು ಬೂರ್ಜ್ವಾ ವರ್ಗ ಆಳ್ವಿಕೆಯ ದಾನವೇನಲ್ಲ.

ಈ ಕ್ರಾಂತಿಕಾರಿ ಪರಿವರ್ತನೆಗಳು ಮಾನವ ನಾಗರಿಕತೆಯಲ್ಲಿ ಗುಣಾತ್ಮಕ ನೆಗೆತಗಳನ್ನು ತಂದವು ಮತ್ತು ಆಧುನಿಕ ನಾಗರೀಕತೆಯ ಮೇಲೂ ಅಚ್ಚಳಿಯದ ಗುರುತು ಮೂಡಿಸಿವೆ. ಇದರ ಪ್ರತಿಫಲನ ಸಂಸ್ಕೃತಿ, ವಿಜ್ಞಾನ, ಸೌಂದರ್ಯಶಾಸ್ತ್ರ ಮುಂತಾಗಿ ಎಲ್ಲ ರಂಗಗಳಲ್ಲೂ ಕಾಣ ಬಂದವು. ಐಸೆನ್‌ಸ್ಟೈನ್ ಸಿನಿಮಾಶಾಸ್ತ್ರದ ವ್ಯಾಕರಣದಲ್ಲಿ ಕ್ರಾಂತಿ ತಂದರೆ, ಸ್ಪೂಟ್ನಿಕ್ ಆಧುನಿಕ ವಿಜ್ಞಾನದ ಎಲ್ಲೆಗಳನ್ನು ಬಾಹ್ಯಾಕಾಶಕ್ಕೂ ವಿಸ್ತರಿಸಿತು.

ಸೋಲುಗಳು

ಇಂತಹ ಮಹತ್ತರ ಮುನ್ನಡೆಗಳು ಸಂಭವಿಸಿದರೂ, ಮತ್ತು 20ನೇ ಶತಮಾನದಲ್ಲಿ ಮಾನವ ನಾಗರಿಕತೆಯ ಮುನ್ನಡೆಯ ಮೇಲೆ ಅಚ್ಚಳಿಯದ ಪ್ರಭಾವಗಳನ್ನು ಬೀರಿದರೂ ಬಲಿಷ್ಟ ಸೋವಿಯೆತ್ ಒಕ್ಕೂಟ ವಿಘಟನೆ ಹೊಂದಿ ಅಲ್ಲಿ ಸಮಾಜವಾದ ಅಳಿಯುವಂತಾಯಿತು. ಇದ–ಕ್ಕೆ ಕಾರಣಗಳನ್ನು ಸಿಪಿಐ(ಎಂ) ತನ್ನ 14ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಲ್ಲಿ ವಿಶ್ಲೇಷಿಸಿದೆ.

ಸಮಾಜವಾದದ ಸ್ಥಾಪನೆಯ ನಂತರ ಭವಿಷ್ಯ ಎಂಬುದು ಒಂದು ಸರಳರೇಖೆ, ಹಿಂತಿರುಗದ ನೇರ ಹಾದಿ ಎಂದು ತಪ್ಪಾಗಿ ಭಾವಿಸಲಾಗಿತ್ತು. 2ನೇ ಮಹಾಯುದ್ಧದ ನಂತರ ಪ್ರಪಂಚದ ಮೂರನೇ ಒಂದು ಜಗತ್ತು ಸಮಾಜವಾದದ ಅಡಿಯಲ್ಲಿ ಬಂದರೂ, ಬಹುತೇಕ ಈ ದೇಶಗಳು ಬಂಡವಾಳಶಾಹಿ ಅಭಿವೃದ್ಧಿಯ ದೃಷ್ಟಿಯಲ್ಲಿ ಹಿಂದುಳಿದಿದ್ದವು. ಮೂರನೇ ಎರಡು ಭಾಗ ಮುಂದುವರೆದ ಬಂಡವಾಳಶಾಹಿಯ ನೇತೃತ್ವದಲ್ಲಿಯೇ ಇದ್ದುವೆಂದರೆ ಅದರ ಅರ್ಥ ತಾನು ಕಳೆದುಕೊಂಡ ಜಗತ್ತಿನ ಮೇಲಿನ ಹತೋಟಿಯನ್ನು ಮತ್ತೆ ಪಡೆಯಲಿಕ್ಕೆ ನಿರಂತರವಾಗಿ ಪ್ರಯತ್ನಿಸುತ್ತಿದ್ದ ವಿಶ್ವ ಬಂಡವಾಳಶಾಹಿಯಿಂದ ವಿಶ್ವ ಸಮಾಜವಾದ ಇನ್ನೂ ಸುತ್ತುವರೆಯಲ್ಪಟ್ಟಿತ್ತು ಎಂದೇ ಆಗಿತ್ತು.

ಸಮಾಜವಾದ ಬಂಡವಾಳಶಾಹಿಯನ್ನು ಕಿತ್ತೊಗೆದರೂ ಅದೊಂದು ವರ್ಗಶೋಷಣೆ ಆಧಾರಿತ ಬಂಡವಾಳಶಾಹಿಯಿಂದ ಸಮತಾವಾದದ ವರ್ಗವಿಹೀನ ಸಮಾಜದತ್ತ ಚಲನೆಯಲ್ಲಿ ಸಂಕ್ರಮಣದ ಘಟ್ಟ ಮಾತ್ರ. ಆದ್ದರಿಂದ ಸಮಾಜವಾದದತ್ತ

> **ಸಮಾಜವಾದಿ ರಾಷ್ಟ್ರಗಳ ಸಾಧನೆಗಳು–ನಿರುದ್ಯೋಗದ ನಿರ್ಮೂಲನೆ, ಶಿಕ್ಷಣ, ಆರೋಗ್ಯ, ವಸತಿ ಮುಂತಾದ ರಂಗಗಳಲ್ಲಿ ಸಾಮಾಜಿಕ ಭದ್ರತೆಯ ವಿಶಾಲ ಜಾಲ ವ್ಯವಸ್ಥೆ–ಜಗತ್ತಿನಾದ್ಯಂತ ಎಲ್ಲಾ ದುಡಿಯುವ ಜನಗಳಿಗೂ ತಮ್ಮ ಹೋರಾಟಗಳಲ್ಲಿ ಆತ್ಮವಿಶ್ವಾಸ ಮತ್ತು ಸ್ಫೂರ್ತಿ ನೀಡಿವೆ. ಈ ಕ್ರಾಂತಿಕಾರಿ ಪರಿವರ್ತನೆಗಳು ಮಾನವ ನಾಗರಿಕತೆಯಲ್ಲಿ ಗುಣಾತ್ಮಕ ನೆಗೆತಗಳನ್ನು ತಂದವು ಮತ್ತು ಆಧುನಿಕ ನಾಗರೀಕತೆ–ಯ ಮೇಲೂ ಅಚ್ಚಳಿಯದ ಗುರುತು ಮೂಡಿಸಿವೆ. ಇದರ ಪ್ರತಿಫಲನ ಸಂಸ್ಕೃತಿ, ವಿಜ್ಞಾನ, ಸೌಂದರ್ಯಶಾಸ್ತ್ರ ಮುಂತಾಗಿ ಎಲ್ಲ ರಂಗಗಳಲ್ಲೂ ಕಾಣ ಬಂದವು.**

> **ಸೋವಿಯತ್ ಒಕ್ಕೂಟ ಮತ್ತು ಜಾಗತಿಕ ಸಮಾಜವಾದ ಸಾಮ್ರಾಜ್ಯಶಾಹಿಯ ಸವಾಲನ್ನು ಎದುರಿಸಿದರೂ ಅದರ ಆಂತರಿಕ ಶಕ್ತಿ ಕೆಲವು ತಪ್ಪುಗಳಿಂದ ಮತ್ತು ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ನಿರ್ಮಾಣದ ಪ್ರಕ್ರಿಯೆಯಲ್ಲಿನ ನ್ಯೂನ್ಯತೆಗಳಿಂದಾಗಿ ದುರ್ಬಲಗೊಂಡಿತು. ಹಿಂದಿರುಗಿ ನೋಡಿದಾಗ ಮೂಲತಃ ನಾಲ್ಕು ರಂಗಗಳಲ್ಲಿ ಪ್ರಮುಖ ನ್ಯೂನ್ಯತೆಗಳನ್ನು ಕಾಣಬಹುದು. ಸಮಾಜವಾದ ಹಿಂದೆ ಯಾರೂ ಸಾಗದ ಮಾನವ ಮುನ್ನಡೆಯ ಹಾದಿಯಲ್ಲಿ ಸಾಗಬೇಕಾಗಿತ್ತು ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಸಮಾಜವಾದಿ ರಚನೆಯ ನೀಲನಕ್ಷೆಗಳಿರಲಿಲ್ಲ, ಅಥವ ನಿರ್ದಿಷ್ಟ ಸೂತ್ರಗಳು ಇರಲಿಲ್ಲ.**

> **ಸಮಾಜವಾದಕ್ಕೆ ಈ ಸೋಲುಗಳು ಉಂಟಾಗಿರುವುದು ಮಾರ್ಕ್ಸ್‌ವಾದ–ಲೆನಿನ್‌ವಾದದ ಕ್ರಾಂತಿಕಾರಿ ತತ್ವಗಳಲ್ಲಿನ ಯಾವುದೇ ಅಸಮರ್ಪಕತೆಯಿಂದ ಅಲ್ಲ ಎಂಬ ತೀರ್ಮಾನಕ್ಕೆ ಖಂಡಿತವಾಗಿ ಬರಬಹುದು. ಬದಲಾಗಿ, ಅವು ಉಂಟಾಗಿರುವುದು ಪ್ರಥಮತಃ ಮಾರ್ಕ್ಸ್‌ವಾದ–ಲೆನಿನ್‌ವಾದದ ವೈಜ್ಞಾನಿಕ ಮತ್ತು ಕ್ರಾಂತಿಕಾರಿ ಚಿಂತನೆಯಿಂದ ದೂರ ಸರಿದ ಕಾರಣದಿಂದಾಗಿಯೇ. ಆದ್ದರಿಂದ ಈ ಸೋಲುಗಳು ಮಾರ್ಕ್ಸ್‌ವಾದ–ಲೆನಿನ್‌ವಾದದ ಅಥವಾ ಸಮಾಜವಾದಿ ಆದರ್ಶದ ನಿರಾಕರಣೆ ಅಲ್ಲ.**



ಸಂಕ್ರಮಣದ ಈ ಅವಧಿ ತೀವ್ರಗೊಂಡ ವರ್ಗ ಹೋರಾಟಗಳ ರಂಗಭೂಮಿ– ಒಂದೆಡೆಯಲ್ಲಿ ಬಂಡವಾಳಶಾಹಿ ಸಮಾಜವಾದವನ್ನು ಕಿತ್ತೊಗೆಯುವ ಪ್ರಯತ್ನ ಮಾಡುತ್ತಿದ್ದರೆ, ಸಮಾಜವಾದ ತನ್ನನ್ನು ಕ್ರೋಢೀಕರಿಸಿಕೊಂಡು ಜಾಗತಿಕವಾಗಿ ಬಂಡವಾಳದ ಆಳ್ವಿಕೆಯ ಮೇಲೆ ಹೆಚ್ಚೆಚ್ಚು ಪ್ರಹಾರ ನಡೆಸುವ ಪ್ರಯತ್ನ ನಡೆಸುತ್ತದೆ. ಆದ್ದರಿಂದ ಈ ಸಂಕ್ರಮಣ ಕಾಲಘಟ್ಟದಲ್ಲಿ ವರ್ಗಶಕ್ತಿಗಳ ಬಲಾಬಲ ಸಮಾಜವಾದೀ ಕ್ರೋಡೀಕರಣದ ಯಶಸ್ಸುಗಳನ್ನು ಅವಲಂಬಿಸಿ ವ್ಯತ್ಯಸ್ಥಗೊಳ್ಳಬಹುದು.

ವರ್ಗಶಕ್ತಿಗಳ ಬಲಾಬಲಗಳ ಅಂದಾಜುಗಳಲ್ಲಿ ತಪ್ಪುಗಳಿದ್ದರೆ, ಅದು ಸಹಜವಾಗಿಯೇ ಸಮಾಜವಾದದತ್ತ ಮುನ್ನಡೆಯ ಸ್ವರೂಪವನ್ನು ಬಾಧಿಸಬಹುದು. ಫ್ಯಾಸಿಸಂ ಪತನ ಮತ್ತು ಮೇಲೆ ಹೇಳಿದ ಇತರ ಸಮಾಜವಾದಿ ಕ್ರಾಂತಿಗಳಿಂದಾಗಿ ಉಂಟಾದ ತಪ್ಪು ಅಂದಾಜಿನಿಂದ ಸಮಾಜವಾದದ ಶಕ್ತಿಯನ್ನು ಉತ್ಪ್ರೇಕ್ಷಿಸಿ, ಬಂಡವಾಳಶಾಹಿಯ ಶಕ್ತಿಯನ್ನು, ಸಾಮರ್ಥ್ಯವನ್ನು ನಿರ್ಲಕ್ಷಿಸುವ ತಪ್ಪು ಪ್ರವೃತ್ತಿ ಕಾಣ ಬಂತು. ಮುಂದುವರೆದ ಬಂಡವಾಳಶಾಹಿ ದೇಶಗಳೊಂದಿಗೆ ಮೂರನೇ ಎರಡು ಜಗತ್ತಿನಲ್ಲಿ ಬಂಡವಾಳಶಾಹಿ ಉಳಿದುಕೊಂಡಿದೆ ಎಂದರೆ ಉತ್ಪಾದನಾ ಶಕ್ತಿಗಳ ಮೇಲೆ ಅವರ ನಿಯಂತ್ರಣ ಇನ್ನೂ ಉಳಿದಿದೆ ಎಂದೇ ಅರ್ಥ. ಬದಲಾದ ಜಾಗತಿಕ ವ್ಯವಸ್ಥೆಗೆ ತನ್ನನ್ನು ಹೊಂದಿಸಿಕೊಂಡು ಬಂಡವಾಳಶಾಹಿ ತನ್ನನ್ನು ಹೆಚ್ಚು ಹೆಚ್ಚಾಗಿ ಕ್ರೋಢೀಕರಿಸಿಕೊಂಡಿತು, ಇನ್ನೊಂದೆಡೆಯಲ್ಲಿ ಸಮಾಜವಾದದ ವಿರುದ್ಧ ಒಂದು ಅವಿರತ ಮಿಲಿಟರಿ, ರಾಜಕೀಯ ಮತ್ತು ಆರ್ಥಿಕ ದಾಳಿಯನ್ನು ನಡೆಸುತ್ತ ಸಮಾಜವಾದದ ವಿರುದ್ಧ ಪ್ರಚಾರವನ್ನು ಮುಂದುವರೆಸಿತು. ಈ ಎರಡನೇ ಮಹಾಯುದ್ಧದ ನಂತರದ ಅವಧಿಯನ್ನು ಸಾಮಾನ್ಯವಾಗಿ ಜಾಗತಿಕ ಎರಡು ಧ್ರುವಗಳ ಶೀತಲ ಯುದ್ಧ ಎಂದು ಹೇಳಲಾಗುತ್ತದೆ.



ಸೋವಿಯತ್ ಒಕ್ಕೂಟ ಮತ್ತು ಜಾಗತಿಕ ಸಮಾಜವಾದ ಸಾಮ್ರಾಜ್ಯಶಾಹಿಯ ಸವಾಲನ್ನು ಎದುರಿಸಿದರೂ ಅದರ ಆಂತರಿಕ ಶಕ್ತಿ ಕೆಲವು ತಪ್ಪುಗಳಿಂದ ಮತ್ತು ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ನಿರ್ಮಾಣದ ಪ್ರಕ್ರಿಯೆಯಲ್ಲಿನ ನ್ಯೂನ್ಯತೆಗಳಿಂದಾಗಿ ದುರ್ಬಲಗೊಂಡಿತು. ಹಿಂದಿರುಗಿ ನೋಡಿದಾಗ ಮೂಲತಃ ನಾಲ್ಕು ರಂಗಗಳಲ್ಲಿ ಪ್ರಮುಖ ನ್ಯೂನ್ಯತೆಗಳನ್ನು ಕಾಣಬಹುದು. ಸಮಾಜವಾದ ಹಿಂದೆ ಯಾರೂ ಸಾಗದ ಮಾನವ ಮುನ್ನಡೆಯ ಹಾದಿಯಲ್ಲಿ ಸಾಗಬೇಕಾಗಿತ್ತು ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಸಮಾಜವಾದಿ ರಚನೆಯ ನೀಲನಕ್ಷೆಗಳಿರಲಿಲ್ಲ, ಅಥವ ನಿರ್ದಿಷ್ಟ ಸೂತ್ರಗಳು ಇರಲಿಲ್ಲ.

ಈ ನ್ಯೂನತೆಗಳು, ಸಿಪಿಐ(ಎಂ) 14ನೇ ಮಹಾಧಿವೇಶನದಲ್ಲಿ ವಿಶ್ಲೇಷಿಸಿದಂತೆ, ಸಮಾಜವಾದಿ ಪ್ರಭುತ್ವದ ವರ್ಗ ಚಾರಿತ್ರ್ಯ, ಸಮಾಜವಾದಿ ಪ್ರಜಾಪ್ರಭುತ್ವದ ಸ್ಥಾಪನೆ, ಮತ್ತು ಸಮಾಜವಾದದ ಅಡಿಯಲ್ಲಿ ಜನತೆಯ ಸೈದ್ಧಾಂತಿಕ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವಲ್ಲಿನ ಉಪೇಕ್ಷೆ–ಈ ಅಂಶಗಳಲ್ಲಿ ಕಂಡು ಬಂದವು. (ಒಂದು ವಿವರವಾದ ವಿಶ್ಲೇಷಣೆ 14ನೇ ಮಹಾಧಿವೇಶನದ ನಿರ್ಣಯದಲ್ಲಿ ಇದೆ).

ಆದ್ದರಿಂದ ಸಮಾಜವಾದಕ್ಕೆ ಈ ಸೋಲುಗಳು ಉಂಟಾಗಿರುವುದು ಮಾರ್ಕ್ಸ್‌ವಾದ–ಲೆನಿನ್‌ವಾದದ ಕ್ರಾಂತಿಕಾರಿ ತತ್ವಗಳಲ್ಲಿನ ಯಾವುದೇ ಅಸಮರ್ಪಕತೆಯಿಂದ ಅಲ್ಲ ಎಂಬ ತೀರ್ಮಾನಕ್ಕೆ ಖಂಡಿತವಾಗಿ ಬರಬಹುದು. ಬದಲಾಗಿ, ಅವು ಉಂಟಾಗಿರುವುದು ಪ್ರಥಮತಃ ಮಾರ್ಕ್ಸ್‌ವಾದ–ಲೆನಿನ್‌ವಾದದ ವೈಜ್ಞಾನಿಕ ಮತ್ತು ಕ್ರಾಂತಿಕಾರಿ ಚಿಂತನೆಯಿಂದ ದೂರ ಸರಿದ ಕಾರಣದಿಂದಾಗಿಯೇ. ಆದ್ದರಿಂದ ಈ ಸೋಲುಗಳು ಮಾರ್ಕ್ಸ್‌ವಾದ–ಲೆನಿನ್‌ವಾದದ ಅಥವಾ ಸಮಾಜವಾದಿ ಆದರ್ಶದ ನಿರಾಕರಣೆ ಅಲ್ಲ.

ಪ್ರಸಕ್ತ ಬಂಡವಾಳಶಾಹಿ ಬಿಕ್ಕಟ್ಟು ಮತ್ತು ಸಮಾಜವಾದಿ ಪರ್ಯಾಯ

ಸಮಾಜವಾದಿ ಆದರ್ಶ ಇನ್ನೂ ಇಂದಿನ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಮನುಕುಲ ತನ್ನನ್ನು ಶೋಷಣೆಯಿಂದ ವಿಮೋಚಿಸಿಕೊಳ್ಳುವ ಏಕೈಕ ವಿಧಾನವಾಗಿಯೇ ಉಳಿದಿದೆ. 2008ರಲ್ಲಿ ಜಾಗತಿಕ ಹಣಕಾಸು ಕುಸಿತ ಕಂಡಂದಿನಿಂದ ಜಾಗತಿಕ ಬಂಡವಾಳಶಾಹಿ ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿನ ಆಳಕ್ಕೆ ಬೀಳುತ್ತಲೇ ಇದೆ. ಬಿಕ್ಕಟ್ಟನ್ನು ಮೀರಿ ನಿಲ್ಲುವ ಅದರ ಪ್ರತಿಯೊಂದು ನಡೆಯೂ ಮತ್ತೊಂದು ಇನ್ನಷ್ಟು ಆಳವಾದ ಬಿಕ್ಕಟ್ಟಿನ ಬೀಜವನ್ನು ಹಾಕುತ್ತಿದೆ. ತೀವ್ರಗೊಂಡ ಬಂಡವಾಳಶಾಹಿ ಶೋಷಣೆಯ ಮೂಲಕ ಜನಗಳ ಮೇಲೆ ಹಿಂದೆಂದೂ ಕಾಣದ ಆರ್ಥಿಕ ಹೊರೆಗಳ ಹೇರಿಕೆ, ಅದರಿಂದಾಗಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗಳ ಕಂದರ ಮತ್ತು ಜಗತ್ತಿನ ಜನಸಂಖ್ಯೆಯ ಬಹುಪಾಲು ವಿಭಾಗಗಳು ದಾರಿದ್ರ್ಯದ ಕೂಪಕ್ಕೆ ತಳ್ಳಲ್ಪಡುತ್ತಿರುವುದನ್ನು ನೋಡಿದರೆ ಬಂಡವಾಳಶಾಹಿಯ ಸುಲಿಗೆಕೋರ ಪ್ರವೃತ್ತಿ ಹೆಚ್ಚು ನಗ್ನವಾದ ಸ್ವರೂಪ ಪಡೆಯುತ್ತಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಬಂಡವಾಳಶಾಹಿಯ ಒಳಗೆ ಎಷ್ಟೇ ಸುಧಾರಣೆಗಳನ್ನು ತಂದರೂ ಮನುಕುಲವನ್ನು ಇಂತಹ ಶೋಷಣೆಯ ಕಪಿಮುಷ್ಟಿಯಿಂದ ವಿಮೋಚಿಸಲು ಸಾಧ್ಯವಾಗದು. ಸಮಾಜವಾದದ ರಾಜಕೀಯ ಪರ್ಯಾಯ ಮಾತ್ರವೇ ಈ ಉದ್ದೇಶವನ್ನು ಈಡೇರಿಸಬಲ್ಲದು. ಅಂತಿಮವಾಗಿ ಶೋಷಣೆಯಿಂದ ಮಾನವ ವಿಮೋಚನೆಯಾಗಬೇಕಾದರೆ ಬಂಡವಾಳದ ಆಳ್ವಿಕೆಯ ಮೇಲೆ ಸಮಾಜವಾದದ ಈ ರಾಜಕೀಯ ಪರ್ಯಾಯದ ಪ್ರಹಾರವನ್ನು ತೀವ್ರಗೊಳಿಸಲೇ ಬೇಕಾಗಿದೆ.

ಬಿಕ್ಕಟ್ಟು ಎಷ್ಟೇ ತೀವ್ರವಾಗಿರಲಿ, ಬಂಡವಾಳಶಾಹಿ ಎಂದೂ ತಂತಾನೇ ಕುಸಿಯುವುದಿಲ್ಲ ಬಂಡವಾಳಶಾಹಿಗೆ ಸವಾಲು ಹಾಕಲು ಒಂದು ರಾಜಕೀಯ ಪರ್ಯಾಯ ಬೆಳೆಯದಿದ್ದರೆ, ಅದು ಮಾನವ ಶೋಷಣೆಯನ್ನು ತೀವ್ರಗೊಳಿಸುವ ಮೂಲಕವೇ ಬದುಕುಳಿಯುತ್ತದೆ. ಆದ್ದರಿಂದ ಸಮಾಜವಾದಿ ರಾಜಕೀಯ ಪರ್ಯಾಯದ ಶಕ್ತಿ ವ್ಯಾಪಕವಾಗಿ ವೃದ್ಧಿಯಾಗಬೇಕು. ಬಂಡವಾಳಶಾಹಿ ಕೊಳ್ಳೆಯ ಪ್ರಸಕ್ತ ಸುಲಿಗೆಕೋರ ಅಭಿವ್ಯಕ್ತಿ ಮತ್ತು ಅದರೊಂದಿಗೆ ಬರುವ ಸಾಮ್ರಾಜ್ಯಶಾಹಿ ಯಜಮಾನಿಕೆಯ ಆಕ್ರಮಣಕೋರತನದ ವಿರುದ್ಧ ಜಗತ್ತಿನ ಎಲ್ಲೆಡೆಗಳಲ್ಲಿ ಹೋರಾಟಗಳು ಬೆಳೆಯುತ್ತಿದ್ದರೂ, ಅವು ಇನ್ನೂ ರಕ್ಷಣಾತ್ಮಕವಾಗಿಯೇ ಉಳಿದಿವೆ. ರಕ್ಷಣಾತ್ಮಕ ಎಂದರೆ ಜನತೆ ತಮ್ಮ ಈಗಿರುವ ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ಮತ್ತು ದೈನಂದಿನ ಬದುಕಿನ ರಕ್ಷಣೆಗಾಗಿಯೇ

> **ಸಮಾಜವಾದಿ ಆದರ್ಶ ಇನ್ನೂ ಇಂದಿನ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಮನುಕುಲ ತನ್ನನ್ನು ಶೋಷಣೆಯಿಂದ ವಿಮೋಚಿಸಿಕೊಳ್ಳುವ ಏಕೈಕ ವಿಧಾನವಾಗಿಯೇ ಉಳಿದಿದೆ. ಬಂಡವಾಳಶಾಹಿಯ ಸುಲಿಗೆಕೋರ ಪ್ರವೃತ್ತಿ ಹೆಚ್ಚು ನಗ್ನವಾದ ಸ್ವರೂಪ ಪಡೆಯುತ್ತಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಬಂಡವಾಳಶಾಹಿಯ ಒಳಗೆ ಎಷ್ಟೇ ಸುಧಾರಣೆಗಳನ್ನು ತಂದರೂ ಮನುಕುಲವನ್ನು ಇಂತಹ ಶೋಷಣೆಯ ಕಪಿಮುಷ್ಟಿಯಿಂದ ವಿಮೋಚಿಸಲು ಸಾಧ್ಯವಾಗದು. ಸಮಾಜವಾದದ ರಾಜಕೀಯ ಪರ್ಯಾಯ ಮಾತ್ರವೇ ಈ ಉದ್ದೇಶವನ್ನು ಈಡೇರಿಸಬಲ್ಲದು. ಅಂತಿಮವಾಗಿ ಶೋಷಣೆಯಿಂದ ಮಾನವ ವಿಮೋಚನೆಯಾಗಬೇಕಾದರೆ ಬಂಡವಾಳದ ಆಳ್ವಿಕೆಯ ಮೇಲೆ ಸಮಾಜವಾದದ ಈ ರಾಜಕೀಯ ಪರ್ಯಾಯದ ಪ್ರಹಾರವನ್ನು ತೀವ್ರಗೊಳಿಸಲೇ ಬೇಕಾಗಿದೆ.**

ಹೋರಾಟದಲ್ಲಿ ತೊಡಗಬೇಕಾಗಿದೆ. ಇಂತಹ ಹೋರಾಟಗಳು ಶೇಖರಗೊಂಡು ಬಂಡವಾಳದ ಆಳ್ವಿಕೆಯ ವಿರುದ್ಧ ವರ್ಗ ಪ್ರಹಾರ ಮಾಡುವ ಮಟ್ಟಗಳನ್ನು ತಲುಪಬೇಕಾಗಿದೆ. ಇದಕ್ಕೆ, ನಾವು 20ನೇ ಮಹಾಧಿವೇಶನದ ಸೈದ್ಧಾಂತಿಕ ನಿರ್ಣಯದಲ್ಲಿ ವಿಶ್ಲೇಷಿಸಿದಂತೆ, ಲೆನಿನ್‌ವಾದಿ ಕರ್ತೃ ಅಂಶ ಬಲಗೊಳ್ಳಬೇಕು, ಅಂದರೆ ಜನರ ಹೋರಾಟಗಳು ಮತ್ತು ಚಳುವಳಿಗಳನ್ನು ಒಟ್ಟುಗೂಡಿಸಿ ಆಯಾಯ ದೇಶದಲ್ಲಿ ಬಂಡವಾಳದ ವಿರುದ್ಧ ಇಂತಹ ಒಂದು ನಿರ್ಣಾಯಕ ಪ್ರಹಾರ ಮಾಡಬಲ್ಲ ಕ್ರಾಂತಿಕಾರಿ ಪಕ್ಷದ ಸಾಮರ್ಥ್ಯ ಬಲಗೊಳ್ಳಬೇಕು.

ಸಿಪಿಐ(ಎಂ) ಇಂದು ಈ ಕಾರ್ಯದಲ್ಲಿಯೇ ತೊಡಗಿದೆ. ನಮ್ಮ 21ನೇ ಮಹಾಧಿವೇಶನ ಮತ್ತು ಸಂಘಟನಾ ಪ್ಲೀನಂ ಭಾರತದ ಪರಿಸ್ಥಿತಿಗಳಲ್ಲಿ ಈ ಕರ್ತೃ ಅಂಶವನ್ನು ಬಲಪಡಿಸುವ ಈ ಉದ್ದೇಶ ಸಾಧನೆಯ ಮೇಲೆ ಗಮನ ಕೇಂದ್ರೀಕರಿಸಿವೆ.

ಭಾರತೀಯ ಪರಿಸ್ಥಿತಿಗಳಲ್ಲಿ ಸಮಾಜವಾದ

ಭಾರತದಲ್ಲಿ ಸಮಾಜವಾದ ಎಂದರೇನು ಎಂಬುದನ್ನು ಭಾರತೀಯ ಕ್ರಾಂತಿಯ ಪ್ರಜಾಸತ್ತಾತ್ಮಕ ಘಟ್ಟವನ್ನು, ಅಂದರೆ ಜನತಾ ಪ್ರಜಾಪ್ರಭುತ್ವ

ಪುಟ 10 ನೋಡಿ

> **ಭಾರತದಲ್ಲಿ ಸಮಾಜವಾದ ಎಂದರೆ ಏನರ್ಥ? ಅದರ ಅರ್ಥ ಎಲ್ಲ ಜನತೆಗೆ ಆಹಾರ ಭದ್ರತೆ, ಪೂರ್ಣ ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತು ವಸತಿಯ ಸಾರ್ವತ್ರಿಕ ಲಭ್ಯತೆ. ಅದರ ಅರ್ಥ ಕಾರ್ಮಿಕರು, ರೈತರು ಮತ್ತು ಇದುವರೆಗೆ ಅಂಚಿಗೆ ತಳ್ಳಲ್ಪಟ್ಟ ಜನವಿಭಾಗಗಳ ಬದುಕಿನ ಪರಿಸ್ಥಿತಿಗಳನ್ನು ವ್ಯಾಪಕ ರೀತಿಯಲ್ಲಿ ಉತ್ತಮ ಪಡಿಸಿ ಜನತೆಯ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಬಲೀಕರಣ**

ಜಗತ್ತನ್ನು ಬದಲಿಸಬಹುದು ಎಂದು ತೋರಿದ..... ಪುಟ 9 ರಿಂದ

ಕ್ರಾಂತಿಯನ್ನು ಪೂರ್ಣಗೊಳಿಸಿದ ಮೇಲೆಯೇ ಮೂರ್ತಗೊಳಿಸಲು ಸಾಧ್ಯ.

ಆದರೂ, ಸಮಾಜವಾದದ ಅಡಿಯಲ್ಲಿ ಎಲ್ಲ ಮಾನವ ಜೀವಿಗಳ ಸಾಮರ್ಥ್ಯವನ್ನು ಪೂರ್ಣವಾಗಿ ಈಡೇರಿಸಲು ಯಾವುದು ಆಧಾರವಾಗ ಬಲ್ಲದು ಎಂಬುದನ್ನು ನಾವು ನಿರೀಕ್ಷಿಸಲು ಸಾಧ್ಯವಿದೆ. ಆದ್ದರಿಂದ, ಭಾರತದಲ್ಲಿ ಸಮಾಜವಾದ ಎಂದರೆ ಏನರ್ಥ?

ಅದರ ಅರ್ಥ ಎಲ್ಲ ಜನತೆಗೆ ಆಹಾರ ಭದ್ರತೆ, ಪೂರ್ಣ ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತು ವಸತಿಯ ಸಾರ್ವತ್ರಿಕ ಲಭ್ಯತೆ. ಅದರ ಅರ್ಥ ಕಾರ್ಮಿಕರು, ರೈತರು ಮತ್ತು ಇದುವರೆಗೆ ಅಂಚಿಗೆ ತಳ್ಳಲ್ಪಟ್ಟ ಜನವಿಭಾಗಗಳ ಬದುಕಿನ ಪರಿಸ್ಥಿತಿಗಳನ್ನು ವ್ಯಾಪಕ ರೀತಿಯಲ್ಲಿ ಉತ್ತಮ ಪಡಿಸಿ ಜನತೆಯ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಬಲೀಕರಣ.

ಅದರ ಅರ್ಥ ಎಲ್ಲಕ್ಕೂ ಮೊದಲು, ಎಲ್ಲಕ್ಕಿಂತ ಮುಖ್ಯವಾಗಿ, ಜನತಾ ಶಕ್ತಿಯ ಪಾರಮ್ಯ. ಅಂದ–ರೆ ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳು ಸಮಾಜವಾದಿ ನ್ಯಾಯಿಕ, ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಶಗಳಾಗಿರುತ್ತವೆ. ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲಿ ಭ್ರಾಮಕವಾದ ಔಪಚಾರಿಕ ಹಕ್ಕುಗಳು ಇರಬಹುದು, ಆದರೆ ಬಹುಪಾಲು ಜನತೆಗೆ ಆ ಹಕ್ಕುಗಳನ್ನು ಚಲಾಯಿಸುವ ಸಾಮರ್ಥ್ಯವನ್ನು ನಿರಾಕರಿಸಲಾಗಿದೆ. ಸಮಾಜವಾದದ ಅಡಿಯಲ್ಲಿ ಪ್ರಜಾಪ್ರಭುತ್ವ ಎಂಬುದು ಎಲ್ಲ ಜನತೆಯ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಬಲೀಕರಣದ ಮೇಲೆ ನಿಂತಿರುತ್ತದೆ. ಇದು ಮಾನವ ಬದುಕಿನ ಗುಣಮಟ್ಟವನ್ನು ಸತತವಾಗಿ ಆಳಗೊಳಿಸಲು ಮತ್ತು ಬೆಳೆಸಲಿಕ್ಕೆ ಮೂಲಭೂತ ಮತ್ತು ಅನಿವಾರ್ಯ ಆವಶ್ಯಕತೆ. ಈ ಬುನಾದಿಯ ಮೇಲೆಯೇ ಸಮಾಜವಾದಿ ಪಜಾಪ್ರಭುತ್ವ ಅರಳಲು ಸಾಧ್ಯ. ಸಮಾಜವಾದದ ಅಡಿಯಲ್ಲಿ ಭಿನ್ನಮತದ, ಅಭಿವ್ಯಕ್ತಿ ಸ್ವಾತಂತ್ರ್ಯದ ಮತ್ತು ಅಭಿಪ್ರಾಯಗಳ ಬಹುಳತೆಯ ಹಕ್ಕು ಶ್ರಮಜೀವಿಗಳ ಪ್ರಭುತ್ವದ ಅಡಿಯಲ್ಲಿ ಸಮಾಜವಾದವನ್ನು ಬಲಪಡಿಸುವ ಗುರಿಯೊಂದಿಗೆ ಸಮೃದ್ಧಗೊಳ್ಳುತ್ತದೆ.

ಇದರ ಅರ್ಥ ಸಮಾಜವಾದಿ ಆರ್ಥಿಕ ರಚನಾ ಕಾರ್ಯ ಸಮಾಜೀಕೃತ ಉತ್ಪಾದನಾ ಸಾಧನಗಳು ಮತ್ತು ಕೇಂದ್ರೀಯ ಯೋಜನಾ ವ್ಯವಸ್ಥೆಯ ಮೇಲೆ ಆಧಾರಿತವಾಗಿರುತ್ತದೆ. ಸರಕುಗಳ ಉತ್ಪಾದನೆ ಇರುವ ವರೆಗೆ ಮಾರುಕಟ್ಟೆ ಇದ್ದೇ ಇರುತ್ತದೆ. ಆದ–ರೆ, ಮಾರುಕಟ್ಟೆ ಶಕ್ತಿಗಳು ಕೇಂದ್ರೀಯ ಯೋಜನಾ ವ್ಯವಸ್ಥೆಯ ಮಾರ್ಗದರ್ಶನದ ಅಡಿಯಲ್ಲಿ ಸಮಾವೇಶಿತವಾಗಿರುತ್ತವೆ. ವಿವಿಧ ಸ್ವರೂಪಗಳ ಆಸ್ತಿಗಳು ಒಟ್ಟಿಗೇ ಇರುತ್ತವಾದರೂ, ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನದ ಸ್ವರೂಪವೇ ನಿರ್ಣಾಯಕವಾಗಿರುತ್ತದೆ. ಇದು ಕೇವಲ ಪ್ರಭುತ್ವದ ಒಡೆತನದ ಸಾರ್ವಜನಿಕ ವಲಯದ ಸ್ವರೂಪದಲ್ಲಷ್ಟೇ ಇರಬೇಕೆಂದೇನಿಲ್ಲ. ಸಾರ್ವಜನಿಕ ವಲಯ ಒಂದು ಮಹತ್ವದ ಪಾತ್ರ ವಹಿಸುತ್ತದಾದರೂ, ಸಾಮೂಹಿಕ ಮತ್ತು ಸಹಕಾರಿ ಒಡೆತನದಂತಹ ಸ್ವರೂಪಗಳು ಮತ್ತು ಆರ್ಥಿಕ ಜೀವನರೇಖೆಯನ್ನು ನಿಯಂತ್ರಿಸುವ ಆರ್ಥಿಕ ಧೋರಣೆಗಳ ಮೇಲೆ ಪ್ರಭುತ್ವದ ಹತೋಟಿ ಅನಿವಾರ್ಯವಾಗಿ ಜತೆಜತೆಯಾಗಿಯೇ ಇರುತ್ತವೆ. (20ನೇ ಮಹಾಧಿವೇಶನದ 'ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲಿನ ನಿರ್ಣಯ')

ಜಗತ್ತನ್ನು ಬದಲಿಸಬಹುದು

"ತತ್ವಜ್ಞಾನಿಗಳು ಜಗತ್ತನ್ನು ವಿವಿಧ ರೀತಿಗಳಲ್ಲಿ ವ್ಯಾಖ್ಯಿಸಿದ್ದಾರಷ್ಟೇ. ಆದರೆ ಮುಖ್ಯ ಅಂಶವೆಂದರೆ ಅದನ್ನು ಬದಲಿಸುವುದು" ಎಂಬುದು ಕಾರ್ಲ್ ಮಾರ್ಕ್ಸ್‌ರವರ ಒಂದು ಪ್ರಖ್ಯಾತ ನುಡಿ. ಅಕ್ಟೋಬರ್ ಕ್ರಾಂತಿ ಜಗತ್ತನ್ನು ಬದಲಿಸಲು ಸಾಧ್ಯವಿದೆ ಎಂದು ತೋರಿಸಿ ಕೊಟ್ಟಿದೆ. ಇದು ಆದರ ಚಿರಂತನ ಪ್ರಸ್ತುತತೆಯಾಗಿ ಉಳಿಯುತ್ತದೆ. ಸೋಲುಗಳೇನೇ ಇದ್ದರೂ ಅಕ್ಟೋಬರ್ ಕ್ರಾಂತಿ ಮತ್ತು ಅದರ ಕೊಡುಗೆಗಳು ಮಾನವ ನಾಗರಿಕತೆಯ ಮುನ್ನಡೆಯ ದಿಕ್ಪಥವನ್ನು ಮುಂದೆಯೂ ರೂಪಿಸುತ್ತವೆ. ಮಾನವೇತಿಹಾಸದ ಈ ಯುಗಾಂತರಕಾರೀ ಘಟನೆ ನಮ್ಮೆಲ್ಲರಿಗೆ ನಮ್ಮ ಕ್ರಾಂತಿಕಾರಿ ಹೋರಾಟಗಳಲ್ಲಿ ಸ್ಫೂರ್ತಿಯ ಸೆಲೆಯಾಗಿಯೇ ಇರುತ್ತದೆ. ಅಕ್ಟೋಬರ್ ಕ್ರಾಂತಿಗೆ ಜಗತ್ತನ್ನು ಬದಲಿಸಲು ಸಾಧ್ಯವಾಗಿದ್ದರೆ, ಭಾರತದ ಕ್ರಾಂತಿಗೂ ಸಾಧ್ಯವಿದೆ. ಈ ಸಾಧ್ಯತೆಯನ್ನು ವಾಸ್ತವಗೊಳಿಸಲು ನಮ್ಮನ್ನು ಸಜ್ಜುಗೊಳಿಸಿಕೊಳ್ಳಬೇಕಾಗಿದೆ. ●



ಅಕ್ಟೋಬರ್ ಕ್ರಾಂತಿ : ಒಂದು ಹೊಸ ಜಗತ್ತಿನ ಹರಿಕಾರ

ಪುಟ 7 ರಿಂದ

ಯುರೋಪ್‌ನ ಆಳುವ ವರ್ಗಗಳು ಮತ್ತು ನ್ಯಾ–ಟೋ ಉಕ್ರೇನ್ ಮತ್ತು ಬಾಲ್ಟಿಕ್ ದೇಶಗಳಾದ ಲಿಥುವೇನಿಯಾ ಹಾಗೂ ಎಸ್ತೋನಿಯಾ ಮೊದಲಾದೆಡೆ ತೀವ್ರ ಬಲಪಂಥೀಯ ಮತ್ತು ನವ–ನಾಜಿ ಶಕ್ತಿಗಳಿಗೆ ಹೇಗೆ ಬೆಂಬಲ ನೀಡುತ್ತಿವೆ ಎನ್ನುವುದನ್ನು ನಾವು ಕಾಣುತ್ತಿದ್ದೇವೆ.

ಫ್ಯಾಸಿಸಂ ಮತ್ತು ಕಮ್ಯೂನಿಸಂ ಅನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಇತಿಹಾಸದ ಮತ್ತು ವಿವೇಕದ ಮೇಲಿನ ದಾಳಿಯಾಗುತ್ತದೆ. ಯಾಕೆ–ಂದರೆ ಹಾಗೆ ಮಾಡುವುದರಿಂದ ನಾಜಿ ಆಡಳಿತವನ್ನು ನಾಶ ಮಾಡುವಲ್ಲಿ ಸೋವಿಯತ್ ಒಕ್ಕೂಟ ಮತ್ತು ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷ ನಿರ್ವಹಿಸಿದ ಮಹತ್ವದ ಪಾತ್ರವನ್ನು ಮತ್ತು ಫ್ಯಾಸಿಸಂ ವಿರೋಧಿ ಹೋರಾಟದಲ್ಲಿ 25 ಮಿಲಿಯ ಸೋವಿಯತ್ ನಾಗರಿಕರು ಮತ್ತು ಸೈನಿಕರು ಮಾಡಿದ ಅಪಾರ ಬಲಿದಾನವನ್ನು ನಿರಾಕರಿಸಿದಂತಾಗುತ್ತದೆ. ಹಾಗೆ ಮಾಡುವುದು ಫ್ರಾನ್ಸ್, ಇಟೆಲಿ, ಬಾಲ್ಕನ್ ದೇಶಗಳಲ್ಲಿ ಮತ್ತು ಗ್ರೀಸ್‌ನಲ್ಲಿ ನಾಜಿ ಆಕ್ರಮಣದ ವಿರುದ್ಧ ಮತ್ತು ಫ್ಯಾಸಿಸ್ಟ್ ಆಡಳಿತಗಳ ವಿರುದ್ಧದ ಸಂಘರ್ಷದಲ್ಲಿ ಪ್ರಮುಖ ಪಾತ್ರ ವಹಿಸಿದ ಸಾವಿರಾರು ಕಮ್ಯೂನಿಸ್ಟ್ ಹೋರಾಟಗಾರರಿಗೆ ಮಾಡುವ ಅವಮಾನವಾಗುತ್ತದೆ ಕೂಡ.

ಅಕ್ಟೋಬರ್ ಕ್ರಾಂತಿ, ಸಮಾಜವಾದ ಮತ್ತು ಕಮ್ಯೂನಿಸಂನ್ನು ಕೀಳಾಗಿ ಕಾಣುವ ಮತ್ತು ಅವುಗಳ ವಿರುದ್ಧ ದುಷ್ಟತೆಯ ಅಪಪ್ರಚಾರ ಮಾಡುವ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತವೆ. ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಸಂರಚನೆಯನ್ನೇ ಬಿಕ್ಕಟ್ಟು ಆವರಿಸಿಕೊಂಡಿದೆ. ಅದರಿಂದ ಬಿಡಿಸಿಕೊಳ್ಳಲು ಅದು ಅಸಮರ್ಥವಾಗಿದೆ. 2008ರಲ್ಲಿ ಆರಂಭವಾದ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು ಅದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಯುರೋಪ್ ಈ ಬಿಕ್ಕಟ್ಟಿನ ಕೇಂದ್ರ ಭಾಗದಲ್ಲಿದೆ. ಕರಾಳ ಮಿತವ್ಯಯದ ರಾಕ್ಷಸೀ ಕ್ರಮಗಳು ಅಸಮಾನತೆ, ನಿರುದ್ಯೋಗ, ಅನ್ಯರದ್ವೇಷ ಮತ್ತು ಜನಾಂಗವಾದದ ಸಮಸ್ಯೆಗಳನ್ನು ಉಲ್ಬಣಿಸುವಂತೆ ಮಾಡಿವೆ ಅಷ್ಟೇ. ಬಲಪಂಥೀಯ ನವ–ಉದಾರವಾದಿ ನೀತಿಗಳ ವಿರುದ್ಧ ಜನಪ್ರಿಯ ಚಳವಳಿಗಳು ಮತ್ತು ಹೊಸ ರಾಜಕೀಯ ಶಕ್ತಿಗಳು ಉದಯಿಸುತ್ತಿವೆ.

ಸೋವಿಯತ್ ಪತನದ ನಂತರದ ಯುಗ ಇರಾಕ್, ಅಫಘಾನಿಸ್ತಾನ, ಲಿಬ್ಯ ಮತ್ತು ಸಿರಿಯಾದಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪಗಳು ಹುಟ್ಟುಹಾಕಿದ ಅತ್ಯಂತ ವಿನಾಶಕಾರಿ ಯುದ್ಧಗಳನ್ನು ಕಂಡಿದೆ. ಲಕ್ಷಾಂತರ ಮಂದಿ ಸತ್ತಿದ್ದಾರೆ ಅಥವ ಈ ಘರ್ಷಣೆಗಳಿಂದಾಗಿ ಮನೆಮಾರು ಬಿಟ್ಟು ಹೋಗಬೇಕಾಗಿ ಬಂದಿದೆ. ಪಾಶ್ಚಾತ್ಯ 'ಪ್ರಜಾಪ್ರಭುತ್ವ'ಗಳೇ ತಮ್ಮ ಹಸ್ತಕ್ಷೇಪಗಳ ಮೂಲಕ ಧಾರ್ಮಿಕ ಉಗ್ರವಾದದ ಆಧಾರದ ಭಯೋತ್ಪಾದನೆಯ ಹುಟ್ಟಿಗೆ ಕಾರಣವಾಗಿವೆ.

ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನವ–ಉದಾರವಾದಿ ಆಡಳಿತಗಳ ವಿರುದ್ಧ ಜಗತ್ತಿನೆಲ್ಲೆಡೆ ಸಾಮೂಹಿಕ ಚಳವಳಿಗಳು ಮತ್ತು ಹೋರಾಟಗಳು ನಡೆಯುತ್ತಿವೆ. ಲ್ಯಾಟಿನ್ ಅಮೆರಿಕದಲ್ಲಿ, ಕಳೆದ ಒಂದುವರೆ ದಶಕದಲ್ಲಿ ನೆಲೆ ಬೆಳೆಸಿಕೊಂಡಿರುವ ಎಡ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಬೆಂಬಲವಿರುವ ಬಲಪಂಥೀಯ ಶಕ್ತಿಗಳ ನಡುವೆ ತೀಕ್ಷ್ಣವಾದ ಸಂಘರ್ಷ ನಡೆಯುತ್ತಿದೆ.

ಭಾರತದಲ್ಲಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ನವ–ಉದಾರವಾದಿ ನೀತಿಗಳು ಹಾಗೂ ಮೋದಿ ಆಡಳಿತ ಪ್ರತಿನಿಧಿಸುವ ಹಿಂದೂತ್ವ ಕೋಮುವಾದಿ ಶಕ್ತಿಗಳ ವಿರುದ್ಧ ದೀರ್ಘ ಸಮರದಲ್ಲಿ ನಿರತವಾಗಿವೆ. ಸಾಮ್ರಾಜ್ಯಶಾಹಿ, ನವ–ಉದಾರವಾದ ಮತ್ತು ವಿಭಜನಕಾರಿ ಸಂಕುಚಿತವಾದಿ ಶಕ್ತಿಗಳ ವಿರುದ್ಧ ಹೋರಾಟ ನಿರತರಾಗಿರುವ ಜಗತ್ತಿನೆಲ್ಲೆಡೆಯ ಶಕ್ತಿಗಳಿಗೆ ಅಕ್ಟೋಬರ್ ಕ್ರಾಂತಿ ಸ್ಫೂರ್ತಿಯ ಚಿಲುಮೆಯಾಗಿ ನಿಲ್ಲುತ್ತದೆ.

ಅಕ್ಟೋಬರ್ ಕ್ರಾಂತಿಯ ಕ್ರಾಂತಿಕಾರಿ ಪರಂಪರೆಯನ್ನು ಎತ್ತಿಹಿಡಿಯಬೇಕಾಗಿದೆ. ಅದಕ್ಕಾಗಿ ಕ್ರಾಂತಿಕಾರಿ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಸಿದ್ಧಾಂತವನ್ನು ಆಧರಿಸಿದ ಸಮಾಜವಾದದ ಹೋರಾಟವನ್ನು ಮುಂದೊಯ್ಯುವುದು ಅಗತ್ಯ. 2016ರ ನವೆಂಬರ್ 7ರಿಂದ 2017ರ ನವೆಂಬರ್ 7ರವರೆಗಿನ ಶತಮಾನೋತ್ಸವ ವರ್ಷವನ್ನು ಅಕ್ಟೋಬರ್ ಕ್ರಾಂತಿಯ ಸಂದೇಶವನ್ನು ಪ್ರಚಾರ ಮಾಡಲು ಮತ್ತು 21ನೇ ಶತಮಾನದಲ್ಲಿ ಭಾರತಕ್ಕೆ ಸಮಾಜವಾದಿ ಕಣ್ಣೋಟವನ್ನು ರೂಪಿಸಲು ಬಳಸಿಕೊಳ್ಳಬೇಕು.

ಅನು : ವಿಶ್ವ ●

ಉಡುಪಿ: ಬೀದಿಬದಿ ವ್ಯಾಪಾರಸ್ಥರ ಸಂಘ ಸ್ಥಾಪನೆ



ಸಿಐಟಿಯುಗೆ ಸಂಯೋಜಿಸಲ್ಪಟ್ಟ ಉಡುಪಿ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಮಾವೇಶವು ಅಕ್ಟೋಬರ್ 21ರಂದು ಉಡುಪಿಯ ಬೈಲೂರು ಕಾಂಪ್ಲೆಕ್ಸ್ ಸಂಭಾಂಗಣದಲ್ಲಿ ಜರಗಿತು.

ಕರ್ನಾಟಕ ರಾಜ್ಯ ಬೀದಿಬದಿ ವ್ಯಾಪಾರಸ್ಥರ ಫೆಡರೇಶನ್ ರಾಜ್ಯ ಕಾರ್ಯದರ್ಶಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ "ಬೀದಿ ಬದಿ ವ್ಯಾಪಾರಸ್ಥರ ಉತ್ತಮ ಬದುಕಿಗಾಗಿ ಮಸೂದೆಯೊಂದು ದೇಶದ ಸಂಸತ್ತಿನಲ್ಲಿ ಅಂಗೀಕಾರಗೊಂಡರೂ ಅದನ್ನು ಯಥಾವತ್ತಾಗಿ ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಿಂದೇಟು ಹಾಕುತ್ತಿದೆ. ಮಸೂದೆಯ ಆಧಾರದಲ್ಲಿ ರಾಜ್ಯ ಸರಕಾರಗಳು ವಿಶೇಷ ನಿಯಮಾವಳಿಗಳನ್ನು ರೂಪಿಸಬೇಕೆಂದಿದ್ದರೂ ಈ ಬಗ್ಗೆ ಇನ್ನೂ ರಾಜ್ಯದಲ್ಲಿ ಜಾರಿಯಾಗಿಲ್ಲ ಎಂದು ಖಂಡಿಸಿದರು.

ಬೀದಿಬದಿ ವ್ಯಾಪಾರಿಗಳಿಗೆ ಗುರುತು ಚೀಟಿ ಇರುವವರು ನವೀಕರಣ ಮಾಡಬೇಕು, ಚೀಟಿ ಇಲ್ಲದವವರಿಗೆ ಕೊಡಬೇಕು ಮತ್ತು ಉಡುಪಿ ನಗರಸಭೆ ಅಧಿಕಾರಿಗಳು ತಾನು ಮಾಡಬೇಕಾದ ಕೆಲಸವನ್ನು ಮಾಡದೆ ವಿನಾಕಾರಣ ಬೀದಿ ಬದಿ ವ್ಯಾಪಾರಸ್ಥರ ಮೇಲೆ ದಾಳಿ ನಡೆಸುತ್ತಿದೆ ಇದರ ವಿರುದ್ಧ ಹೋರಾಟ ಮಾಡಲು ಉಡುಪಿ ಜಿಲ್ಲಾ ಬೀದಿ ಬದಿ ವ್ಯಾಪಾರಸ್ಥರ ಸಂಘ(ಸಿಐಟಿಯು) ಸ್ಥಾಪನೆ ಮಾಡುವುದು ತೀರಾ ಅಗತ್ಯವಿದೆ" ಅಭಿಪ್ರಾಯ ವ್ಯಕ್ತ ಪಡಿಸಿದರು.

ಸಂಘಟನೆ ನೇತೃತ್ವದಲ್ಲಿ ಉಡುಪಿ ನಗರಸಭೆಯ ವಿರುದ್ಧ ದೌರ್ಜನ್ಯ ಖಂಡಿಸಿ ನವೆಂಬರ್ 02 ಬೃಹತ್ ಪ್ರತಿಭಟನಾ ಮುಷ್ಕರ ಜರಗಿಸಲು ತೀರ್ಮಾನಿಸಲಾಯಿತು.

ಉಡುಪಿ ಜಿಲ್ಲಾ ಬೀದಿ ಬದಿ ವ್ಯಾಪಾರಸ್ಥರ ಸಂಘ(ಸಿಐಟಿಯು)ದ ಪದಾಧಿಕಾರಿಗಳು: ಗೌರವ ಅಧ್ಯಕ್ಷ ಕವಿರಾಜ್ ಎಸ್. ಉಡುಪಿ, ವೀರೇಶ್(ಅಧ್ಯಕ್ಷ), ಬಸವರಾಜ(ಪ್ರಧಾನ ಕಾರ್ಯದರ್ಶಿ), ಮಂಜುನಾಥ, ಸುಧಾಕರ (ಉಪಾಧ್ಯಕ್ಷರು), ಬಸವನಗೌಡ, ಕಲಂದರ್(ಕಾರ್ಯದರ್ಶಿಗಳು), ಸಂಗಮೇಶ (ಕೋಶಾಧಿಕಾರಿ), ಪಿ.ವಿಶ್ವನಾಥ ರೈ(ಕಾನೂನು ಸಲಹೆಗಾರರು) ಇವರನ್ನು ಒಳಗೊಂಡಂತೆ 15 ಮಂದಿ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಿಐಟಿಯು ಮುಖಂಡರಾದ ಉಮೇಶ್ ಕುಂದರ್, ವೆಂಕಟೇಶ ಕೋಣಿ, ನಳಿನಿ ಸಭೆಯಲ್ಲಿ ಉಪಸ್ಥಿತರಿದ್ದರು. ನೂತನ ಕಾರ್ಯದರ್ಶಿ ಬಸವರಾಜ್ ಕೊನೆಯಲ್ಲಿ ವಂದಿಸಿದರು.

ವರದಿ : ವೆಂಕಟೇಶ ಕೋಣಿ

"ಬಳ್ಳಾರಿ ರಿಪಬ್ಲಿಕ್"ನಲ್ಲಿ ವಿಚಾರ ಸಂಕಿರಣಕ್ಕೆ ಸ್ಥಳ ನಿರಾಕರಣೆ

ಡಿ.ವೈ.ಎಫ್.ಐ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕು ಸಮಿತಿ ವತಿಯಿಂದ ಅಕ್ಟೋಬರ್ 15ರಂದು ತೋರಣಗಲ್ಲಿನ ವಿಜಯಲಕ್ಷ್ಮಿ ಚಿತ್ರಮಂದಿರದಲ್ಲಿದ್ದ ಹಾಲ್‌ನಲ್ಲಿ 'ಡಾಂಬರ್ ಕಾರ್ಖಾನೆಯ ಸಾಧಕ ಬಾದಕ ಮತ್ತು ಯುವಜನತೆ' ಎಂಬ ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ನಡೆಸುವ ಬಗ್ಗೆ ಮೌಖಿಕವಾಗಿ ಸ್ಥಳವನ್ನು ಕಾಯಿದಿಸಲಾಗಿತ್ತು. ಪೋಲೀಸ್ ಇಲಾಖೆಗೂ ತಿಳಿಸಲಾಗಿತ್ತು. ಆದರೆ ಕಾರ್ಯಕ್ರಮದ ಒಂದು ದಿನ ಮುಂಚಿತವಾಗಿ ರಾತ್ರಿ ದಿಢೀರನೇ ಹಾಲ್ ಮತ್ತು ಲಾಡ್ಜ್ ರೂಮನ್ನು ಕೊಡಲು ಸಾಧ್ಯವಿಲ್ಲವೆಂದು ಮಾಲೀಕರು ತಿಳಿಸಿದರು. ಕಾರಣ ಕೇಳಿದರೆ 'ನಿಮ್ಮ ಸಂಘಟನೆ ಕಾರ್ಯಕ್ರಮಕ್ಕೆ, ಮುಖಂಡರಿಗೆ ಉಳಿದುಕೊಳ್ಳಲು ಸ್ಥಳ ಮತ್ತಿತರ ಯಾವುದೇ ಸಹಾಯ ಸಹಕಾರ ನೀಡಕೂಡದು ಎಂದು ಒತ್ತಡ ಮತ್ತು ಬೆದರಿಕೆ ಬಂದಿದೆ ಎಂದು ಅಳಲು ತೊಡಿಕೊಂಡರು. ವಿಚಾರ ಸಂಕಿರಣವನ್ನು ಬೇರೆಡೆ ನಡೆಸಿ ಯಶಸ್ವಿಗೊಳಿಸಲಾಗಿದೆ.

ಈ ಕೃತ್ಯದ ಹಿಂದೆ ಇ.ಸಿ.ಪಿ.ಎಲ್ ಡಾಂಬರ್ ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ಪೊಲೀಸ್ ಇಲಾಖೆಯ ಮೇಲೆ ಸಂಶಯವಿದೆ. ಸಂವಿಧಾನ ಕೊಟ್ಟಿರುವ ಹಕ್ಕುಗಳ ಮೇಲೆ ಇಲ್ಲಿರುವವರು ಹಲ್ಲೆ ನಡೆಸುತ್ತಿರುವುದು ಖಂಡನಿಯ. ಮೊದಲೆ ಇದ್ದ ಗಣಿಧಣಿಗಳ "ಬಳ್ಳಾರಿ ರಿಪಬ್ಲಿಕ್" ಜೀವಂತವಾಗಿದೆಂಬ ಅಂಶ ಈ ಘಟನೆಯಿಂದ ಮತ್ತೆ ಸಾಬಿತಾಗಿದೆ. ಸಂವಿಧಾನ ವಿರೋಧಿ ಕೃತ್ಯವನ್ನು ಮಾಡಿರುವವರ ವಿರುದ್ದ ತಕ್ಷಣವೇ ತನಿಖೆ ನಡೆಸಿ ಶಿಸ್ತು ಕ್ರಮವನ್ನು ಕೈಗೊಳ್ಳಬೇಕೆಂದು ತಹಶೀಲ್ದಾರ್‌ರವರ ಮೂಲಕ ರಾಜ್ಯ ಗೃಹ ಸಚಿವರಾದ ಡಾ॥ಜಿ.ಪರಮೇಶ್ವರ್‌ರವರಿಗೆ ಮನವಿ ಪತ್ರದ ಮೂಲಕ ಡಿವೈಎಫ್‌ಐ ವತಿಯಿಂದ ಒತ್ತಾಯಿಸಲಾಗಿದೆ.

ಇನ್ನೂ 29 ತಾಲ್ಲೂಕುಗಳಲ್ಲಿ ಬರ ಘೋಷಣೆ

ರಾಜ್ಯದಲ್ಲಿ ಇನ್ನೂ 29 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಹಿಂದಿನ 110 ತಾಲೂಕುಗಳನ್ನು ಸೇರಿಸಿ ಈಗ ಒಟ್ಟು 139 ತಾಲೂಕುಗಳನ್ನು ಬರ ಇದೆ. ಕೇಂದ್ರಕ್ಕೆ ಅನುದಾನಕ್ಕೆ ಕೋರಿಕೆ ಸಲ್ಲಿಸಿದ್ದು, ಕೆಂದ್ರದ ಅಧ್ಯಯನ ತಂಡ ರಾಜ್ಯದ ಪ್ರವಾಸ ಮಾಡುತ್ತಿದೆ. ಬರಿಯ ಬರ ಘೋಷಣೆಯಿಂದ, ಕೇಂದ್ರಕ್ಕೆ ಅನುದಾನಕ್ಕೆ ಕೋರಿಕೆಗಳಿಂದ ಯಾವುದೇ ಪ್ರಯೋಜನವಿಲ್ಲ. ವಾಸ್ತವವಾಗಿ ಬರಸ್ಥಿತಿಯ ಮೇಲೆ ಸತತ ನಿಗಾ ಇಟ್ಟಿದ್ದು ಘೋಷಣೆ ಜತೆಗೆ ಬೆಳೆ ಪರಿಹಾರ, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಆಗಬೇಕಾಗಿತ್ತು. ಅದು ಆಗುತ್ತಿಲ್ಲ. ಈಗ ಇರುವ ಬೆಳೆ ಪರಿಹಾರದ ಮೊತ್ತ ಏನೇನೂ ಸಾಲದು. ಅದನ್ನು ಏರಿಸಬೇಕಾಗಿದೆ. ಬರಪರಿಹಾರ ಕ್ರಮಗಳು ಸಮರೋಪಾದಿಯಲ್ಲಿ ನಡೆಯಬೇಕಾಗಿದೆ.

ಕಾರ್ಮಿಕರ ಕನಿಷ್ಠ ವೇತನ ವಂಚನೆಗೆ ಹುನ್ನಾರ

ಆಟೋಮೊಬೈಲ್, ಫೌಂಡ್ರಿ, ಪ್ಲೈವುಡ್ ಸೇರಿದಂತೆ ನಾನಾ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ಕನಿಷ್ಠ ವೇತನ ನಿಗದಿ ಮಾಡಿ ರಾಜ್ಯ ಸರಕಾರ 2015 ರಲ್ಲಿ ಹೊರಡಿಸಿದ್ದ ಆದೇಶಗಳನ್ನು ಹೈಕೋರ್ಟ್ ರದ್ದುಗೊಳಿಸಿದೆ. ಅಕ್ಷರ ಮೋಟಾರ್ಸ್, ಪ್ರೇರಣಾ ಮೋಟಾರ್ಸ್ ಸೇರಿದಂತೆ 86 ಆಟೋಮೊಬೈಲ್ ಸಂಸ್ಥೆಗಳು, ಪ್ಲೈವುಡ್ ಸಂಸ್ಥೆಗಳು ಮತ್ತಿತರರ ಉದ್ದಿಮೆಗಳವರು ಸಲ್ಲಿಸಿದ್ದ ಹಲವು ಅರ್ಜಿಗಳನ್ನು ಆಲಿಸಿ ತೀರ್ಪುಕಾಯ್ದಿರಿಸಿದ್ದ ನ್ಯಾ.ಎ.ಎನ್.ವೇಣುಗೋಪಾಲಗೌಡ ಅವರಿದ್ದ ಏಕ ಸದಸ್ಯ ಪೀಠ ಈ ತೀರ್ಪು ಪ್ರಕಟಿಸಿದೆ.

ನಿಯಮ ಪಾಲನೆ ಮಾಡದಿರುವುದರಿಂದ ಸರಕಾರ 2015ರ ಜು.30 ಹಾಗೂ ಆ.3ರಂದು ಹೊರಡಿಸಿದ್ದ ಆದೇಶಗಳನ್ನು ರದ್ದುಗೊಳಿಸಲಾಗುವುದು. ನಿಯಮದಂತೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ ನ.30ರೊಳಗೆ ಹೊಸ ಅಧಿಸೂಚನೆ ಹೊರಡಿಸಬೇಕು. ಅಲ್ಲಿಯವರೆಗೆ ಸಿಬ್ಬಂದಿಗೆ ಸರಕಾರ ನಿಗದಿಪಡಿಸಿದ್ದ ಹಿಂದಿನ ಆದೇಶದಲ್ಲಿರುವ ಮೊತ್ತದ ಶೇ.75ರಷ್ಟು ವೇತನವನ್ನು ಮಾಲೀಕರು ಪಾವತಿಸಬೇಕು," ಎಂದು ಆದೇಶಿಸಿದೆ.

"ನಿಯಮ ಪಾಲನೆಯಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳ ಕರ್ತವ್ಯ ಲೋಪ ಎದ್ದು ಕಾಣುತ್ತದೆ. ಅದು ಹಲವು ಗೊಂದಲಗಳಿಗೆ ಕಾರಣವಾಗಿದೆ, ಹಾಗಾಗಿ ತಪ್ಪಿತಸ್ಥ ಅಧಿಕಾರಿಗಳು ಯಾರು ಎಂಬುದನ್ನು ಪತ್ತೆಹಚ್ಚಿ, ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿರುವ ಬಗ್ಗೆ 2016ರ ಡಿ.31ರೊಳಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು," ಎಂದೂ ಮುಖ್ಯ ಕಾರ್ಯದರ್ಶಿಗೆ ನ್ಯಾಯಪೀಠ ಆದೇಶ ನೀಡಿದೆ.

ಇದೊಂದು ಮಹತ್ವದ ತೀರ್ಪು. ಆದೇಶವನ್ನು ಪುನಃ ಹೊರಡಿಸಲು ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಗಡುವು ನಿಗದಿ ಮಾಡಿರುವುದು ಸ್ವಾಗತಾರ್ಹ. ಈ ಆದೇಶ ಹೊರಡಿಸುವಲ್ಲಿ ಕಾರ್ಮಿಕ ಇಲಾಖೆ ಅಧಿಕಾರಿಗಳ 'ಕರ್ತವ್ಯಲೋಪ' ಅಚಾತುರ್ಯದಿಂದ ನಡೆದದ್ದೇನೂ ಅಲ್ಲ. ಇದು ಬೇಕೆಂತಲೇ ಮಾಡಿದ್ದು. ಕಾರ್ಮಿಕರಿಗೆ ಕನಿಷ್ಟ ಕೂಲಿಯನ್ನು ವಂಚಿಸಲು ಮಾಡಿದ ಹುನ್ನಾರ. ಇದರಲ್ಲಿ ಮಾಲಿಕರು, ಕಾರ್ಮಿಕ ಇಲಾಖೆ ಅಧಿಕಾರಿಗಳು, (ಕೆಲವು ಹಿರಿಯ ಮಂತ್ರಿಗಳು ಸೇರಿದಂತೆ) ರಾಜಕಾರಣಿಗಳು ಶಾಮೀಲಾಗಿದ್ದರು ಎಂದು ಹೇಳಲಾಗಿದೆ. ಅವರನ್ನು ಬಯಲಿಗೆಳೆದು ಅವರ ಮೇಲೂ ಕ್ರಮ ಕೈಗೊಳ್ಳಬೇಕಾಗಿದೆ.



ರಮೇಶ್‌ಕುಮಾರ್ ಅವರೇ! ಉಡುಪಿ ನಿಮ್ಮ ಮಂತ್ರಿಗಿರಿ ಒಳಗೆ ಬರುತ್ತಾ?!

ಬಡ'ವ'ರ' ಪಾಲಿಗೆ ಇದ್ದೂ ಇಲ್ಲದಂತಿದ್ದ ಖಾಸಗಿ ಆಸ್ಪತ್ರೆ ಚಿಕಿತ್ಸೆ ಇನ್ನು ಮುಂದೆ ಸುಲಭವಾಗಲಿದ್ದು, ಖಾಸಗಿ ಆಸ್ಪತ್ರೆಗಳ ದುಬಾರಿತನಕ್ಕೆ ಬ್ರೇಕ್ ಹಾಕಲು ಶಾಸನ ಜಾರಿಗೆ ತರುವುದಾಗಿ ಆರೋಗ್ಯ ಸಚಿವ ರಮೇಶ್‌ಕುಮಾರ್ ಅವರು ಹೇಳಿದ್ದಾರೆ. ಖಾಸಗಿ ಆಸ್ಪತ್ರೆಗಳ ದುಬಾರಿ ತನದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರಮೇಶ್‌ಕುಮಾರ್ ಅವರು, ಸಚಿವನಾದ ಬಳಿಕ ಸಾಕಷ್ಟು ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ಈ ವೇಳೆ ಹಲವು ಮಾಹಿತಿಗಳು ಬೆಳಕಿಗೆ ಬಂದಿದ್ದು, ಬಡವರು ಎನ್ನದೇ ದುಬಾರಿ ಹಣವಸೂಲಿ ಮಾಡಲಾಗುತ್ತಿದೆ. ಸಣ್ಣಪುಟ್ಟ ಚಿಕಿತ್ಸೆಗೂ ದುಬಾರಿ ಸ್ಕ್ಯಾನಿಂಗ್ ಮಾಡಿಸಲಾಗುತ್ತಿದೆ ಎಂದು ಹೇಳಿದರು. ನ್ಯಾಯಮೂರ್ತಿ ವಿಕ್ರಮ್‌ಜೀತ್‌ಸೇನ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗುತ್ತದೆ. ಈ ಸಮಿತಿ ಖಾಸಗಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳ ದುಬಾರಿ ತನದ ಕುರಿತು ಪರಿಶೀಲನೆ ನಡೆಸಿ 8 ವಾರಗಳಲ್ಲಿ ತನ್ನ ವರದಿ ಸಲ್ಲಿಸಲಿದೆ. ವೈದ್ಯಕೀಯ ಸೇವೆಗೆ ದರ ನಿಗದಿ ಸೇರಿದಂತೆ ಹಲವು ಶಿಫಾರಸ್ಸುಗಳನ್ನು ಸಮಿತಿ ನೀಡಲಿದೆ.

ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಕಾಯ್ದೆಗೆ ತಿದ್ದುಪಡಿ ತಂದು ಶಾಸನ ಜಾರಿಗೆ ತರಲಾಗುತ್ತದೆ. ಶಾಸನ ಜಾರಿಯಾದ ಬಳಿಕವೂ ಇದು ಮುಂದವರೆದರೆ ಅಂತಹ ಸಂಸ್ಥೆಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳಲಾಗುತ್ತದೆ ಎಂದು ರಮೇಶ್‌ಕುಮಾರ ತಿಳಿಸಿದರು.

ಶಾಭಾಶ್! ರಮೇಶ್‌ಕುಮಾರ್ ಅವರೇ! ಆದರೆ ಒಂದು ಸಣ್ಣ ಡೌಟು.?!

ಉಡುಪಿ ಜಿಲ್ಲೆ ಸಹ ನಿಮ್ಮ ಮಂತ್ರಿಗಿರಿ ಒಳಗೆ ಬರುತ್ತಾ? ಕರಾವಳಿ ಜಿಲ್ಲೆಗಳಿಗೆ ಬೇರೆ ಗೃಹಮಂತ್ರಿಗಳು (ಕಲ್ಲಡ್ಕ ಪ್ರಭಾಕರ ಭಟ್) ಇದ್ದ ಹಾಗೆ, ಉಡುಪಿಗೆ ಬೇರೆನೇ ಆರೋಗ್ಯ ಮಂತ್ರಿಗಳು ಇದ್ದಾರಾ? ಇಲ್ಲದಿದ್ದರೆ "ಖಾಸಗಿ ಆಸ್ಪತ್ರೆಗಳ ದುಬಾರಿತನಕ್ಕೆ ಬ್ರೇಕ್ ಹಾಕಲು" ಹೊರಟಿರುವ ನೀವು, ಎಷ್ಟೋ ಸೂಪರ್-ಸ್ಪೆಶಾಲಿಟಿ ಆಸ್ಪತ್ರೆಗಳಿಗಿಂತ ಚೆನ್ನಾಗಿ ಉಚಿತ ಚಿಕಿತ್ಸೆ ಕೊಡುತ್ತಿರುವ ಉಡುಪಿ ಮಕ್ಕಳ/ಮಹಿಳೆಯರ ಆಸ್ಪತ್ರೆಯನ್ನು ಉದ್ಯಮಿ ಬಿ.ಆರ್.ಶೆಟ್ಟಿ ಅವರಿಗೆ ನಾಗರಿಕರ ತೀವ್ರ ವಿರೋಧದ ಮಧ್ಯೆ ಏಕೆ ಉಡುಗೊರೆ ಕೊಡಲು ಹೊರಟಿದ್ದೀರಿ? ನಾಗರಿಕರ ವಿರೋಧಕ್ಕೆ ಕಾರಣ ನೀವೇ ಹೇಳುವ "ಖಾಸಗಿ ಆಸ್ಪತ್ರೆಗಳ ದುಬಾರಿತನ" ಎಂಬುದನ್ನು ಅರಿಯದಷ್ಟು ದಡ್ಡರೇನು ಅಲ್ಲ ನೀವು. ನಾವೂ ನಿಮ್ಮ ಬೊಗಳೆ ಅರ್ಥವಾಗದ ದಡ್ಡರಲ್ಲ. ಉಡುಪಿ ಆಸ್ಪತ್ರೆ ಖಾಸಗೀಕರಣ ಮೊದಲು ನಿಲ್ಲಿಸಿ. ಆ ಮೇಲೆ ನಿಮ್ಮ ಈ ಶಾಸನ, ಅದರಡಿ ನಿಮ್ಮ ಕಠಿಣ ಕ್ರಮಗಳನ್ನು ನಂಬಬೇಕೋ ಬಿಡಬೇಕೋ ಎಂದು ನಾವು ನಿರ್ಧರಿಸುತ್ತೇವೆ.

ಸಿದ್ಧರಾಮಯ್ಯನವರೇ! ಕನ್ನಡಕ್ಕೆ ನೀವೇನು ಮಾಡಿದ್ದೀರಿ?



ನವೆಂಬರ್ 1 ರಂದು ಕರ್ನಾಟಕ ಏಕೀಕರಣದ ವಜ್ರ ಮಹೋತ್ಸವದ ಬಂತು ಹೋಯಿತು. ಸರಕಾರದಿಂದಾಗಲಿ ಕನ್ನಡ-ಪರ ಕನ್ನಡ ಜನ-ಪರ ಎಂದು ಹೇಳಿಕೊಳ್ಳುವ ಸಂಘಟನೆಗಳಿಂದಾಗಲಿ ಏಕೀಕರಣದ ಆಶಯಗಳು ಸಾಕಾರವಾಗಿವೆಯೇ? ಆಗಿರದಿದ್ದರೆ ಏಕಿಲ್ಲ ಎಂಬುದರ ಬಗ್ಗೆ ಚಿಂತನ-ಮಥನ ನಡೆಯಲಿಲ್ಲ. ಆತ್ಮಾವಲೋಕನ ಆಗಲಿಲ್ಲ. ಕರ್ನಾಟಕದ ಕನ್ನಡ ಜನತೆಯ ಸಮಗ್ರ ಬೆಳವಣಿಗೆ ಬಗ್ಗೆ ಇರಲಿ, ಕನಿಷ್ಟ ಕನ್ನಡ ಮಾಧ್ಯಮ ಶಿಕ್ಷಣ ಮತ್ತು ಆಡಳಿತ ಭಾಷೆ ಜಾ-ರಿಯ ವೈಫಲ್ಯತೆ ಬಗಗೆ ಸಹ ಆತ್ಮಾವಲೋಕನ, ಚಿಂತನ-ಮಥನ ನಡೆಯಲಿಲ್ಲ. ರಾಜ್ಯಗಳ ಪ್ರಾದೇಶಿಕ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ಆದ್ದರಿಂದ, ಪ್ರಧಾನಿ ನರೇಂದ್ರಮೋದಿ ಅವರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯಬೇಕು ಎಂದು ಹೇಳುವ ಮೂಲಕ. ಸಿದ್ಧರಾಮಯ್ಯನವರು ಸಮಸ್ಯೆಯನ್ನು ಮೋದಿಗೆ ಕೇಂದ್ರ ಸರಕಾರಕ್ಕೆ ದಾಟಿಸಿದರು.

ಈ ಬಗ್ಗೆ ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನಲೆಯಲ್ಲಿ ಇದು ಆಗಬೇಕಾಗಿದೆ. ನಿಜ. ಆದ-ರೆ ಇಂತಹ ಪರಿಸ್ಥಿತಿಗೆ ಕಾರಣವಾದ ನೀತಿಗಳಿಗೆ ಕ್ರಮಗಳಿಗೆ ಕಾರಣರು ಯಾರು? ಕಾಂಗ್ರೆಸ್ ಮತ್ತು ಇತರ ಬೂರ್ಜ್ವಾ-ಭೂಮಾಲಕ ಪಕ್ಷಗಳ ಸರಕಾರಗಳಲ್ಲವೆ? ಸರಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನು ಸೊರಗಿಸಿ ಕಾನ್ವೆಂಟ್ ಶಾಲೆಗಳ ಮೋಹ ಬೆಳೆಯುವಂತೆ ಮಾಡಿದ್ದು, ಇಂಗ್ಲಿಷ್ ಗುಣಮಟ್ಟ ಶಿಕ್ಷಣದ ನೆಪದಲ್ಲಿ ಪ್ರಬಲ ಖಾಸಗಿ ಶಿಕ್ಷಣ ಲಾಬಿ ಬೆಳೆದು ಅದೇ ಸರಕಾರಕ್ಕೆ ನಿರ್ದೇಶಿಸುವ ಪರಿಸ್ಥಿತಿ ಉಂಟಾಗಿದ್ದು, ಕನ್ನಡವನ್ನು ಉಚ್ಚ ಶಿಕ್ಷಣದವರೆಗೆ ಮಾಧ್ಯಮವಾಗಿ ಬೆಳೆಸದೆ ಹೋಗಿದ್ದು, ಕನ್ನಡದಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗ ಒದಗಿಸುವ ಬಗ್ಗೆ ಏನೂ ಮಾಡದ್ದು-ಕಳೆದ ಹಲವು ದಶಕಗಳ ಸರಕಾರಿ ನೀತಿಗಳಲ್ಲವೇ? ಈಗಿನ ಸ್ಥಿತಿಯಲ್ಲೂ ಸರಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನು ಸಮರೋಪಾದಿಯಲ್ಲಿ ಉತ್ತಮ ಪಡಿಸುವುದಕ್ಕೆ ಕಿರುಬೆರಳು ಎತ್ತಿದ್ದೀರಾ? ಆರ್.ಟಿ.ಇ. ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿದ್ದೀರಾ? ಈಗಲೂ ಸರಕಾರಿ ಶಾಲೆಗಳನ್ನು ಮುಚ್ಚಲು ಹತ್ತು ಹಲವು ಉಪಾಯಗಳನ್ನು ಮಾಡುವುದನ್ನು ನಿಲ್ಲಿಸಿದ್ದೀರಾ? ಸಮಾನ ಗುಣಮಟ್ಟದ ಶಿಕ್ಷಣ ಜಾರಿ ಮಾಡಲು ಶಾಲಾ ಶಿಕ್ಷಣದ ರಾಷ್ಟ್ರೀಕರಣದ ದೃಢ ನಿರ್ಣಯ ಕೈಗೊಳಲು ಸಿದ್ದರಿದ್ದೀರಾ?

ಇದೇ ಮಾತನ್ನು ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿ ಮಾಡುವುದಕ್ಕೆ ಸಂಬಂಧಿಸಿ ಹೇಳಬಹುದು. ಈಗಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿ ಮಾಡಲು ಬೇಕಾದ ರಾಜಕೀಯ ಇಚ್ಛಾಶಕ್ತಿ ಇದ್ದಂತಿಲ್ಲ. ಕನ್ನಡದಲ್ಲಿ ಕಂಪ್ಯೂಟರ್ ಬಳಕೆಯ ಬಗ್ಗೆ ಸ್ಟಾಂಡರ್ಡೈಸೇಶನ ಪ್ರಯತ್ನಗಳ ಮತ್ತು ಸಮಗ್ರ ಬೆಳವಣಿಗೆಯ ಅಭಾವದಿಂದ, ಇ-ಆಡಳಿತ ಬಂದ ಮೇಲಂತೂ, ಕನ್ನಡದ ಬಳಕೆಯ ಮಟ್ಟ ಇನ್ನಷ್ಟು ಕೆಳಕ್ಕೆ ಹೋಗಿದೆ ಎನ್ನಬಹುದು. ಇಲ್ಲಂತೂ ಸರಕಾರಕ್ಕೆ, ಯಾರನ್ನೂ ದೂರಲು ಯಾವ ಸಬೂಬು ಹೇಳಲೂ ಅವಕಾಶ ಇಲ್ಲ.

ಆತಂಕಕಾರಿ ಪ್ರತ್ಯೇಕತಾ ಕೂಗು

ಕರ್ನಾಟಕ ರಾಜ್ಯೋತ್ಸವದಂದು ಎಲ್ಲರ ಗಮನ ಎಂ.ಇ.ಎಸ್. ಬೆಳಗಾವಿಯಲ್ಲಿ 'ಕರಾಳದಿನ' ಆಚರಿಸಿದ್ದರ ಮೇಲಿದ್ದರೆ, ಈ ಬಾರಿಯೂ ಪ್ರತ್ಯೇಕತಾವಾದಿ ಚಳುವಳಿಗಳು ಪ್ರತ್ಯೇಕ ರಾಜ್ಯ ಆಗಬೇಕು ಎಂದು ಹಲವು ಕಡೆ ಪ್ರದರ್ಶನ ಮಾಡಿವೆ. ಕೊಡಗು ಜಿಲ್ಲೆಯನ್ನು ಕೇಂದ್ರಾಡಳಿತ ಪ್ರದೇಶವಾಗಿ ಘೋಷಿಸಬೇಕು ಎಂದು ಆಗ್ರಹಿಸಿ ನ. 1 ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ 'ನವದೆಹಲಿ ಚಲೋ ಸತ್ಯಾಗ್ರಹ'ವನ್ನು ಕೊಡವ ನ್ಯಾಷನಲ್ ಕೌನ್ಸಿಲ್ ಏರ್ಪಡಿಸಿದೆ ಎಂದು ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಕೊಡವ ಅವರು ತಿಳಿಸಿದರು. ಲಡಾಖ್, ಬೋಡೋಲ್ಯಾಂಡ್, ಗೂರ್ಖಾಲ್ಯಾಂಡ್ ಮಾದರಿಯಲ್ಲಿ ಕೊಡಗಿಗೆ ಸ್ವಾಯತ್ತತೆ ನೀಡಬೇಕು. ಸಂವಿಧಾನದ 340 ಮತ್ತು 342ನೇ ವಿಧಿಪ್ರಕಾರ ಕ್ಷಾತ್ರ ಬುಡಕಟ್ಟು ಜನಾಂಗದ ಸ್ಥಾನಮಾನವನ್ನು ಕೊಡವರಿಗೆ ನೀಡಬೇಕು ಎಂದೂ ಅವರು ಆಗ್ರಹಿಸಿದ್ದಾರೆ. ಅದೇ ರೀತಿ ಪ್ರತ್ಯೇಕ ತುಳುನಾಡು ಮತ್ತು ಕಲ್ಯಾಣ ರಾಜ್ಯ ಬೇಕೆಂದು, ಅನುಕ್ರಮವಾಗಿ ದಕ್ಷಿಣಕನ್ನಡ ಹಾಗೂ ಕಲಬುರಗಿಯಲ್ಲಿ ಪ್ರದರ್ಶನ ನಡೆದ ವರದಿ ಬಂದಿದೆ. ಇದು ಈಗ ಸಣ್ಣ ಪ್ರಮಾಣದಲ್ಲಿದ್ದರೂ, ಪ್ರಾದೇಶಿಕ ಅಸಮಾನತೆ ಮತ್ತು ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಾ ಹೋದಂತೆ ಇದಕ್ಕೆ ಜನಬೆಂಬಲ ಸಿಗುವ ಸಾಧ್ಯತೆ ಇದೆ. ಪ್ರತ್ಯೇಕ ಕೊಡಗು ಮತ್ತು ಕಲ್ಯಾಣ ರಾಜ್ಯದ ಚಳುವಳಿ ಹಿಂದೆ ಬಿಜೆಪಿಯಕೈ ಇದೆ ಎಂದು ತಿಳಿದು ಬಂದಿದೆ. ಬಿಜೆಪಿ ಭಾಷಾವಾರು ರಾಜ್ಯಗಳ ಪರಿಕಲ್ಪನೆಗೆ ಮೊದಲಿನಿಂದಲೂ ವಿರೋಧಿಸಿದ್ದು ಸಣ್ಣರಾಜ್ಯಗಳಿಗೆ ಬೆಂಬಲ ನೀಡುತ್ತಾ ಬಂದಿರುವ ಹಿನ್ನಲೆಯಲ್ಲಿ ಇದೇನು ಆಶ್ಚಯವೇನು ಅಲ್ಲ, ಆದರೆ ಆತಂಕದ ಸಂಗತಿ.

ಅಹಿಂದ ಮಠಗಳಿಗೆ ಭೂದಾನ

ಅರಣ್ಯ ಇಲಾಖೆಯ ವಿರೋಧದ ನಡುವೆಯೂ ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಮಾಚೋಹಳ್ಳಿಯ 96 ಎಕರೆ 12 ಗುಂಟೆ ಮೀಸಲು ಅರಣ್ಯವನ್ನು ಕಾಗಿ ನೆಲೆ ಮಹಾಸಂಸ್ಥಾನ ಕನಕಗುರುಪೀಠ, ಹೊಸದುರ್ಗದ ಕುಂಚಿಟಿಗರ ಮಹಾಸಂಸ್ಥಾನ ಮಠ ಸೇರಿದಂತೆ ಹಿಂದುಳಿದ ಜಾತಿಗಳ ಸಂಘಸಂಸ್ಥೆಗಳಿಗೆ ಗುತ್ತಿಗೆ ನೀಡಲು ರಾಜ್ಯಸರ್ಕಾರ ಸಕಲ ಸಿದ್ಧತೆ ನಡೆಸಿದೆ. ಒಟ್ಟು 31 ಸಂಸ್ಥೆಗಳಿಗೆ ಜಾಗ ನೀಡಲು ಬೆಂಗಳೂರು ಉತ್ತರ ತಹಶೀಲ್‌ದಾರ್ ಪಟ್ಟಿ ಸಿದ್ಧಪಡಿಸಿದ್ದು, ಕಾಗಿನೆಲೆ ಮಠಕ್ಕೆ 5 ಎಕರೆ ಗುತ್ತಿಗೆಗೆ ನೀಡಲಾಗುತ್ತದೆಯಂತೆ.

ಬಿಜೆಪಿ ಬ್ರಾಹ್ಮಣಮಠ-ಸಂಘಟನೆಗಳಿಗೆ ಭೂಮಿ ಹಂಚಿದಂತೆ ಕಾಂಗ್ರೆಸ್ ಸರ್ಕಾರ 'ಅಹಿಂದ' ಮಠ-ಸಂಘಟನೆಗಳಿಗೆ ಭೂಮಿ ಹಂಚಲು ಹೊರಟಿರುವುದು ಸ್ಪಷ್ಟ. ಇದಕ್ಕೆ ಬಹುಶಃ 'ಸಾಮಾಜಿಕ ನ್ಯಾಯ'ದ ಸಮಜಾಯಿಷಿ ಕೊಡಲಾಗುತ್ತದೆ. ಸರಕಾರ-ಕ್ಕೆ 'ಸಾಮಾಜಿಕ ನ್ಯಾಯ'ದ ಬಗ್ಗೆ ನಿಜವಾಗಿ ಕಾಳಜಿ ಇದ್ದರೆ, ಲಕ್ಷಾಂತರ ಬಗರ್ಹುಕುಂ ಸಾಗುವಳಿದಾರರ (ಇವರಲ್ಲಿ 'ಅಹಿಂದ'ರೇ ಬಹುಭಾಗ) ಜಮೀನುಗಳಿಗೆ ಹಕ್ಕುಪತ್ರ ಕೊಡಲಿ. ದಲಿತರಿಗೆ ಕಾಯ್ದಿರಿಸಿದ ಜಮೀನನ್ನು ಕಬಳಿಸಿದವರ ಜಮೀನು ವಾಪಸು ಪಡೆದು ಹಂಚಲಿ. ಇದ-ಕ್ಕೆ ಬೇಕಾದ ಕಾನೂನು ತಿದ್ದುಪಡಿಗಳನ್ನು ಮಾಡಲಿ. ಮಠ-ಸಂಘಟನೆಗಳಿಗೆ (ಅದು ಯಾವುದೇ ಅಥವಾ ಎಲ್ಲಾ ಸಮುದಾಯಗಳಿಗೆ ಸೇರಿದ್ದಾಗಿರಲಿ) ಕೊಟ್ಟ ಜಮೀನು ಪ್ರತಿಗಾಮಿ ಶಕ್ತಿಗಳನ್ನು ಬಲಪಡಿಸುತ್ತದೆ. ಈ ಮಠ-ಸಂಘಟನೆಗಳು ಗೇಣಿಗೆ ಕೊಟ್ಟು ರೈತರನ್ನು ಶೋಷಿಸುತ್ತವೆ. ಇಲ್ಲವೆ ರೀಯಲ್ ಎಸ್ಟೇಟ್ ದಂಧೆ ನಡೆಸುತ್ತವೆ. ಧರ್ಮಸ್ಥಳ, ರಾಮಚಂದ್ರಮಠ ಮತ್ತಿತರ ಪ್ರಬಲ ಮಠಗಳು ಇದನ್ನೇ ಮಾಡುತ್ತಿರುವುದು. ಸರಕಾರದ ಈ ಕ್ರಮ ಸಾಮಾಜಿಕ ನ್ಯಾಯದತ್ತ ನಡೆಯೂ ಅಲ್ಲ. ಅಹಿಂದರನ್ನು ಸಾಮಾಜಿಕವಾಗಿ ಆರ್ಥಿಕವಾಗಿ ಗಟ್ಟಿಗೊಳಿಸುವ ನಡೆಯೂ ಅಲ್ಲ.

ಅಂಕ ನೀಡುವವರ ಮುಂದೆ ಅಂಗಲಾಚಬೇಕಾದ ದಾರಿ ದೇಶಕ್ಕೆ ಬೇಡ



ಒಂದು ದೇಶದ ಆರ್ಥಿಕ ವ್ಯವಸ್ಥೆಯ ಶಕ್ತಿಯನ್ನು ಅಳೆಯುತ್ತೇನೆನ್ನುವ ಅಮೆರಿಕಾದ ಬಂಡವಾಳಶಾಹಿ ದೇಶಗಳ ಹಣಕಾಸು 'ಸಂಶೋಧನಾ' ಸಂಸ್ಥೆಗಳಲ್ಲಿ ಪ್ರಮುಖವಾದ 'ಸ್ಟಾಂಡರ್ಡ್ ಅಂಡ್ ಪೂರ್ ಗ್ಲೋಬಲ್'(ಸಣ್ಣದಾಗಿ, ಎಸ್‌ಅಂಡ್‌ಪಿ) ಭಾರತದ ದೀರ್ಘಾವಧಿ ಸಾಲಾರ್ಹತೆಯ ಅಂಕ 'ಬಿಬಿಬಿ' ಎಂದೂ ಅಲ್ಪಾವಧಿ ಅಂಕ ಎ–3 ಎಂದೂ ಕೊಟ್ಟಿರುವುದರ ಬಗ್ಗೆ ಭಾರತದ ಹಣಕಾಸು ಮಂತ್ರಾಲಯಕ್ಕೆ ಬಹಳ ಬೇಸರವಾಗಿದೆಯಂತೆ. ಅದನ್ನು ಮೇಲಕ್ಕೇರಿಸಬೇಕು ಎಂದು ಅದು ಈ ಖಾಸಗಿ ಅಮೆರಿಕನ್ ಸಂಸ್ಥೆಯನ್ನು ಕೇಳಿತ್ತು ಎಂದು ವರದಿಯಾಗಿದೆ.

ಹೂಡಿಕೆದಾರರು ಹೇಳುವುದಕ್ಕೂ, ಈ ಸಾಲಾಂಕಗಳಿಗೂ ಸಂಬಂಧವಿದ್ದಂತೆ ಕಾಣುವುದಿಲ್ಲ ಎಂದು ಕೆನಡಾ ಮತ್ತು ಅಮೆರಿಕಾದ ಹೂಡಿಕೆದಾರರೊಡನೆ ಮಾತಾಡಿದಾಗ ಭಾರತ ಸರಕಾರದ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಹೇಳಿದ್ದರಂತೆ. ಆದರೆ ತಮ್ಮ ಲೆಕ್ಕಾಚಾರಗಳ ಪ್ರಕಾರ ಈ ವರ್ಷ ಮಾತ್ರವಲ್ಲ, ಮುಂದಿನ ವರ್ಷವೂಇದನ್ನು ಬದಲಿಸುವ ನಿರೀಕ್ಷೆ ತಮಗಿಲ್ಲ ಎಂದು ಎಸ್ ಅಂಡ್ ಪಿ ವಕ್ತಾರರು ಹೇಳಿರುವುದಾಗಿ ವರದಿಯಾಗಿದೆ.(ಟೈಂಸ್ ಆಫ್ ಇಂಡಿಯಾ, ನ.2))

ದೇಶದ ಮುಂದಿರುವ ಪ್ರಶ್ನೆ–ಜಗತ್ತೆಲ್ಲ ಸುತ್ತಿ ಪ್ರಧಾನಿಗಳು ದೇಶದ ಘನತೆಯನ್ನು ಹಿಂದೆಂದೂ ಕಾಣದ ಮಟ್ಟಕ್ಕೆ ಏರಿಸಿದ್ದಾರೆ ಎನ್ನುವ, ಮಾತೆತ್ತಿದರೆ ರಾಷ್ಟ್ರಪ್ರೇಮದ ಉಪದೇಶಗಳನ್ನು ಉದುರಿಸುವ ಸರಕಾರ ಒಂದು ವಿದೇಶಿ ಹಣಕಾಸು 'ಸಂಸೋಧನಾ' ಸಂಸ್ಥೆಯ ಎದುರು ನಮ್ಮ ಅಂಕ ಹೆಚ್ಚಿಸಿ ಎಂದು ಅಂಗಲಾಚುವ ಆವಶ್ಯಕತೆಯಾದರೂ ಏನಿದೆ?

ಈ ಮೂಲಕ ಈ ಸರಕಾರ ಭಾರತೀಯರಿಗೆ ಬಹಳಷ್ಟು ಮುಜುಗರ ಉಂಟು ಮಾಡಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಹೇಳಿದ್ದಾರೆ. ಅವರ ಮುಂದೆ ಅಂಗಲಾಚುವ ಬದಲು ಭಾರತೀಯ ಆರ್ಥಿಕದ ಮೂಲಭೂತ ಅಂಶಗಳನ್ನು ಬಲಪಡಿಸಿ ಎಂದು ಅವರು ಹೇಳಿದ್ದಾರೆ.

ಎಸ್‌ಅಂಡ್‌ಪಿ ಗೆ ಈ 'ಒಳ್ಳೆಯ ದಿನ'ಗಳ ಸರಕಾರ ವಿದೇಶಿ ಬಂಡವಾಳಿಗರಿಗೆ 'ಒಳ್ಳೆಯ ದಿನ'ಗಳನ್ನು ಕೊಡಲು ಬಹಳಷ್ಟು ಮಾಡುತ್ತಿದೆ ಎಂಬ ಬಗ್ಗೆ ಸಂದೇಹವೇನೂ ಇದ್ದಂತಿಲ್ಲ. ಆದರೆ ಇದು ಏನೇನೂ ಸಾಲದು ಎಂಬ ಅದರ ಅಭಿಪ್ರಾಯದಿಂದ ನಮ್ಮ ಆಳರಸರು ಕುಪಿತರಾದಂತೆ ಕಾಣುತ್ತದೆ. ಒಂದೆಡೆಯಲ್ಲಿ ಈ ಸರಕಾರದ ಬಂಡವಾಳಿಗರಿಗೆ ನಿಯಮಾವಳಿಗಳನ್ನು ಸರಳಗೊಳಿಸಿರುವುದು, ವ್ಯಾಪಾರ ಕಾಂಟ್ರಾಕ್ಟ್‌ಗಳನ್ನು ಉತ್ತಮಗೊಳಿಸರುವುದು, 'ಶ್ರಮ ಮಾರುಕಟ್ಟೆ'ಯನ್ನು 'ಸುಗಮ'ಗೊಳಿಸಿರುವುದು ಇತ್ಯಾದಿಗಳನ್ನು ಮೆಚ್ಚಿಕೊಳ್ಳುತ್ತಲೇ ದೇಶದ ತಲಾ ಜಿಡಿಪಿ ಬಹಳ ಕಡಿಮೆ ಇದೆ ಎಂದಿದೆ, ಇದು ಅಂಕವನ್ನು ಹೆಚ್ಚಿಸಲು ತನಗಿರುವ ಒಂದು ತೊಂದರೆ ಎಂದು ಈ ಸಂಸ್ಥೆ ಹೇಳಿದೆಯಂತೆ.

ಆದರೆ 'ಶ್ರಮ ಮಾರುಕಟ್ಟೆಯನ್ನು ಸುಗಮಗೊಳಿಸಿ' 'ತಲಾ ಜಿಡಿಪಿ' ಹೆಚ್ಚಿಸುವುದಾದರೂ ಹೇಗೆ ಎಂದು ನವ–ಉದಾರವಾದಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ಈ ನಮ್ಮ ಆಳರಸರು ಈ ಸಂಸ್ಥೆಯನ್ನು ಹೇಗೆ ತಾನೇ ಪ್ರಶ್ನಿಸಿಯಾರು?

'ಭಾರತದ ಬೇರು ಬಿಟ್ಟಿರುವ ಪ್ರಜಾಪ್ರಭುತ್ವದ ಬೆಂಬಲದಿಂ' ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂಬ ಎಸ್‌ಅಂಡ್‌ಪಿ ಸಾಂತ್ವನದ ಮಾತು ಒಂದೆಡೆ 'ಸಮಾನ ಕೆಲಸಕ್ಕೆ ಸಮಾನ ವೇತನ ಕೊಡದಿರುವುದು ಶೋಷಣೆಯಾಗುತ್ತದೆ' ಎಂಬ ಸುಪ್ರಿಂ ಕೋರ್ಟ್ ತೀರ್ಪು, ಇನ್ನೊಂದೆಡೆಯಲ್ಲಿ ಒಂದು ಘನತೆಯ ಬದುಕಿಗೆ 18,000 ರೂ. ಕನಿಷ್ಟ ಕೂಲಿ ನಿಗದಿ ಮಾಡಿ ಎಂಬ ಕೋಟ್ಯಂತರ ಕಾರ್ಮಿಕರ(ಇವರು ಮತದಾರೂ ಹೌದು ತಾನೇ) ಆಗ್ರಹವನ್ನು, ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಬಾರದು ಎಂಬ ಕಡುವಿರೋಧವನ್ನು ಎದುರಿಸುತ್ತಿರುವ ಸರಕಾರಕ್ಕೆ ಏನೇನೂ ಸಾಂತ್ವನ ನೀಡದಿದ್ದರೆ ಆಶ್ಚರ್ಯವಿಲ್ಲ.

ಈ ನಡುವೆ ಜನಸಾಮಾನ್ಯರ ಹಿತಗಳನ್ನು ಕಡೆಗಣಿಸಿ ಬಂಡವಾಳಿಗರಿಗೆ 'ಒಳ್ಳೆಯ ದಿನ'ಗಳನ್ನು ಕಲ್ಪಿಸುತ್ತಿದ್ದರೂ **ರಫ್ತು ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಅಂತರ್‍ರಾಷ್ಟ್ರೀಯ ಪರಿಸ್ಥಿತಿಗಳನ್ನು ದೂರುವಂತಿಲ್ಲ ಎಂದು ಕ್ರೈಸಿಲ್ ಸಂಸ್ಥೆ ನಡೆಸಿದ ಅಧ್ಯಯನದಿಂದ ಕಂಡು ಬಂದಿದ ಎಂದು 'ದಿ ಹಿಂದು' ಪತ್ರಿಕೆ' ವರದಿ ಮಾಡಿದೆ.**(ನ.4). **ಹೌದು, ಜಾಗತಿಕ ರಫ್ತಿನಲ್ಲಿ ಭಾರತದ ಪಾಲು ಇಳಿಯುತ್ತಿದೆ, ಆದರೆ ನಮ್ಮ ನೆರೆಯಲ್ಲಿರುವ ಬಾಂಗ್ಲಾದೇಶ, ಚೀಣಾ ಮತ್ತು ವಿಯೆಟ್ನಾಮಿನ ಪಾಲು ಏರುತ್ತಿದೆ ಹೇಗೆ?** ಇದು ಸಹಜವಾಗಿ ಏಳುವ ಪ್ರಶ್ನೆ.

ಈ ದಲಿತ ಸೈನಿಕನ ತಂದೆ–ತಾಯಿಯ ಪಾಡು ಇನ್ನೂ 'ಮನದ ಮಾತು' ಆಗಿಲ್ಲ

'ಸರ್ಜಿಕಲ್ ಸ್ಟ್ರೈಕ್' ಪ್ರಚಾರದ ನಂತರ ಈಗ ನಾಗರಿಕರಲ್ಲಿ ಸೈನ್ಯ ಮತ್ತು ಸೈನಿಕರ ಬಗ್ಗೆ ಅಪಾರ ಪ್ರೇಮ ಉಕ್ಕಿ ಹರಿಯುತ್ತಿದೆ. ಆದರೆ ಇದಕ್ಕೂ ಜಾತಿ–ಧರ್ಮದ ಪಕ್ಷಪಾತ ಅಂಟಿಕೊಂಡಂತಿದೆ.


ಗುಜರಾತಿನ ಸುರೇಂದ್ರ ನಗರ ಜಿಲ್ಲೆಯ ಕರಾಡಿ ಎಂಬ ಹಳ್ಳಿಯ ವಯಸ್ಸಾದ ದಲಿತ ದಂಪತಿಗಳು ಈಗ ಅಹಮದಾಬಾದಿನ ಸತ್ಯಾಗ್ರಹ ಛಾವನೀಯಲ್ಲಿ ಧರಣಿ ಕೂತಿದ್ದಾರೆ, ಆರು ವರ್ಷಗಳ ಹಿಂದೆ ಕೊಲೆಯಾದ ತಮ್ಮ ಸೈನಿಕ ಮಗನಿಗೆ ನ್ಯಾಯ ಸಿಗಬೇಕೆಂದು. ಅಕ್ಟೋಬರ್14ರಂದು ಪಿಟಿಐ ಈ ಸುದ್ದಿಯನ್ನು ವರದಿ ಮಾಡಿದೆ.

ಇವರ ಮಗ ದಿನೇಶ ರಾಠೋಡ್ ನಾಲ್ಕು ಶೌರ್ಯ ಮೆಡಲ್‌ಗಳನ್ನು ಪಡೆದಿದ್ದ ವೀರ ಸೈನಿಕ. ಜಮ್ಮು–ಕಾಶ್ಮೀರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆತ ರಜಾದಲ್ಲಿ ಊರಿಗೆ ಬಂದಿದ್ದಾಗ ಪಂಚಾಯತು ಕಟ್ಟೆಯಲ್ಲಿ ಜೂಜಾಡುತ್ತಿದ್ದ ಕೆಲವು ಯುವಕರನ್ನು ಬೈದನಂತೆ. ಮೇಲ್ಜಾತಿಗಳ ಈ ಯುವಕರು ಸಿಟ್ಟಿಗೆದ್ದು ಆದಿನ ರಾತ್ರಿ ದಿನೇಶನ ಮನೆ ನುಗ್ಗಿ ಪಿಸ್ತೂಲಿನಿಂದ ಹೊಡೆದು ಸಾಯಿಸಿದರು. ಪೋಲಿಸರೇನೋ ಐವರನ್ನು ಬಂಧಿಸಿದರು. ಆದರೆ ಸರಿಯಾಗಿ ಕೇಸ್ ನಡೆಸದ್ದರಿಂದ ಈ ಐವರನ್ನೂ ಕೊಲೆಮಾಡಿದ್ದಕ್ಕೆ ಸಾಕಷ್ಟು ಪುರಾವೆಗಳಿಲ್ಲವೆಂದು ಕೋರ್ಟ್ ಬಿಡುಗಡೆ ಮಾಡಿತ್ತು. ಈಗ ಈ ಮಂದಿ ತಮಗೂ 'ಪಾಠ 'ಕಲಿಸು'ತ್ತಾರೆ ಎಂಬ ಭಯ ಮಗನನ್ನು ಕಳೆದುಕೊಂಡು ತುಂಡು ಜಮೀನಿನಲ್ಲಿ ಜೀವನ ನಡೆಸುತ್ತಿರುವ ಈ ದಲಿತ ದಂಪತಿಗಳಿಗೆ. 'ಪ್ರತಿರೋಧ್' ಎಂಬ ದಲಿತ ಹಕ್ಕುಗಳ ಸಂಘಟನೆಯ ಬೆಂಬಲದಿಂದ ಅವರೀಗ ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು, ತಮಗೆ 25ಲಕ್ಷ ರೂ. ಪರಿಹಾರ ಬೇಕೆಂದು ಕೇಳಿ ಧರಣಿ ನಡೆಸುತ್ತಿದ್ದಾರೆ. ಈ ನಡುವೆ 65 ವರ್ಷದ ತಾಯಿ ಜೇಥಿಬೇನ್ ರಾಠೋಡ್ ಧರಣಿ ಕೂತಲ್ಲೇ ದೈಹಿಕ ದೌರ್ಬಲ್ಯದಿಂದಾಗಿ ಪ್ರಜ್ಞೆ ತಪ್ಪಿದ ಘಟನೆಯೂ ಸಂಭವಿಸಿತು. ಆದರೂ ಈ ಜಾತಿ ಗೂಂಡಾಗಿರಿಗೆ ಬಲಿಯಾದ ವೀರ ಸೈನಿಕನ ಮುದಿ ತಂದೆ–ತಾಯಿಯ ಪಾಡು ಆಗ ಅವರ ಮುಖ್ಯಮಂತ್ರಿಯಾಗಿದ್ದ ಈಗಿನ ಪ್ರಧಾನ ಮಂತ್ರಿಗಳ ಮನವನ್ನು ಇನ್ನೂ ತಟ್ಟಿದಂತಿಲ್ಲ.

ಈಗ ಎನ್‌ಕೌಂಟರ್ ರಾಷ್ಟ್ರವಾದದ ದಿನಗಳು

ಸರ್ಜಿಕಲ್ ಸ್ಟ್ರೈಕ್ ರಾಷ್ಟ್ರವಾದದ ಬೊಬ್ಬೆ ಇಳಿಯುತ್ತಿದ್ದಂತೆ ಈಗ ನಿಷೇಧಿತ ಸಿಮಿ ಸಂಘಟನೆಯ ಸದಸ್ಯರೆಂದು ವಿಚಾರಣೆಗೆ ಒಳಪಟ್ಟಿದ್ದ ಕೈದಿಗಳ ಪರಾರಿ ಮತ್ತು ಎನ್‌ಕೌಂಟರ್ ಸಾವಿನ ಹಿನ್ನೆಲೆಯಲ್ಲಿ 'ಎನ್‌ಕೌಂಟರ್' ರಾಷ್ಟ್ರವಾದದ ಅಬ್ಬರ ಆಳುವ ಪಕ್ಷದ ಪರಿವಾರದ ಮುಖಂಡರ ಬಾಯಲ್ಲಿ ಮತ್ತು ಟಿವಿ ಪರದೆಗಳ ಮೇಲೆ ರಾರಾಜಿಸುತ್ತಿದೆ. ಈ 'ಎನ್‌ಕೌಂಟರ್' ಕತೆಯಲ್ಲಿ ಹಲವು ತೂತುಗಳಿವೆ, ಬಾಲಿವುಡನ್ನು ಮೀರಿಸಿದ 'ಸ್ಕ್ರಿಪ್ಟ್'ನ್ನೂ ಹೊಂದಿದೆ ಎಂದು ಗುಜರಾತ್ ಬಗ್ಗೆ 'ಫೈನಲ್ ಸೊಲ್ಯುಶನ್' ಸಿನೆಮಾ ನಿರ್ಮಿಸಿದ ನಿರ್ದೇಶಕರು ಹೇಳಿದ್ದಾರೆ. ಇಂತಹ ಸಂದೇಹಗಳು ಹಲವರಿಗೆ ಬಂದಿವೆ. ಅವರೆಲ್ಲ ಈಗ ರಾಷ್ಟ್ರದ್ರೋಹಿಗಳ ಹೊಸ ಪಟ್ಟಿಗೆ ಸೇರ್ಪಡೆಯಾಗುತ್ತಿದ್ದಾರೆ. ಇದು 'ಗುಜರಾತ್ ಮಾದರಿ' ಎಂದವರು ಖಂಡಿತ ಈ ಪಟ್ಟಿಗೆ ಅರ್ಹರು.

ಆದರೆ ಈ ಎನ್‌ಕೌಂಟರ್ ಮಾಡಿದ ಮಧ್ಯಪ್ರದೇಶದ ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥ ಈ ಕೈದಿಗಳ ಬಳಿ ಶಸ್ತ್ರಾಸ್ತ್ರಗಳಿರಲಿಲ್ಲ ಎಂದು ಹೇಳಿದ್ದಾರೆ. ಅವರು ರಾಷ್ಟ್ರ ದ್ರೋಹಿಗಳಾಗುತ್ತಾರೆಯೇ, ರಾಷ್ಟ್ರೀಯ ಮಾನವ ಹಕ್ಕು ಆಯೋಗ ಮಧ್ಯಪ್ರದೇಶ ಸರಕಾರಕ್ಕೆ ನೋಟೀಸು ಕಳಿಸಿದೆ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಅದೂ ಈ ಪಟ್ಟಿಗೆ ಸೇರುತ್ತದೆಯೇ ಎಂದು ಸಿಪಿಐ(ಎಂ) ಹಿರಿಯ ಮುಖಂಡರಾದ ಬೃಂದಾ ಕಾರಟ್ ಕೇಳುತ್ತಾರೆ.

ಪರಾರಿ ಕೈದಿಗಳು ಕೊಂದ ಭೋಪಾಲ್ ಸೆಂಟ್ರಲ್ ಜೈಲಿನ ಮುಖ್ಯ ವಾರ್ಡರ್ ರಾಮಶಂಕರ ಯಾದವ್ ಪ್ರಾಣಾರ್ಪಣೆಯ ಬಗ್ಗೆ ಈ ಎಲ್ಲ 'ಸಂದೇಹವಾದಿ'ಗಳಿಗೆ ಗೌರವ ಇಲ್ಲ ಎಂಬುದು ಈ ಮಂದಿಯ ಒಂದು ಆರೋಪ. ಆದರೆ ಈ ಬಗ್ಗೆ ಅಲ್ಲಿನ ಮುಖ್ಯ ಮಂತ್ರಿಗಳಿಗೆ ಏನಾದರೂ ಆತ್ಮಗ್ಲಾನಿ ಇದೆಯೇ ಎಂದು ಬೃಂದಾ ಕಾರಟ್ ಪ್ರಶ್ನಿಸುತ್ತಾರೆ ಏಕೆ–ಂದರೆ ಭೋಪಾಲ್ ಸೆಂಟ್ರಲ್ ಜೈಲ್ ಅಂತಿಂತ ಜೈಲಲ್ಲ. ಐಎಸ್‌ಒ 9001–2000 ಸರ್ಟಿಫೈಡ್ ಜೈಲು. ಆದರೂ ಈ ಪರಾರಿ ಕೃತ್ಯದ ಒಂದೇ ಒಂದು ಸಿಸಿಟಿವಿ ಫೂಟೇಜ್ ಇಲ್ಲವಂತೆ. ಜೈಲು ಮಂತ್ರಿಗಳು ಸರಕಾರದ ಕಡೆಯಿಂದ ತಪ್ಪುಗಳಾಗಿವೆ ಎಂದು ಒಪ್ಪಿಕೊಂಡಿದ್ದಾರಂತೆ. ಈ ತಪ್ಪುಗಳಾಗಿರದಿದ್ದರೆ ರಾಮಶಂಕರ ಯಾದವ್ ಬದುಕಿರುತ್ತಿರಲಿಲ್ಲವೇ ಎಂಬ ಪ್ರಶ್ನೆಯನ್ನು 'ರಾಷ್ಟ್ರದ್ರೋಹ'ದ ಪರಿವೆಯಿಲ್ಲದೆ ಕೇಳಲಾಗುತ್ತಿದೆ.

ಇತ್ತೀಚೆಗೆ ಬಯಲಿಗೆ ಬಂದಿರುವ ದಾಖಲೆಯ ಪ್ರಕಾರ ಪರಾರಿ ಕೈದಿಗಳನ್ನು 'ಮೇಲಿನವರ' ಆದೇಶದ ಮೇಲೆ ಕೊಲ್ಲಲಾಗಿದೆಯೇ ಎಂಬ ಸಂದೇಹ ಉಂಟಾಗಿದೆ.

ಅದೇನೇ ಇರಲಿ, ಮಧ್ಯಪ್ರದೇಶದ ಮುಖ್ಯಮಂತ್ರಿಗಳು "ಎಷ್ಟು ದಿನ ನಾವು ಅವರಿಗೆ ಬಿರಿಯಾನಿ ತಿನ್ನಿಸುತ್ತಿರಬೇಕು?' ಎಂದು ಕೇಳಿರುವುದು ಗಮನಾರ್ಹ. ಅಂದರೆ ವಿಚಾರಣಾಧೀನ ಕೈದಿಗಳ ನ್ಯಾಯಾಂಗಬಾಹಿರ ಕೊಲೆಗಳು ಸಮರ್ಥನೀಯವೇ, ಅವರು ಮುಸ್ಲಿಮರಾದರೆ ಇದು ಇನ್ನು ಮುಂದೆ ಸಾಮಾನ್ಯ ಸಂಗತಿಯಾಗಬೇಕೇ ಎಂದು ಬೃಂದಾ ಕಾರಟ್ ಪ್ರಶ್ನಿಸಿದ್ದಾರೆ. ಪಕ್ಕದ ಮಹಾರಾಷ್ಟ್ರದಲ್ಲಿ ಮಲೇಗಾಂವ್‌ನಿಂದ ಹಿಡಿದು ಸಮಝೌತ ಎಕ್ಸ್‌ಪ್ರೆಸ್ ವರೆಗಿನ ಸ್ಫೋಟಗಳಲ್ಲಿ 100ಕ್ಕೂ ಹೆಚ್ಚು ಮಮದಿಯನ್ನು ಸಾಯಿಸಿದವರು ಹತ್ತು ವರ್ಷಗಳಿಂದಲೂ ಹೆಚ್ಚು ಕಾಲ ವಿಚಾರಣಾಧೀನರಾಗಿದ್ದಾರೆ, ಅವರಿಗೆ ಎಷ್ಟು ದಿನ ಪೂರಿ–ಆಲೂ ಎಂದು ಕೇಳುವುದಿಲ್ಲವೇ ಎಂದು ಖಾರವಾಗಿ ಪ್ರಶ್ನಿಸುತ್ತಾರೆ(ಎನ್‌ಡಿಟಿವಿ.ಕಾಂ, ನವಂಬರ್2)

'ನ್ಯಾಯಾಲಯಗಳಿಗೆ ಬೀಗ ಹಾಕಿಬಿಡಿ'

ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ತರಾಟೆ


ಅಕ್ಟೋಬರ್ 28ರಂದು ಸುಪ್ರಿಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಿರುವ ಪೀಠ ಕೇಂದ್ರ ಸರಕಾರ ವಿವಿಧ ಹೈಕೋರ್ಟುಗಳಿಗೆ ನ್ಯಾಯಾಧೀಶರ ನೇಮಕದ ಬಗ್ಗೆ ನೀಡಿರುವ ಶಿಫಾರಸುಗಳ ಮೇಲೆ ನಿರ್ಣಯ ತಿಳಿಸದೆ ಕಾಲೆಳೆಯುತ್ತಿದೆ ಎಂದು ತೀಕ್ಷ್ಣವಾದ ಟಿಪ್ಪಣಿ ಮಾಡಿದೆ.

ಕರ್ನಾಟಕದ ಹೈಕೋರ್ಟಿನಲ್ಲಿ ನ್ಯಾಯಾಧೀಶರಿಲ್ಲದೆ ನೆಲಮಹಡಿಗೆ ಬೀಗ ಹಾಕಲಾಗಿದ ಎನ್ನುತ್ತ ದೇಶದ ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಠಾಕುರ್, ನ್ಯಾಯಮೂರ್ತಿ ಡಿ. ವೈ.ಚಂದ್ರಚೂಡ್ ಮತ್ತು ನ್ಯಾಯ ಮೂರ್ತಿ ಎಲ್. ನಾಗೇಶ್ವರ ರಾವ್ ಅವರಿದ್ದ ಪೀಠ ನ್ಯಾಯಿಕ ಸಂಸ್ಥೆಗಳನ್ನು ಅಸ್ತವ್ಯಸ್ತಗೊಳಿಸುವ ಯಾವುದೇ ಪ್ರಯತ್ನವನ್ನು ಸಹಿಸಲು ಸಾಧ್ಯವಿಲ್ಲ ಎಂದು ಸರಕಾರವನ್ನು ಎಚ್ಚರಿಸಿದೆ.

ಅಲಹಾಬಾದ್ ಹೈಕೋರ್ಟಿಗೆ ನ್ಯಾಯಾಧೀಶರ ನೇಮಕಕ್ಕೆ ಕಳಿಸಿರುವ ಶಿಫಾರಸುಗಳು ಕಳೆದ ಒಮಬತ್ತು ತಿಂಗಳಿಂದ ಸರಕಾರದ ಬಳಿ ಬಿದ್ದಿವೆ. ಸರಕಾರಕ್ಕೆ ಯಾವುದೇ ಹೆಸರಿನ ಬಗ್ಗೆ ಸಮಸ್ಯೆಯಿದ್ದರೆ ಅದನ್ನು ತಿಳಿಸಬಹುದು, ಏನೂ ಮಾಡದೆ ಸುಮ್ಮನೆ ಕೂರುವುದು ಸಾಧ್ಯವಿಲ್ಲ, ಹೈಕೋರ್ಟುಗಳಿಗೆ ಮಂಜೂರಾಗಿರುವ ನ್ಯಾಯಾಧೀಶರ ಹುದ್ದೆಗಳಲ್ಲಿ 50ಶೇ. ಮಾತ್ರ ಭರ್ತಿಯಾಗಿವೆ ಎಂದು ಮುಖ್ಯ ನ್ಯಾಯಾಧೀಶರು ಹೇಳಿದರು.

"ಹಿಂದೆ ನ್ಯಾಯಾಧೀಶರಿದ್ದಾರೆ, ಕೋರ್ಟ್‌ರೂಮ್‌ಗಳಿಲ್ಲ ಎಂಬ ಸನ್ನಿವೇಶ ಇತ್ತು, ಇಂದು ಕೋರ್ಟ್‌ರೂಮ್‌ಗಳಿದ್ದಾವೆ, ನ್ಯಾಯಾಧೀಶರುಗಳಿಲ್ಲ. ಕರ್ನಾಟಕ ಹೈಕೋರ್ಟಿನಲ್ಲಿ ಅರ್ಧದಷ್ಟು ಕೋರ್ಟ್‌ರೂಮ್‌ಗಳಿಗೆ ಬೀಗ ಹಾಕಿದ್ದಾರೆ. ನೀವು ಎಲ್ಲ ಕೋರ್ಟ್‌ಗಳಿಗೆ ಬೀಗ ಹಾಕಿ ನ್ಯಾಯವನ್ನೇ ಮುಚ್ಚಿ ಬಿಡಬಹುದು" ಎಂದು ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು "ನೀವು ನ್ಯಾಯಕ್ಕೆ ಬೀಗ ಹಾಕಿಬಿಡಬೇಕೆಂದು ಬಯಸುತ್ತೀರಾ?" ಸರಕಾರದ ಅಟಾರ್ನಿ ಜನರಲ್‌ರನ್ನು ಖಾರವಾಗಿ ಪ್ರಶ್ನಿಸಿದರು. ನವಂಬರ್ 11ರಂದು ವಿಚಾರಣೆ ಮುಂದುವರೆಯುತ್ತದೆ

'ನಾಯಿಗೆ ಕಲ್ಲೆಸೆದರೆ ಅದಕ್ಕೆ ಸರಕಾರ ಹೊಣೆಯೇ' ಎಂಬ ಉದ್ಗಾರದ ಖ್ಯಾತಿಯ 'ಒಳ್ಳೆಯ ದಿನ'ಗಳ ಸರಕಾರದ ಮಂತ್ರಿ ಮತ್ತೆ ಸುದ್ದಿಯಲ್ಲಿದ್ದಾರೆ. ದೇಶದ ರಾಜಧಾನಿಯಲ್ಲಿ ಸರಕಾರ ಬೆನ್ನು ತಟ್ಟಿಕೊಳ್ಳುತ್ತಿರುವ 'ಒಂದು ರ್‍ಯಾಂಕ್ ಒಂದು ಪೆನ್ಶನ್' ಜಾರಿಯಾಗಿಲ್ಲ ಎಂದು ಆತ್ಮಹತ್ಯೆ ಮಾಡಿಕೊಂಡ ನಿವೃತ್ತ ಸುಬೇದಾರ್ ರಾಮ್ ಕಿಶನ್ ಗ್ರೆವಾಲ್ ಸಾವಿಗೆ ಸರಕಾರದ ವಿಫಲತೆ ಕಾರಣವಲ್ಲ, ಆತನ ಮಾನಸಿಕ ಸ್ಥಿತಿ ಆಗ ಹೇಗಿತ್ತು ಎಂಬುದನ್ನು ನಿರ್ಧರಿಸಬೇಕು ಎಂದು ಈ ನಿವೃತ್ತ ಸೇನಾಧಿಪತಿ ಹೇಳಿರುವುದು ಇನ್ನೊಂದು ಸಂವೇದನಾಶೂನ್ಯ ಹೇಳಿಕೆ ಎಂಬ ಟೀಕೆಗೆ ಒಳಗಾಗಿದೆ–ಸುದ್ದಿ



ವ್ಯಂಗ್ಯ ಚಿತ್ರ: ಸುರೇಂದ್ರನ್, ದಿ ಹಿಂದು

‘ಮೂಲ ಸೌಕರ್ಯಗಳ ಅಭಿವೃದ್ಧಿ’ಯ ವರ್ಗ ಆಯಾಮ

ಮೂಲಸೌಕರ್ಯಗಳು ಅಂದರೆ, ಅದರಲ್ಲಿ ಅಣೆಕಟ್ಟಿನಿಂದ ಹಿಡಿದು ನಾಲೆ; ಸೇತುವೆಗಳ ವರೆಗೆ, ರಸ್ತೆಗಳಿಂದ ಹಿಡಿದು ಬಂದರುಗಳ ವರೆಗೆ, ರೈಲು ಮಾರ್ಗದಿಂದ ಹಿಡಿದು ವಿಮಾನ ನಿಲ್ದಾಣಗಳವರೆಗೆ ಜನ ಬಳಕೆಯ ಅನೇಕ ಸೇವೆಗಳು ಸೇರಿವೆ. ಇವೆಲ್ಲವೂ ಜನರಿಗೆ ಉಪಯುಕ್ತವೇ. ಆದ್ದರಿಂದಲೇ ಮೂಲಸೌಕರ್ಯಗಳ ಅಭಿವೃದ್ಧಿ ನಿಸ್ಸಂದೇಹವಾಗಿ ಅಪೇಕ್ಷಣೀಯವೆಂದೇ ಎಲ್ಲರೂ ಬಗೆಯುತ್ತಾರೆ. ಹಾಗಾಗಿ, ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಭಾರೀ ಮೊತ್ತದ ಹಣ ನಿಗದಿಪಡಿಸಿದಾಗ ಅಥವಾ ಮೂಲಸೌಕರ್ಯ ಅಭಿವೃದ್ಧಿ ಪಡಿಸುವವರಿಗೆ ಭಾರೀ ಮೊತ್ತದ ಸಾಲ ಒದಗಿಸುವಂತೆ ಸರ್ಕಾರವು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಆದೇಶಿಸಿದಾಗ, ಮೂಲಸೌಕರ್ಯಗಳ ಔಚಿತ್ಯ, ಅವುಗಳ ಪ್ರಯೋಜನಗಳು ಅಥವಾ ಸಾರ್ಥಕತೆಯ ಬಗ್ಗೆ ಪ್ರಶ್ನೆ ಎತ್ತುವ ಸಂಭವ ಹೆಚ್ಚುಕಡಿಮೆ ಇಲ್ಲವೇ ಇಲ್ಲ ಎನ್ನಬಹುದು.

ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಪ್ರಶ್ನೆಗೊಳಪಡಿಸದ ರೀತಿಯಲ್ಲಿ ನೋಡುವುದು ಸರಿಯಾದ ಕ್ರಮವಲ್ಲ. ಏಕೆಂದರೆ, ‘ಮೂಲಸೌಕರ್ಯ’ ಎಂಬ ಪದ ಏನನ್ನು ಒಳಗೊಂಡಿರುತ್ತದೆ ಎಂಬುದು, ಯಾವ ಮಾದರಿಯ ಅಭಿವೃದ್ಧಿಯ ಒಂದು ಪಥವನ್ನು ಅನುಸರಿಸಲಾಗುತ್ತಿದೆ ಎಂಬುದರ ಮೇಲೆ ಅವಲಂಬಿಸಿದೆ. ಆರ್ಥಿಕ ಉದಾರೀಕರಣ ನೀತಿಗಳು ಬರುವ ಮುನ್ನ ದೇಶವು ಆರ್ಥಿಕ ಅಭಿವೃದ್ಧಿಯ ಬಗ್ಗೆ ನಿಯಂತ್ರಣ ನೀತಿಯನ್ನು ಅನುಸರಿಸುತ್ತಿತ್ತು. ಎಂತಹ ಮೂಲಸೌಕರ್ಯಗಳು ಅಭಿವೃದ್ಧಿಯಾಗಬೇಕು ಎಂದು ಆ ನಿಯಂತ್ರಣ–ಆಳ್ವಿಕೆಯು ಒತ್ತುಕೊಡುತ್ತಿತ್ತೋ ಅಂತಹ ಅಭಿವೃದ್ಧಿ ಪಥವೂ ಮತ್ತು ಇಂದಿನ ನವ–ಉದಾರ ನೀತಿಗಳ ಆಳ್ವಿಕೆಯಲ್ಲಿ ಒತ್ತು ಪಡೆಯುತ್ತಿರುವ ಮೂಲಸೌಕರ್ಯಗಳ ಅಭಿವೃದ್ಧಿಯ ಪಥವೂ ಬೇರೆ ಬೇರೆಯೇ. ಅಭಿವೃದ್ಧಿಯ ಪಥ ಯಾವ ಉದ್ದೇಶ ಹೊಂದಿದೆ ಎಂಬುದನ್ನು ಪರಿಗಣಿಸದೆ, ಮೂಲಸೌಕರ್ಯಗಳನ್ನು ಅದರಿಂದ ಬೇರ್ಪಡಿಸಿ ಮೂಲಸೌಕರ್ಯಗಳಷ್ಟನ್ನೇ ಗಮನದಲ್ಲಿಟ್ಟುಕೊಂಡು ಅದಕ್ಕಾಗಿ ಮಿತಿಇಲ್ಲದೆ ಮಾಡುವ ಖರ್ಚುಗಳಿಗೆ ಹಿಂದೆ ಮುಂದೆ ನೋಡದೆ ಅನುಮೋದನೆ ಸೂಚಿಸಿ ನಂತರ ಆ ಅಭಿವೃದ್ಧಿಯ ಪಥ ಜನ–ವಿರೋಧಿಯಾಗಿದೆ ಎಂದು ಹೇಳುವುದು ಅರ್ಥವಿಲ್ಲದ ಮಾತು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮೂಲಸೌಕರ್ಯ ಏನನ್ನು ನಿರ್ದಿಷ್ಟವಾಗಿ ಒಳಗೊಂಡಿರುತ್ತದೆ ಎಂಬುದು, ಯಾವ ಅಭಿವೃದ್ಧಿ ಪಥವನ್ನು ಅನುಸರಿಸಲಾಗುತ್ತಿದೆ ಎಂಬುದರ ಮೂಲಕ ತಿಳಿಯುತ್ತದೆ. ಮತ್ತು ಯಾವದೇ ಅಭಿವೃದ್ಧಿ ಪಥವು ವರ್ಗ ಬಲಾಬಲಗಳನ್ನು ಬದಲಾಯಿಸುವ ಉದ್ದೇಶ ಹೊಂದಿರುತ್ತದೆ. ಹಾಗಾಗಿ, ಮೂಲಸೌಕರ್ಯಗಳ ಕಲ್ಪನೆಯಲ್ಲಿ ವರ್ಗದ ಆಯಾಮವಿರುತ್ತದೆ.

ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಕಾಲದಲ್ಲಿ ನಿರ್ಮಿಸಿದ ರೈಲು ಮಾರ್ಗಗಳು ಭಾರತೀಯರಿಗೆ ‘ಕೆಲಸಕ್ಕೆ ಬಾರದ್ದು’ ಎಂದು ಕಾರ್ಲ್ ಮಾರ್ಕ್ಸ್ ತೀಕ್ಷ್ಣವಾಗಿ ವ್ಯಕ್ತಪಡಿಸಿದ ಅಭಿಪ್ರಾಯವು ವರ್ಗಆಯಾಮದಿಂದ ಕೂಡಿತ್ತು. ಭಾರತೀಯರು ರೈಲುಗಳಲ್ಲಿ ಪ್ರಯಾಣ ಮಾಡುವುದೇ ಇಲ್ಲ ಎಂಬುದು ಅವರ ಮಾತಿನ ಅರ್ಥವಲ್ಲ. ಭಾರತದ ಸಂಪನ್ಮೂಲಗಳನ್ನು ಬಳಸಿ ನಿರ್ಮಿಸಿದ ರೈಲು ಮಾರ್ಗಗಳ ಅತಿ ಹೆಚ್ಚಿನ ಪ್ರಯೋಜನ ಪಡೆದವರು ಬ್ರಿಟಿಷರೇ. ಭಾರತದಲ್ಲಿ ರೈಲು ಮಾರ್ಗಗಳನ್ನು ನಿರ್ಮಿಸುವ ಉದ್ದೇಶದಲ್ಲಿ, ಭಾರತದಲ್ಲಿ ಕೊಳ್ಳೆ ಹೊಡೆದ ಕಚ್ಚಾ ಸಾಮಗ್ರಿಗಳನ್ನು ಬ್ರಿಟನ್ನಿಗೆ ಸಾಗಿಸುವ ಉದ್ದೇಶ ಬ್ರಿಟಿಷರಿಗೆ ಬಹಳ ಮುಖ್ಯವಾಗಿತ್ತು. ಈ ಬಗ್ಗೆ, ಕಾರ್ಲ್ ಮಾರ್ಕ್ಸ್‌ಅವರ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಮೂಲಸೌಕರ್ಯದ ನಿರ್ಮಾಣವು ಅಭಿವೃದ್ಧಿಯ ಪಥದೊಳಗೆ ನೆಲೆಗೊಂಡಿರುತ್ತದೆ ಎಂಬುದು. ಭಾರತೀಯರಿಗೆ ರೈಲು ಪ್ರಯಾಣದ ಸೌಲಭ್ಯ ಒದಗಿಸುವುದು ಬ್ರಿಟಿಷರ ಆದ್ಯತೆಯಾಗಿರಲಿಲ್ಲ. ಅವರ ಸದ್ಭಾವನೆಯ ದ್ಯೋತಕವೂ ಆಗಿರಲಿಲ್ಲ. ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳುವುದೇ ಅವರಏಕೈಕ ಉದ್ದೇಶವಾಗಿತ್ತು.

> ಅಭಿವೃದ್ಧಿಯ ಪಥವನ್ನು ಪರಿಗಣಿಸದೆ ಮೂಲಸೌಕರ್ಯಗಳಷ್ಟನ್ನೇ ಗಮನದಲ್ಲಿಟ್ಟುಕೊಂಡು ಅದಕ್ಕಾಗಿ ಮಿತಿಇಲ್ಲದೆ ಮಾಡುವ ಖರ್ಚುಗಳಿಗೆ ಹಿಂದೆ ಮುಂದೆ ನೋಡದೆ ಅನುಮೋದನೆ ಸೂಚಿಸಿ ನಂತರ ಆ ಅಭಿವೃದ್ಧಿಯ ಪಥ ಜನ–ವಿರೋಧಿಯಾಗಿದೆ ಎಂದು ಹೇಳುವುದು ಅರ್ಥವಿಲ್ಲದ ಮಾತು. ಅಂದರೆ ಮೂಲಸೌಕರ್ಯ ಏನನ್ನು ನಿರ್ದಿಷ್ಟವಾಗಿ ಒಳಗೊಂಡಿರುತ್ತದೆ ಎಂಬುದು, ಯಾವ ಅಭಿವೃದ್ಧಿ ಪಥವನ್ನು ಅನುಸರಿಸಲಾಗುತ್ತಿದೆ ಎಂಬುದರ ಮೂಲಕ ತಿಳಿಯುತ್ತದೆ. ಮತ್ತು ಯಾವದೇ ಅಭಿವೃದ್ಧಿ ಪಥವು ವರ್ಗ ಬಲಾಬಲಗಳನ್ನು ಬದಲಾಯಿಸುವ ಉದ್ದೇಶ ಹೊಂದಿರುತ್ತದೆ. ಹಾಗಾಗಿ, ಮೂಲಸೌಕರ್ಯಗಳ ಕಲ್ಪನೆಯಲ್ಲಿ ವರ್ಗದ ಆಯಾಮವಿರುತ್ತದೆ ಎನ್ನುತ್ತಾರೆ **ಪ್ರೊ. ಪ್ರಭಾತ್ ಪಟ್ನಾಯಕ್**. ಸುಮಾರು ಒಂದೂವರೆ ಶತಮಾನದ ಹಿಂದೆ ಬ್ರಿಟಿಶರು ಇಲ್ಲಿ ರೈಲುಮಾರ್ಗ ಆರಂಭಿಸಿದಾಗ ಅದು ಭಾರತೀಯರಿಗೆ ‘ಕೆಲಸಕ್ಕೆ ಬಾರದ್ದು’ ಎಂದು ಕಾರ್ಲ್ ಮಾರ್ಕ್ಸ್ ಹೇಳಿದ ರೀತಿಯಲ್ಲಿಯೇ ಈಗಲೂ ಅದೇ ಮಾತನ್ನೇ ಹೇಳಬಹುದು. ಜನಸಾಮಾನ್ಯರ ದೃಷ್ಟಿಯಿಂದ ‘ಕೆಲಸಕ್ಕೆ ಬಾರದ’ ಹೂಡಿಕೆಗಳನ್ನು ಹದ್ದುಬಸ್ತಿನಲ್ಲಿಡಬೇಕು ಮತ್ತು ಪಡಿತರ ವ್ಯವಸ್ಥೆಗೆ ಒಳಪಡಿಸಬೇಕು ಎನ್ನುತ್ತಾರೆ ಅವರು. ಈ ಕುರಿತ ಅವರ Developing “Infrastructure” ಲೇಖನದ ಭಾವಾನುವಾದ.


ಮೊಘಲರ ಕಾಲದ ಮೂಲಸೌಕರ್ಯಗಳ ಬಗ್ಗೆ ಯೋಚಿಸಿದಾಗ, ರಸ್ತೆಗಳು, ರಸ್ತೆ ಬದಿಯ ಅಲ್ಲಲ್ಲಿ ಧರ್ಮಛತ್ರಗಳು, ದವಸ ಧಾನ್ಯಗಳ ವ್ಯಾಪಾರ ನಡೆಯುತ್ತಿದ್ದ ಪಟ್ಟಣಗಳು ಮುಂತಾದ ಬಿಂಬಗಳು ಮನಸ್ಸಿನಲ್ಲಿ ಮೂಡುತ್ತವೆ. ಬ್ರಿಟಿಷರ ಕಾಲದಲ್ಲಿ, ಹಳ್ಳಿಗಳು ಮತ್ತು ಪಟ್ಟಣಗಳ ನಡುವೆ ವ್ಯಾಪಾರದ ಸಲುವಾಗಿ, ಒಳನಾಡು ಮತ್ತು ಬಂದರುಗಳ ನಡುವೆ ರಸ್ತೆಗಳು, ಕಚ್ಚಾ ಸಾಮಗ್ರಿಗಳ ರಫ್ತು ಮತ್ತು ತಯಾರಿಕಾ ವಸ್ತುಗಳ ಆಮದುಗಳ ಸಲುವಾಗಿ ಬಂದರುಗಳು ನಿರ್ಮಾಣಗೊಂಡವು. ವಿಶ್ವಾದ್ಯಂತ ಖ್ಯಾತಿಗಳಿಸಿದ್ದ ಆಗ್ರಾದಂತಹ ಹಳೆಯ ನಗರಗಳು ಪ್ರಾಮುಖ್ಯತೆ ಕಳೆದುಕೊಂಡವು. ಪರಿಣಾಮವಾಗಿ, ಅಂತಹ ನಗರಗಳ ನಡುವಿನ ಸಾರಿಗೆ ಸೌಲಭ್ಯಗಳು ಕಡಿಮೆಯಾದವು. ಮೂಲಸೌಕರ್ಯಗಳ ಕಲ್ಪನೆ ಹೊಸ ಅರ್ಥ ಪಡೆಯಿತು. ವಸಾಹತುಶಾಹಿಗಳ ವಾಣಿಜ್ಯ ಉದ್ದೇಶಗಳಿಗೆ ಅನುಕೂಲವಾಗುವಂತೆ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಈ ರೈಲು ಮಾರ್ಗಗಳನ್ನು ನಿರ್ಮಿಸಿದ ಖಾಸಗಿ ಕಂಪೆನಿಗಳಿಗೆ ಲಾಭ ಸಿಗುವ ಗ್ಯಾರಂಟಿ ಕೊಡಲಾಗಿತ್ತು ಮತ್ತು ಅದನ್ನು ಸರ್ಕಾರದ ಬಜೆಟ್‌ನಿಂದ ಕೊಡಲಾಗುತ್ತಿತ್ತು. ‘ಭಾರತದಲ್ಲಿ ರೈಲು ಮಾರ್ಗಗಳ ನಿರ್ಮಾಣದ ಹಿಂದಿದ್ದ ಮೂಲ ಉದ್ದೇಶ, ಭಾರತದಿಂದ ಮೂಲ ಸಾಮಗ್ರಿಗಳನ್ನು ಹೊರಗೆ ಸಾಗಿಸುವುದೇ ಆಗಿತ್ತು’ ಎಂಬುದಾಗಿ ಕೇಂಬ್ರಿಜ್‌ನ ಆರ್ಥಿಕ ಇತಿಹಾಸಕಾರ ಮೆಕ್‌ಫರ್ಸನ್ ವಾದಿಸಿದ್ದಾರೆ. ಭಾರತದಲ್ಲಿ ನಿರ್ಮಿಸಿದ ರೈಲು ಮಾರ್ಗಗಳು ಭಾರತೀಯರಿಗೆ ‘ಕೆಲಸಕ್ಕೆ ಬಾರದ್ದು’ ಎಂದು ಕಾರ್ಲ್ ಮಾರ್ಕ್ಸ್ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು.

ಅನೇಕ ಮಂದಿ, ಆರ್ಥಿಕ ನೀತಿಗಳ ಬಗ್ಗೆ ನಿಯಂತ್ರಣವಿದ್ದ ಕಾಲದ ಕೆಲವು ಕಳಪೆ ವಿಮಾನ ನಿಲ್ದಾಣಗಳಿಗೂ ಮತ್ತು ನವ ಉದಾರ ನೀತಿಗಳಡಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ನಿರ್ಮಿಸಿರುವ ಅನೇಕ ಥಳ ಥಳಿಸುವ ವಿಮಾನ ನಿಲ್ದಾಣಗಳಿಗೂ ಇರುವ ವ್ಯತ್ಯಾಸಗಳನ್ನು ಎತ್ತಿ ತೋರಿಸಿ, ಹೊಸ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಯ ಚಿನ್ಹೆಯಾಗಿ ಕೊಂಡಾಡುತ್ತಾರೆ. ಅವರು ಒಂದು ಮುಖ್ಯವಾದ ಅಂಶವನ್ನು ಗಮನಿಸದೆ ಬಿಡುತ್ತಾರೆ: ನವ–ಉದಾರ ಆಳ್ವಿಕೆಯಲ್ಲಿ, ಸಂಪತ್ತು ಮತ್ತು ವರಮಾನಗಳಲ್ಲಿ ಅಂತರ ಹೆಚ್ಚಾಗುತ್ತಿದೆ ಮತ್ತು ಅಸಮಾನತೆಯ ಮಟ್ಟವೂ ಸತತವಾಗಿ ಏರುತ್ತಿದೆ. ಪರಿಣಾಮವಾಗಿ, ವಿಮಾನ ಪ್ರಯಾಣ ಮಾಡುವವರ ಸಂಖ್ಯೆಯೂ ಬೆಳೆದು, ಕಿಕ್ಕಿರಿದು ತುಂಬಿದ ವಿಮಾನ ನಿಲ್ದಾಣಗಳ ಮೇಲಿನ ಒತ್ತಡ ಕಡಿಮೆ ಮಾಡಲು ಮತ್ತಷ್ಟು ಹೊಸ ವಿಮಾನ ನಿಲ್ದಾಣಗಳಲ್ಲಿ ಹೂಡಿಕೆ ಮಾಡುವಂತಾಗಿದೆ. ಅದೇರೀತಿಯಲ್ಲಿ, ಹೂಡಿಕೆ ಮಾಡಲು ವಿದೇಶಗಳಿಂದ ಬರುವವರಿಗೆ ಮನೆಯಲ್ಲಿದ್ದಷ್ಟೇ ಹಾಯಾಗಿದ್ದೇವೆ ಎನಿಸುವ ಸುಖ ಭಾವನೆ ಹೊಮ್ಮಿಸುವಂತಹ ‘ಮತ್ತು ವಿದೇಶಗಳ ಹೆಮ್ಮೆಯ ವಿಮಾನ ನಿಲ್ದಾಣಗಳಿಗೆ ಸಾಟಿಯಾಗುವಂತಹ ವಿಮಾನ ನಿಲ್ದಾಣಗಳು ನಿರ್ಮಾಣಗೊಳ್ಳುತ್ತಿವೆ.

ಮೇಲೆ ಹೇಳಿದ ಮಾತು ಒಂದು ಒಳ ಅರ್ಥವನ್ನು ಸೂಚಿಸುತ್ತದೆ. ಜಾಗತೀಕರಣದ ಆಳ್ವಿಕೆಯಲ್ಲಿ, ವರಮಾನಗಳ ಹಂಚಿಕೆಯು ದುಡಿಯುವ ಜನರಿಂದ ಜಾಗತೀಕರಣದ ಫಲಾನುಭವಿಗಳಾದ ಕೆಲವೇ ಮಂದಿ ಕಾರ್ಪೊರೇಟ್–ಹಣಕಾಸು ಕುಳಗಳು ಹಾಗೂ ಮಧ್ಯಮ ವರ್ಗದ ಒಂದು ಸ್ತರ/ಗುಂಪಿನತ್ತ ಸತತವಾಗಿ ಜರುಗುತ್ತಿರುವುದರಿಂದ, ಈ ಮಂದಿ ಬಯಸುವ ವಿಮಾನ ನಿಲ್ದಾಣಗಳಂತಹ ಮೂಲಸೌಕರ್ಯಗಳ ಮೇಲೆ ಬೇಡಿಕೆ ಹೆಚ್ಚುತ್ತಿದೆ.

ಹೊಸದಾಗಿ ಅನೇಕ ವಿಮಾನ ನಿಲ್ದಾಣಗಳು ನಿರ್ಮಾಣಗೊಂಡರೂ ಬಹಳ ಬೇಗನೇ ಅವು ಸಾಕಾಗುತ್ತಿಲ್ಲ ಎನ್ನುವಂತಾಗಿದೆ. ಏಕೆಂದರೆ, ವರಮಾನಗಳ ಅಸಮಾನತೆ ಹೆಚ್ಚುತ್ತಿರುವುದರಿಂದ ಉಳ್ಳವರ ಜೇಬಿಗೆ ಮತ್ತಷ್ಟು ಹಣ ಸೇರುತ್ತಿದೆ. ಹಾಗಾಗಿ, ಉಳ್ಳವರ ವಿಮಾನ ಪ್ರಯಾಣ ಹೆಚ್ಚುತ್ತದೆ. ಹೊಸ ರಸ್ತೆಗಳೂ ಸಾಲುತ್ತಿಲ್ಲ. ಏಕೆಂದರೆ, ಕಾರು ಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿದ್ದು ರಸ್ತೆಗಳು ಕಿಕ್ಕಿರಿದು ತುಂಬಿವೆ. ಉಳ್ಳವರ ಬಳಕೆಗೆ ಸಾಲುವಷ್ಟು ಮೂಲಸೌಕರ್ಯಗಳು ಲಭ್ಯವಿಲ್ಲ. ಹಾಗಾಗಿ, ಮೂಲಸೌಕರ್ಯಗಳ ಮೇಲೆ ಅವರ ಬೇಡಿಕೆ ಹೆಚ್ಚುತ್ತದೆ. ಅದು, ಉಳಿದ ಉದ್ದೇಶಗಳಿಗೆ ಸಲ್ಲಬೇಕಿದ್ದ ಸಂಪನ್ಮೂಲಗಳನ್ನು ಕಬಳಿಸುತ್ತದೆ. ಎಷ್ಟು ಸಂಪನ್ಮೂಲಗಳನ್ನು ಕಬಳಿಸಿದರೂ ಮೂಲ ಸೌಕರ್ಯಗಳು ಉಳ್ಳವರಿಗೆ ಕೊರತೆಯಾಗಿಯೇ ಉಳಿಯುತ್ತವೆ.

ಒಂದು ಆರ್ಥಿಕ ಬಿಕ್ಕಟ್ಟು ಉಂಟಾದಾಗ ಈ ಕೊರತೆ ಮಾಯವಾಗಿ, ಎಲ್ಲವೂ ತದ್ವಿರುದ್ಧವಾಗುತ್ತವೆ. ಬೇಡಿಕೆಯ ಕೊರತೆಯಿಂದಾಗಿ ಅನೇಕ ಮೂಲಸೌಕರ್ಯಗಳು ಬಳಕೆಯಾಗದೆ ಉಳಿಯುತ್ತವೆ. ಕಟ್ಟಿದ ಮನೆಗಳು, ಆಫೀಸ್ ಮತ್ತು ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ಗಳು ಖಾಲಿಯಾಗಿಯೇ ಉಳಿಯುತ್ತವೆ. ಯಾರೂ ವಾಸ ಮಾಡದ ಪ್ರೇತ ಪಟ್ಟಣಗಳು ಮತ್ತು ಖಾಲಿ ಹೊಡೆಯುವ ರಸ್ತೆಗಳು, ಆರ್ಥಿಕ ಉತ್ಕರ್ಷದ ‘ಜೀವಾವಧಿ ಕ್ಷಣಮಾತ್ರದ್ದೆಂದು ಸಾಬೀತುಪಡಿಸುತ್ತವೆ. ಆದರೆ, ಮೂಲಸೌಕರ್ಯಗಳಿಗೆ ಬೇಡಿಕೆ ಇಲ್ಲದ ಬಿಕ್ಕಟ್ಟಿನ ಸಮಯದಲ್ಲೂ ಕೆಲವೊಂದು ಮೂಲಸೌಕರ್ಯಗಳ ಪುನರ್ನಿರ್ಮಾಣ/ನವೀಕರಣ ನಡೆಯುತ್ತಿರುತ್ತದೆ. ಯಾಕೆ ಹೀಗಾಗುತ್ತಿದೆ ಎಂದರೆ, ಹೊರ ದೇಶಗಳಲ್ಲಿ ನವನವೀನ ಉತ್ಪನ್ನಗಳ ಬಳಕೆಯಿಂದ ಅಲ್ಲಿನ ಶ್ರೀಮಂತರ ಜೀವನಶೈಲಿಯಲ್ಲಿ ಆದ ಬದಲಾವಣೆಗಳನ್ನು ಇಲ್ಲಿರುವ ಶ್ರೀಮಂತರು ಅನುಕರಿಸಲು ಬಯಸುತ್ತಾರೆ. ಅದಕ್ಕೆ ತಕ್ಕಂತೆ ಅವರ ಮನೆ ಮತ್ತು ಬಳಸುವ ಪರಿಕರಗಳು ನವೀಕರಣಗೊಳ್ಳುತ್ತವೆ. ವಿಮಾನ ನಿಲ್ದಾಣಗಳಿಗೆ ಆಧುನಿಕತೆಯ ಸ್ಪರ್ಷಕೊಡುವ ಕೆಲಸ ನಡೆಯುತ್ತದೆ. ಹಳೆಯ ವಿಮಾನ ನಿಲ್ದಾಣಗಳು ಸಂಪೂರ್ಣವಾಗಿ ಬಳಕೆಯಾಗದಿದ್ದರೂ ಹೊಸ ವಿಮಾನ ನಿಲ್ದಾಣಗಳು ನಿರ್ಮಾಣಗೊಳ್ಳುತ್ತವೆ. ಇಂತಹ ಹೆಚ್ಚುವರಿ ಹೂಡಿಕೆಗಳು ಬಿಕ್ಕಟ್ಟಿನಿಂದ ಪಾರಾಗಲು ನೆರವಾಗದಿದ್ದರೂ ಅವು ಸ್ಥಗಿತವಾಗುವುದಿಲ್ಲ.



ಕೆ.ಎಂ.ನಾಗರಾಜ್

ಜನರಿಗೆ ಆರೋಗ್ಯ ಸೇವೆ, ಮಕ್ಕಳಿಗೆ ಶಾಲಾ ಶಿಕ್ಷಣ, ವೃದ್ಧರಿಗೆ ಪಿಂಚಣಿ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮುಂತಾದ ಕಾರ್ಯಗಳಿಗೆ ಅಗತ್ಯವಿರುವಷ್ಟು ಖರ್ಚು ಮಾಡಲು ಹಣದ ಕೊರತೆಯಾಗಿದೆ, ಏಕೆ–ಂದರೆ, ಮೂಲಸೌಕರ್ಯಗಳನ್ನು ನಿರ್ಮಿಸಲು ಭಾರೀ ಪ್ರಮಾಣದಲ್ಲಿ ಹಣ ಹೂಡಿಕೆಯಾಗಿದೆ ಎಂದು ಸರ್ಕಾರ ಹೇಳುತ್ತದೆ. ಪ್ರತಿಷ್ಠೆಯ ಸಂಕೇತವಾಗಿ ಅದ್ದೂರಿ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಬೇಕಾಗುವ ಹಣ ಹೊಂದಿಸಿಕೊಳ್ಳಲು ಸಾಧ್ಯವಾಗುವ ದೇಶದಲ್ಲಿ, ಬಡ ಮಕ್ಕಳಿಗೆ ಶಾಲಾ ಶಿಕ್ಷಣ ಒದಗಿಸಲು ಅಥವಾ ನಿರ್ಗತಿಕರಿಗೆ ವೃದ್ಧಾಪ್ಯ ವೇತನಕೊಡಲು ಸಾಕಷ್ಟು ಹಣವಿಲ್ಲ ಎಂದು ಸರ್ಕಾರ ಹೇಳಿಕೊಳ್ಳುವ ಪರಿಸ್ಥಿತಿ, ದೇಶವು ಅನುಸರಿಸುತ್ತಿರುವ ನವ–ಉದಾರ ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿ ಪಥದ ಲಕ್ಷಣವಾಗಿದೆ. ಹಾಗೆಂದು, ಈ ಆರ್ಥಿಕ ಅಭಿವೃದ್ಧಿ ಪಥ ಸರಿಇಲ್ಲವೆಂದು ಟೀಕಿಸಿ, ಅದು ಬದಲಾಗುವ ದಿನದವರೆಗೂ ಕಾಯುತ್ತಾ ಕೂರಬೇಕೆಂದಲ್ಲ. ಅಥವಾ, ಒಂದು ಸಮಾನ ಅವಕಾಶಗಳಿರುವ ಸಮಾಜ ನಿರ್ಮಾಣದ ದಿಕ್ಕಿನಲ್ಲಿ ವರಮಾನಗಳು ಹಂಚಿಕೆಯಾಗಬೇಕು ಎಂದು ಸುಮ್ಮನೇ ಒಂದು ಹಕ್ಕೊತ್ತಾಯ ಮಂಡಿಸುವ ವಿಷಯವಷ್ಟೇ ಅಲ್ಲ; ಏಕೆಂದರೆ, ಸಂಪನ್ಮೂಲಗಳ ಹೆಚ್ಚಿನ ಭಾಗವನ್ನು ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಬಳಸಬೇಕೊ ಅಥವಾ ಗುಣಮಟ್ಟದ ಸರ್ಕಾರಿ ಶಾಲೆಗಳನ್ನು ನಿರ್ಮಿಸಲು ಬಳಸಬೇಕೊ ಎಂಬುದು ಅಂತಿಮವಾಗಿ ವರಮಾನಗಳ ಹಂಚಿಕೆಯ ಮೇಲೆ ನಿಂತಿರುತ್ತದೆ. ಮತ್ತು ಯಾವ ಬೇಡಿಕೆ ಹೇಗೆ ರೂಪುಗೊಳ್ಳುತ್ತದೆ ಎಂಬುದು ವರಮಾನಗಳ ಹಂಚಿಕೆಯ ಮಾದರಿಯ ಮೇಲೆ ನಿಂತಿದೆ. ಹಾಗಾಗಿ, ಸಂಪನ್ಮೂಲಗಳ ಹಂಚಿಕೆಯ ಪ್ರಶ್ನೆ ಮುಖ್ಯವಾಗುತ್ತದೆ. ಮತ್ತು, ಮೂಲಸೌಕರ್ಯಗಳ ಮೇಲೆ ಹೂಡಿಕೆಯಾಗಿರುವ ಹಣ ‘ಕೆಲಸಕ್ಕೆ ಬಾರದ್ದು’ ಎಂದು ಕಾರ್ಲ್ ಮಾರ್ಕ್ಸ್ ಹೇಳಿದ ರೀತಿಯಲ್ಲಿಯೇ ಈಗಲೂ ಅದೇ ಮಾತನ್ನೇ ಹೇಳಬಹುದು. ಅಂತಹ ಹೂಡಿಕೆಗಳನ್ನು ಹದ್ದುಬಸ್ತಿನಲ್ಲಿಡಬೇಕು ಮತ್ತು ಪಡಿತರ ವ್ಯವಸ್ಥೆಗೆ ಒಳಪಡಿಸಬೇಕು.

ಸೂಕ್ತ ಸಂದರ್ಭದಲ್ಲಿ ಸಂಪನ್ಮೂಲಗಳ ಹಂಚಿಕೆಯನ್ನು ಪಡಿತರಗೊಳಿಸಬೇಕು. ಉದಾಹರಣೆಗೆ, ವಾಹನಗಳ ದಟ್ಟಣೆಗೆ ಹೋಲಿಸಿದರೆ, ರಸ್ತೆಗಳು ಕಿರಿದಾದ ಸಂದರ್ಭದಲ್ಲಿ, ರಸ್ತೆಯ ಮೇಲೆ ಓಡಾಡುವ ಕಾರುಗಳ ಸಂಖ್ಯೆಯನ್ನು ಮಿತಿಗೊಳಿಸಬೇಕಾಗುತ್ತದೆ. ಅದೇರೀತಿಯಲ್ಲಿ, ಇಂತಿಷ್ಟು ಕನಿಷ್ಠ ಮಂದಿ ಪ್ರತಿಕಾರಿನಲ್ಲೂ ಪ್ರಯಾಣಿಸಬೇಕೆಂದು ನಿರ್ಬಂಧ ಹೇರಬಹುದು.

ಅನೇಕ ದೇಶಗಳಲ್ಲಿ ಇಂತಹ ಪಡಿತರ ಜಾರಿಯಲ್ಲಿದೆ. ಅದನ್ನು ಜಾರಿಗೊಳಿಸಬೇಕೆಂಬ ಒತ್ತಾಯವು, ಒಂದು ರೀತಿಯಲ್ಲಿ, ವರಮಾನಗಳ ಹಂಚಿಕೆಯ ಪ್ರಸ್ತಾಪ ಮಾಡಿದಂತೆಯೂ ಆಗುತ್ತದೆ. ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಪಡಿತರ ವ್ಯವಸ್ಥೆಯ ಮೂಲಕ ಹಂಚುವ ಕಾರ್ಯವು, ಸಮಾನ ಸಮಾಜದತ್ತ ಸಾಗುವ ನಿಟ್ಟಿನಲ್ಲಿ ವರಮಾನಗಳ ಹಂಚಿಕೆಯ ಕ್ರಮವಾಗುವ ರೀತಿಯಲ್ಲಿಯೇ ಮೂಲಸೌಕರ್ಯ ನಿರ್ಮಿಸುವ ಕ್ರಮವನ್ನೂ ಪಡಿತರಗೊಳಿಸಬಹುದು. ಸಿರಿವಂತರು ಬಯಸುವ ಅದ್ದೂರಿ ಮೂಲಸೌಕರ್ಯಗಳಿಗಾಗಿ ಹೂಡಿಕೆ ಮಾಡುವ ಹಣವನ್ನು ಜನರ ದಿನ ನಿತ್ಯದ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಬಳಸುವ ಕ್ರಮವು ವರಮಾನಗಳ ಹಂಚಿಕೆಯ ಕ್ರಮವೂ ಆಗುತ್ತದೆ. ಮೂಲಸೌಕರ್ಯಗಳ ಮೇಲೆ ವಿವೇಚನೆ ಇಲ್ಲದೆ ಮಾಡುವ ಹೂಡಿಕೆಗಳನ್ನು ಸಾಮಾಜಿಕ ಆದ್ಯತೆಗಳೆಂದು ಪರಿಗಣಿಸಬಾರದು. ■

"ಕೇರಳ" ಮೊದಲ ಬಹಿರಂಗ ಶೌಚಮುಕ್ತ ದೊಡ್ಡ ರಾಜ್ಯ



ಕೇರಳ ದೇಶದ ಮೊದಲ ಬಹಿರಂಗ ಶೌಚಮುಕ್ತ ದೊಡ್ಡ ರಾಜ್ಯ ಎಂಬ ಹೆಸರು ಪಡೆದಿದೆ. ಮಾರ್ಚ 2017ರ ಒಳಗೆ 100 ಶೇಕಡಾ ಬಹಿರಂಗ ಶೌಚಮುಕ್ತಗೊಳ್ಳಬೇಕು ಎಂದು ಈ ಹಿಂದೆ ಗುರಿಯಿಟ್ಟುಕೊಳ್ಳಲಾಗಿತ್ತು.. ಆದರೆ ಅದನ್ನೀಗ ಅದಕ್ಕೆ ಮೊದಲೇ ಕೇರಳ ರಾಜ್ಯ ರಚನೆಯ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈಡೇರಿಸಲಾಗಿದೆ.

ಈ ಕುರಿತ ಪ್ರಚಾರಾಂದೋಲನವನ್ನು ಕೈಗೆತ್ತಿ-ಕೊಂಡ ರಾಜ್ಯದ ಎಲ್‌ಡಿಎಫ್ ಸರಕಾರ ಪ್ರತಿಯೊಂದು ಕುಟುಂಬಕ್ಕೆ ಘನತೆಯ ಬದುಕಿನ ಹಕ್ಕು ಇದೆ, ಅದು ಲಭ್ಯವಾಗುವಂತೆ ಮಾಡುವ ಒಂದು ದಾರಿಯೆಂದರೆ ಎಲ್ಲ ಮನೆಗಳಿಗೆ ಶೌಚಾಲಯವನ್ನು ಲಭ್ಯಗೊಳಿಸುವುದು ಎಂದು ಸಾರಿತು. 941 ಪಂಚಾಯತುಗಳಲ್ಲಿ 2ಲಕ್ಷದಷ್ಟು ಶೌಚಾಲಯಗಳು ಬೇಕು, ಅವುಗಳಲ್ಲಿ 39000 ಗುಡ್ಡ-ಬೆಟ್ಟ ಮುಂತಾದ ದುರ್ಗಮ ಪ್ರದೇಶಗಳಲ್ಲಿ ಬೇಕು ಎಂದು ಅಂದಾಜು ಮಾಡಲಾಯಿತು. ಪ್ರತಿಯೊಂದು ಶೌಚಾಲಯಕ್ಕೆ 25 ಸಾವಿರ ರೂ. ಖರ್ಚು ತಗಲಿದ್ದು, ಅದಕ್ಕೆ ಬೇಕಾದ ಹಣವನ್ನು ಸರಕಾರೀ ಗ್ರಾಂಟುಗಳು ಮತ್ತು ಸಿಎಸ್‌ಆರ್ ನಿಧಿಗಳ ಮೂಲಕ ಒದಗಿಸಲಾಯಿತು. ಶುಚಿತ್ವ ಮಿಶನ್, ಜಿಲ್ಲಾ ಆಡಳಿತ ಮತ್ತು ಸ್ಥಳೀಯ ಸ್ವಮಾಡಳಿತದ ಸಂಸ್ಥೆಗಳು ಈ ಯೋಜನೆಯ ನಿರ್ವಹಣೆ ಮಾಡಿದವು.

2011ರ ಜನಗಣತಿ ಪ್ರಕಾರ ದೇಶದಲ್ಲಿ 53.1% ಮನೆಗಳಲ್ಲಿ ಶೌಚಾಲಯಗಳಿಲ್ಲ, ಆದರೆ ಕೇರಳದಲ್ಲಿ ಇದರ ಪ್ರಮಾಣ ಆಗ 4.8%. ಈಗದು 0%ಕ್ಕೆ ಇಳಿದಿದೆ.

ಎಲ್‌ಡಿಫ್ ಸರಕಾರ ತಾನಿತ್ತ ಚುನಾವಣಾ ಭರವಸೆಗಳನ್ನು ಒಂದಾದ ಮೇಲೊಂದರಂತೆ ಈಡೇರಿಸುತ್ತಿದೆ. ಇದಕ್ಕೆ ಕಾರಣ ಅದು ಜನತೆಗೆ ಹೊಂದಿರುವ ಬದ್ಧತೆ ಎಂದು ಎಲ್‌ಡಿಎಫ್ ವಕ್ತಾರರು ಹೇಳಿದ್ದಾರೆ. ಸರಕಾರ ದ್ವಿವಿಧ ಕಾರ್ಯತಂತ್ರ ಅನುಸರಿಸುತ್ತಿದೆ-ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ದೀರ್ಘಕಾಲೀನ ಪ್ರಾಜೆಕಟ್ಟುಗಳನ್ನು ರೂಪಿಸುತ್ತಿದ್ದರೆ, ಜನಗಳ ಸಂಕಟಗಳನ್ನು ಎದುರಿಸಲು ತಕ್ಷಣ ದಪರಿಹಾರ ಕ್ರಮಗಳು. ರಾಜ್ಯದಲ್ಲಿ ಅಭಿವೃದ್ಧಿಯ ಜನತಾ ಪರ್ಯಾಯವನ್ನು ಈಡೇರಿಸುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ, ಈ ಕಾರ್ಯಕ್ರಮಗಳು ಕೇರಳ ಸಮಾಜದ ಕಡಿಮೆ ಪ್ರಯೋಜನ ಹೊಂದಿರುವ ವಿಭಾಗಗಳನ್ನು ಬಲಪಡಿಸಲು ಹೊಸ ದಾರಿಗಳನ್ನು ತೆರೆದು ದೀರ್ಘಕಾಲೀನ ಪ್ರಾಜೆಕಟುಗಳ ಪ್ರಯೋಜನಗಳನ್ನು ಪಡೆಯಲು ಸಅಧ್ಯವಾಗುವಂತೆ ಮಾಡುತ್ತವೆ ಎಂದು ಅವರು ಹೇಳಿದರು.

'ವಜ್ರ ಕೇರಳಂ' ಶುಭಾರಂಭ

ಕೇರಳ ರಾಜ್ಯ ರಚನೆ ಆಗಿ 60 ವರ್ಷ ಪೂರ್ಣಗೊಂಡಿರುವ ಸಂಧರ್ಭದಲ್ಲಿ ವಜ್ರ ಕೇರಳಂ ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅದರಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ವಿರೋಧ ಪಕ್ಷದ ನಾಯಕ ರಮೇಶ ಚೆನ್ನಿತಲ ಮುಂತಾದವರು ಉಪಸ್ಥಿತರಿದ್ದರು. ವಿವಿಧ ಜನವಿಭಾಗಗಳ 60 ಪ್ರಮುಖರು 60 ದೀಪಗಳನ್ನು ಹಚ್ಚುವ ಮೂಲಕ ಮುಂದಿನ ಒಂದು ವರ್ಷ ನಡೆಯುವ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಉದ್ಘಾಟನಾ ಭಾಷಣ ಮಾಡಿದ ಮುಖ್ಯಮಂತ್ರಿ ಕಳೆದ 60 ದಶಕಗಳಲ್ಲಿ ವಿವಿಧ ವಲಯಗಳಲ್ಲಿ ಆಗಿರುವ ಅಭಿವೃದ್ಧಿಯನ್ನು ಕಾಯ್ದುಕೊಳ್ಳಲು ಹಲವಾರು ಯೋಜನೆಗಳನ್ನು ಸರಕಾರ ರೂಪಿಸಲಿದೆ ಮತ್ತು ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ ಎಂದರು. ಇ.ಎಂ.ಎಸ್ ನಂಬೂದಿರಿ ಪಾಡ್ ಅವರ ನೇತೃತ್ವದ ಸರಕಾರ ಹಾಕಿಕೊಟ್ಟ ಬುನಾದಿಯ ಮೇಲೆ ನಂತರದ ದಿನಗಳಲ್ಲಿ ನಿರ್ಣಾಯಕ ವಲಯಗಳಲ್ಲಿ ಮುಂದಿನ ಕೆಲಸಗಳು ಯಶಸ್ವಿಯಾಗಲಿಲ. ಕೃಷಿ, ಉನ್ನತ ಶಿಕ್ಷಣ, ಅಧಿಕಾರದ ವಿಕೇಂದ್ರೀಕರಣ, ಮತ್ತು ವಸತಿಯಂತಹ ನಿರ್ಣಾಯಕ ಕ್ಷೇತ್ರದಲ್ಲಿ ಸರಕಾರದ ಮಧ್ಯಪ್ರವೇಶದ ಅಗತ್ಯವಿದೆ, ಆ ಕೆಲಸವನ್ನು ಸರಕಾರ ಸದ್ಯವೇ ಮಾಡಲಿದೆ, ಅದಕ್ಕೆ ಎಲ್ಲ ವರ್ಗದ ಜನರ ಪಾಲ್ಗೊಳ್ಳುವಿಕೆಯ ಅಗತ್ಯವಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ಪೀಕರ್ ಮಾತನಾಡಿ ಕಳೆದ ಆರು ದಶಕಗಳಲ್ಲಿ ರಾಜ್ಯವನ್ನು ಅಭಿವೃದ್ಧಿಗೊಳಿಸುವಲ್ಲಿ, ಸಂವಿಧಾನ ಮತ್ತು ಜನರ ಹಕ್ಕುಗಳನ್ನು ರಕ್ಷಿಸಲು 1500 ಕಾನೂನುಗಳನ್ನು ಪಾಸುಮಾಡಿರುವ ಶಾಸಕಾಂಗದ ಪಾತ್ರ ದೊಡ್ಡದು, ಈಗ ನಾಗರಿಕ ಸಮುದಾಯವನ್ನು ಶಾಸಕಾಂಗದ ಪ್ರಕ್ರಿಯೆಯಲ್ಲಿ ತೊಡಗಿಸುವ ಸಮಯ ಬಂದಿದೆ ಎಂದರು. ■



ತೆಲಂಗಾಣ: ವೇಮುಲಘಾಟ್ ರೈತರ ಹೋರಾಟಕ್ಕೆ 150 ದಿನಗಳು

ಮಲ್ಲಣ್ಣಸಾಗರ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಗಾಗಿ ತೆಲಂಗಾಣದ ವೇಮುಲಘಾಟ್‌ನ ರೈತರು ಹೋರಾಟ ನಡೆಸುತ್ತಿದ್ದಾರೆ.

ಸಿದ್ದಿಪೇಟ್ ಜಿಲ್ಲೆಯ ತೋಗುಟ ಮತ್ತು ಕೊಂಡಪಾಕ ಮಂಡಲ್‌ಗಳಿಗೆ ವಿಸ್ತರಿಸಬೇಕೆಂದಿರುವ ಮಲ್ಲಣ್ಣಸಾಗರ್ ಜಲಾಶಯದ ವಿರುದ್ಧ ವೇಮುಲಘಾಟ್‌ನಲ್ಲಿ ಕಳೆದ 5 ತಿಂಗಳಿನಿಂದ ಸರದಿ ಉಪವಾಸದ ಹೋರಾಟ ನಡೆಯುತ್ತಿದೆ. ಆರಂಭದಲ್ಲಿ ವಿರೋಧ ವ್ಯಕ್ತಪಡಿಸಿದ್ದ ಐದಾರು ಹಳ್ಳಿಗಳು ಅಧಿಕಾರಿಗಳು ಮತ್ತು ರಾಜಕಾರಣಿಗಳ ಕುತಂತ್ರದಿಂದಾಗಿ ಭೂಸ್ವಾಧೀನಕ್ಕೆ ತಮ್ಮ ಸಮ್ಮತಿ ನೀಡಿ ಫಾರ್ಮ 1 ಮತ್ತು 2 ಕ್ಕೆ ಸಹಿ ಹಾಕಿದ್ದರು

ಜಲಾಶಯ ನಿರ್ಮಾಣದ ಅಗತ್ಯವಿಲ್ಲ ಎಂಬ ತಜ್ಞರ ಸಲಹೆಯ ನಂತರವೂ ಸರಕಾರ ಹಲವಾರು ಹಳ್ಳಿಗಳಲ್ಲಿ ಬಲವಂತದಿಂದ ಕೆಲಸ ಮಾಡುತ್ತಿದೆ. ಯೋಜನೆ ಘೋಷಣೆಯಾದ 5 ವರ್ಷಗಳ ಬಳಿಕವೂ ಆರಂಭಗೊಳ್ಳದಿದ್ದರೆ, ಭೂಮಿಯನ್ನು ಭೂಸ್ವಾಧೀನ ಕಾಯ್ದೆಯ ಪ್ರಕಾರ ಅದನ್ನು ಅದರ ಮಾಲೀಕರಿಗೆ ಮರಳಿ ನೀಡಬೇಕು ಎಂದು ಸರದಿ ಉಪವಾಸದ 150ನೇ ದಿನದಂದು ಭಾಗವಹಿಸಲು ಇಲ್ಲಿಗೆ ಬಂದ ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಸರಂಪಲ್ಲಿ ಮಲ್ಲಾರೆಡ್ಡಿ ಹೇಳಿದರು.

ಸರಕಾರ ತಮಗೆ ಸರಿಯಾದ ಪರಿಹಾರ ನೀಡುವ ವರೆಗೆ ಹೋರಾಟವನ್ನು ಮುಂದುವರೆಸಲು ಅಲ್ಲಿಯ ರೈತರು ನಿರ್ಧರಿಸಿದ್ದಾರೆ. ■

ಹರಿಯಾಣದ ಬಿಜೆಪಿ ಸರಕಾರದ ಕಾರ್ಮಿಕ-ದ್ವೇಷಿ ಕ್ರಮ ಸಿಐಟಿಯು ಕಚೇರಿಗೆ ಪೋಲೀಸ್-ಸಿಆರ್‌ಪಿಎಫ್ ಮುತ್ತಿಗೆ

ಹರಿಯಾಣ ರಾಜ್ಯ ರಚನೆಯ ಸುವರ್ಣ ಜಯಂತಿ ಆರಂಭವಾಗುವ ಒಂದು ದಿನದ ಮೊದಲು, ಅಕ್ಟೋಬರ್ 31ರಂದು ಅಲ್ಲಿಯ ಪ್ರಸಕ್ತ ಬಿಜೆಪಿ ಸರಕಾರ ತನ್ನ ಫ್ಯಾಸಿಸ್ಟ್ ಮಾದರಿ ಮುಖವನ್ನು ತೋರಿದೆ. ಸಿಐಟಿಯು ರಾಜ್ಯ ಸಮಿತಿ ಮತ್ತು ಸರ್ವ ಕರ್ಮಚಾರೀ ಸಂಘ (ಎಸ್‌ಕೆಎಸ್)ದ ಕಛೇರಿಗೆ ಪೋಲೀಸ್ ಮತ್ತು ಸಿಆರ್‌ಪಿಎಫ್ ಮುತ್ತಿಗೆ ಹಾಕಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್‌ಆರ್‌ಎಚ್‌ಎಂ) ನ 12000 ಸಿಬ್ಬಂದಿ ಅಕ್ಟೋಬರ್ 9-10 ರಂದು ತಮ್ಮನ್ನು ಖಾಯಂ ಗೊಳಿಸಬೇಕು ಮತ್ತು ಖಾಯಂಗೊಳಿಸುವ ಸಮಯದವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಬೇಡಿಕೆಯಿಟ್ಟು ಪ್ರತಿಭಟನೆ ನಡೆಸಿದ್ದರು, ಈ ವಿಷಯವಾಗಿ ಸರಕಾರ ಒಂದು ಸಮಿತಿಯನ್ನೂ ಸಹ ರಚಿಸಿ ಸದ್ಯದಲ್ಲೇ ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದೆಂಬ ಭರವಸೆ ನೀಡಿತ್ತು, ಆದರೆ ಸರಕಾರ ಯಾವುದೇ ಕ್ರಮ ಕೈಗೊಳ್ಳದಿದ್ದಾಗ ನೌಕರರು ಮೊದಲೇ ನೀಡಿದ ಸೂಚನೆಯಂತೆ ಅಕ್ಟೋಬರ್ 25ರಿಂದ ಅನಿರ್ದಿಷ್ಟ ಅವಧಿ ಮುಷ್ಕರ ಆರಂಭಿಸಿದರು ಆಗಲೂ ಸಹ ಸರಕಾರ ಅವರ ಅಹವಾಲುಗಳನ್ನು ಆಲಿಸದೆ ದಮನಾತ್ಮಕ ನೀತಿಯನ್ನು ಅನುಸರಿಸಿತು

ರಾಜ್ಯ ಸರಕಾರ ಈಗಾಗಲೇ 800 ಜನ ನೌಕರರನ್ನು ಕೆಲಸದಿಂದ ವಜಾಗೊಳಿಸಿ ತನ್ನ ದಮನಕಾರೀ ಧೋರಣೆಯನ್ನು ಪ್ರದರ್ಶಿಸಿದೆ, ಆದರೆ ನೌಕರರ ಆತ್ಮ ವಿಶ್ವಾಸ ಗಟ್ಟಿಯಾಗಿದೆ. ಈ ಹೋರಾಟದಲ್ಲಿ ವೈದ್ಯರು, ಅರೆವೈದ್ಯಕೀಯ, ಸ್ಟಾಫ್ ನರ್ಸ್, ಎಎನ್‌ಎಮ್, ಎಮ್‌ಪಿಹೆಚ್, ಅಂಬ್ಯುಲೆನ್ಸ್ ಸಿಬ್ಬಂದಿಯನ್ನೂ ಒಳಗೊಂಡು ಎಲ್ಲ ಸಿಬ್ಬಂದಿಯೂ ಭಾಗವಹಿಸುತ್ತಿದ್ದಾರೆ.

ಅಕ್ಟೋಬರ್ 31 ರಂದು ಸಂಜೆ 4 ಗಂಟೆಗೆ ಈ ಹೋರಾಟದ ಕುರಿತಾಗಿ ರೋಹ್ಟಕ್‌ನಲ್ಲಿರುವ ಸಿಐಟಿಯು ಮತ್ತು ಸರ್ವ ಕರ್ಮಚಾರೀ ಸಂಘ (ಎಸ್‌ಕೆಎಸ್) ಕಛೇರಿಯಲ್ಲಿ ಚಳುವಳಿ ನಡೆಸುತ್ತಿರುವ ಎನ್‌ಆರ್‌ಹೆಚ್‌ಎಂ ಕರ್ಮಚಾರೀ ಸಂಘದ ರಾಜ್ಯಸಮಿತಿಯ ಸಭೆ ಕರೆಯಲಾಗಿತ್ತು. ಇದರಲ್ಲಿ ರಾಜ್ಯ ಸಿಐಟಿಯು ಮುಖಂಡರು ಭಾಗವಹಿಸಿದ್ದರು.

ಇದರ ಸುಳಿವು ಇದ್ದ ಪೋಲೀಸರು ಸಿಆರ್‌ಪಿಫ್ ಜವಾನರನ್ನು ಕರೆಸಿಕೊಂಡು ಕಛೇರಿಯನ್ನು ಸುತ್ತುವರೆದರು., ಪೋಲಿಸರು ಒಳ ನುಗ್ಗಿಲ್ಲವಾದರೂ, 40ಕ್ಕೂ ಹೆಚ್ಚು ಮುಖಂಡರನ್ನು ಕಛೇರಿಯ ಒಳಗೇ ಇರುವಂತೆ ಮಾಡಲಾಗಿದೆ. ಪ್ರದಾನ ಮಂತ್ರಿ ನರೇಂದ್ರ ಮೋದಿಯವರು ಭಾಗವಹಿಸಲಿದ್ದ ಸ್ವರ್ಣಜಯಂತಿ ಕಾರ್ಯಕ್ರಮಕ್ಕೆ ಹೋರಾಟದಿಂದ ಯಾವುದೇ ಧಕ್ಕೆಯಾಗಬಾರದೆಂಬುದು ಇಷ್ಟಕ್ಕೆಲ್ಲ ಕಾರಣ.

ಈ ಘಟನೆಯನ್ನು ಖಂಡಿಸಿ ಸಿಐಟಿಯು ರಾಜ್ಯ ಕಛೇರಿಯಿಂದ 1000 ಮೀಟರ್ ದೂರದಲ್ಲಿ ಮೆರವಣಿಗೆಯಲ್ಲಿ ಬಂದ ಜನರನ್ನು ತಡೆಯಲಾಯ್ತು..

ಇದರ ವಿರುದ್ಧ ನವಂಬರ್ 1ರಂದು ರಾಜ್ಯದ ಎಲ್ಲ ಜಿಲ್ಲಾ ಮತ್ತು ಬ್ಲಾಕ್ ಕೇಂದ್ರಗಳಲ್ಲಿ ಸಿಐಟಿಯು ಮತ್ತು ಹೋರಾಟನಿರತ ಸಂಘದ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದ್ದಾರೆ. ■



ಝಾರ್ಖಂಡ್: ಬುಡಕಟ್ಟು ಜನಗಳ ಮೇಲೆ ಸುಳ್ಳು ಕೇಸುಗಳು

ಈ ಅಂಕಣದಲ್ಲಿ ಪ್ರಕಟಿಸಿರುವಂತೆ ಇಲ್ಲಿಯ ಬಿಜೆಪಿ ಸರಕಾರ ಛೋಟಾನಾಗ್ಪುರ ಗೇಣಿ ಕಾಯ್ದೆ ಮತ್ತು ಸಂತಾಲ್ ಪರಗಣ ಗೇಣಿ ಕಾಯ್ದೆಗೆ ಬುಡಕಟ್ಟು ಜನಗಳ ಹಿತಗಳಿಗೆ ಮಾರಕವಾದ ತಿದ್ದುಪಡಿ ತರುವುದನ್ನು ವಿರೋಧಿಸಿ ಅಕ್ಟೋಬರ್ 22 ರ ರಾಜ್ಯ ಮಟ್ಟದ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಲು ಹೊರಟ ಖುಂಟಿ ಜಿಲ್ಲೆಯ ಸಾಯ್ಕೊ ಎಂಬ ಹಳ್ಳಿಯ ಬುಡಕಟ್ಟು ಜನಗಳ ಮೇಲೆ ಅನಗತ್ಯ ಗೋಲೀಬಾರ್ ನಡೆಸಲಾಯಿತು. ಇದರಲ್ಲಿ ಒಬ್ಬರ ಸಾವು ಉಂಟಾಗಿದ್ದು, 6 ಜನ ಗಾಯಗೊಂಡಿದ್ದಾರೆ. ಏಳು ಗ್ರಾಮಸ್ಥರ ಪತ್ತೆಯಾಗಿಲ್ಲ.

ಇತರ ಕಡೆಗಳಲ್ಲೂ ಬುಡಕಟ್ಟು ಜನ ಪೋಲಿಸ್ ಭಯೋತ್ಪಾದನೆಯಿಂದ ಭೀತರಾಗಿ ತಮ್ಮ ಹಳ್ಳಿ ಬಿಟ್ಟೋಡುತ್ತಿದ್ದಾರೆ. ಈ ಗ ಇದನ್ನು ಪ್ರತಿಭಟಿಸುತ್ತಿರುವವರ ಮೇಲೆಯೇ ಎಫ್‌ಐಆರ್ ಹಾಕಲಾಗಿದೆ.

ಸಿಪಿಐ(ಎಂ) ಝಾರ್ಖಂಡ್ ರಾಜ್ಯ ಕಾರ್ಯದರ್ಶಿ ಮಂಡಳಿ ಇದನ್ನು ಬಲವಾಗಿ ಖಂಡಿಸಿದೆ. ತಕ್ಷಣವೇ ಈ ಸುಳ್ಳು ಕೇಸುಗಳನ್ನು ಹಿಂದಕ್ಕೆ ಪಡೆಯಬೇಕು, ಅಬ್ರಹಾಂ ಮುಂಡುರವರನ್ನು ಬಲಿ ತೆಗೆದುಕೊಂಡ ಮತ್ತು ಇತರ ಆರು ಮಂದಿಯನ್ನು ತೀವ್ರವಾಗಿ ಗಾಯಗೊಳಿಸಿದ ಈ ಗೋಲೀಬಾರ್ ನಡೆಸಿದವರ ಮೇಲೆ ಸೆಕ್ಷನ್ 301 ಮತ್ತು 307ರ ಅಡಿಯಲ್ಲಿ ಎಫ್‌ಐಆರ್ ಹಾಕಬೇಕು ಮತ್ತು ಈ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಅದು ತನ್ನ ಆಗ್ರಹವನ್ನು ಪುನರುಚ್ಚರಿಸಿದೆ ■



ಕ್ಯಾ. ಲಕ್ಷ್ಮಿ ಸೆಹಗಲ್ ಜನ್ಮ ದಿನ : 'ದೇಹದಾನ–ನೇತ್ರದಾನ' "ಚೈತನ್ಯದ ಚಿಲುಮೆ, ಹೋರಾಟದ ಸಂಕೇತ, ಸ್ಫೂರ್ತಿಯ ಸೆಲೆ"

ಕ್ಯಾ. ಲಕ್ಷ್ಮಿ ಸೆಹಗಲ್ ಎಂದೇ ಪ್ರಸಿದ್ಧಿಯಾಗಿರುವ ಲಕ್ಷ್ಮಿ ಸ್ವಾಮಿನಾಥನ್ ಅವರ 103ನೇ ವರ್ಷದ ಜನ್ಮ ದಿನದ ನೆನಪಿಗಾಗಿ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು 'ದೇಹದಾನ–ನೇತ್ರದಾನ' ಕಾರ್ಯಕ್ರಮವನ್ನು 24 ಅಕ್ಟೋಬರ್ 2016 ರಂದು ಎಸ್‌ಸಿಎಂ ಹೌಸ್‌ನಲ್ಲಿ ಹಮ್ಮಿಕೊಂಡಿದ್ದವು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್. ವಿಮಲಾ ಮಾತನಾಡಿ 99% ಅತ್ಯಾಚಾರಕ್ಕೆ ಬಲಿಯಾಗುವ ಹೆಣ್ಣು ಮಕ್ಕಳು ದಲಿತ ಸಮುದಾಯಕ್ಕೆ ಸೇರಿದವರು. ಶ್ರಮದಿಂದಲೇ ಬದುಕುವ ದಲಿತರ ಮೇಲೆ ಅತ್ಯಾಚಾರ, ದೌರ್ಜನ್ಯ ನಡೆಯುತ್ತದೆ. ಜಾತಿ ದೌರ್ಜನ್ಯದಿಂದ ನಲುಗುವ ಅಮಾಯಕರನ್ನು ಬಿಡುಗಡೆ ಮಾಡಬೇಕು. ಜಾತಿ ವಿನಾಶ ಆಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ದೃಢವಾಗಿ ನಂಬಿದ್ದ ಕ್ಯಾ. ಲಕ್ಷ್ಮಿ ಸೆಹಗಲ್ ತಮ್ಮ ಸಣ್ಣ ವಯಸ್ಸಿನಲ್ಲೇ ಜಾತಿ ವಿರುದ್ಧ ಬಂಡಾಯವೆಬ್ಬಿದ್ದರು. ಕ್ಯಾ. ಲಕ್ಷ್ಮಿ ಅವರಿಗೆ ಈಗ 103 ವರ್ಷ ಅವರ ಬದುಕು ನಮಗೆಲ್ಲಾ ಮಾದರಿ. 2,000 ಜನರ ದೇಹದಾನ ಮಾಡುವ ಬೃಹತ್ ಕಾರ್ಯಕ್ರಮವನ್ನು ನಗರದ ಟೌನ್‌ಹಾಲ್‌ನಲ್ಲಿ ಮಾಡಬೇಕೆಂದು ಬಯಸಿದ್ದೆವು, ಆದರೆ ಅದು ಸಾಧ್ಯವಾಗಲಿಲ್ಲ. ಇಂದು ನಮ್ಮ ಕಾರ್ಯಕರ್ತರಿಗೆ ಅವರ ಆದರ್ಶ, ಅವರ ಬದುಕಿನ ಬಗ್ಗೆ ತಿಳಿಸಬೇಕೆಂದು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ಪ್ರದೇಶಗಳಿಂದ ಬಂದಿರುವವರು ತಮ್ಮ ಪ್ರದೇಶಗಳಲ್ಲಿ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಮಹಿಳೆಯರ ಮಧ್ಯೆ ಜನವಾದಿಯನ್ನು ಕೊಂಡೊಯ್ಯಬೇಕು ಎಂದು ಕರೆ ನೀಡಿದರು.

ವಿಜ್ಞಾನ ಓದಿದವರು ಸಹ ರಕ್ತದಾನ ಮಾಡಲು ಭಯಪಡುತ್ತಾರೆ. ನಾವು ರಕ್ತದಾನ ಮಾಡುವುದರಿಂದ, ಮತ್ತೊಬ್ಬರಿಗೆ ಜೀವದಾನ ಮಾಡಿದಂತಾಗುತ್ತದೆ. ಇಂದು ಜನವಾದಿಯವರು "ದೇಹದಾನ–ನೇತ್ರದಾನ" ಕಾರ್ಯಕ್ರಮ ಹಮ್ಮಿಕೊಂಡಿರುವುದು ಅತ್ಯಂತ ಶ್ಲಾಘನೀಯ. ನಮ್ಮ ದೇಶದಲ್ಲಿ 25 ಲಕ್ಷ ಜನ ಕಣ್ಣಿಲ್ಲದೆ, ತಮ್ಮ ಸುತ್ತ ಮುತ್ತಲ ಪರಿಸರವನ್ನು ನೋಡಲಾಗುತ್ತಿಲ್ಲ.

ಹಾಗೇಯೇ ನಮ್ಮ ದೇಹದ ಅಂಗಾಂಗಗಳನ್ನು ದಾನ ಮಾಡುವ ಹಾಗೇಯೇ ನಮ್ಮ ದೇಹದ ಅಂಗಾಂಗಗಳನ್ನು ದಾನಮಾಡುವುದರಿಂದ ಅಂಗಾಂಗದ ಅವಶ್ಯಕತೆ ಇರುವವರಿಗೆ ಮರು ಬದುಕು ನೀಡಿದಂತಾಗುತ್ತದೆ. ಇಂದು 8 ಕೋಟಿ ಜನರಿಗೆ ಕಿಡ್ನಿಯ ಅವಶ್ಯಕತೆ ಇದೆ ಎಂದು ಹೇಳಿದ ಕಾರುಣ್ಯ ಟ್ರಸ್ಟಿನ್ ಗೋಪಿನಾಥ ನೇತ್ರದಾನದ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ 29 ಜನ ತಮ್ಮ ನೇತ್ರದಾನ ಮಾಡಲು ಅರ್ಜಿ ಸಲ್ಲಿಸುವುದರ ಮೂಲಕ ಅಂಧರ ಬಾಳಿಗೆ ಬೆಳಕಾಗಲು ಮುಂದಾದದ್ದು ಶ್ಲಾಘನೀಯ.

ಜೆಎಂಎಸ್ ನೂತನ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಸಂಘಟನೆಯ ಮುಖಂಡರುಗಳಾದ ಅಹಲ್ಯಾ ರಂಗ್ನೇಕರ್, ಪಾಪಾ ಉಮಾನಾಥ್‌ರವರು ಅವರ ಹೋರಾಟದ ಆದರ್ಶದ ಬದುಕಿನ ಬಗ್ಗೆ ಮಹಿಳೆಯರಿಗೆ ತಿಳಿಸಲು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಅವರ ನೆನಪಿನ ದಿನವನ್ನು ಆಚರಿಸಬೇಕೆಂದು ಕರೆ ನೀಡಿದರು. ತೆಲಂಗಾಣದಲ್ಲಿ ಬಂದೂಕು ಹಿಡಿದು ಹೋರಾಟ ಮಾಡಿದ ವೀರ ವನಿತೆ ಈಗಲೂ ಮಹಿಳೆಯರನ್ನು ಸಂಘಟಿಸುವಲ್ಲಿ ಮುಂಚೂಣಿ ಪಾತ್ರ ವಹಿಸುತ್ತಿದ್ದಾರೆ. ಸಾವಿತ್ರಿಬಾಯಿ ಪುಲೆ ಮೊಟ್ಟ ಮೊದಲಿಗೆ ಹೆಣ್ಣು ಮಕ್ಕಳಿಗಾಗಿ ಶಾಲೆ ತೆರೆದು ಶಿಕ್ಷಣ ನೀಡಿದರು. ನಮ್ಮಗೆ ಸಂಘಟನೆ ಏನು ಮಾಡುತ್ತದೆ ಎಂದು ಬಯಸುವ ಬದಲು, ಸಮಾಜಕ್ಕೆ ನಾವು ಏನೂ ಮಾಡಿದ್ದೀವಿ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಿದೆ. ಬಂದಿರುವ ಕಾರ್ಯಕರ್ತರಿಗೆ ಜನಾವಾದಿಯ ವಿಚಾರಗಳನ್ನು ಮಹಿಳೆಯರ ಮಧ್ಯೆ ಕೊಂಡ್ಯೋಯ್ಯಬೇಕೆಂದು ತಿಳಿಸಿದರು.

ವಿಶ್ವ ಸಮರ 1914 ರಂದು ಪ್ರಾರಂಭವಾಗಿದ್ದ ಕಾಲಘಟ್ಟದಲ್ಲಿ ಲಕ್ಷ್ಮಿ ಸ್ವಾಮಿನಾಥನ್ 24 ಅಕ್ಟೋಬರ್ 1914 ರಂದು ಜನಿಸಿದರು. ನೇತಾಜಿ ಸುಭಾಸ್ ಚಂದ್ರಬೋಸ್ ಅವರ ಇಂಡಿಯನ್ ನ್ಯಾಷನಲ್ ಆರ್ಮಿಯ ಮಹಿಳಾ ತುಕಡಿಯ ರಾಣಿ ಝಾನ್ಸಿ ಲಕ್ಷ್ಮಿಬಾಯಿ ರೆಜಿಮೆಂಟಿನ ಕ್ಯಾಪ್ಟನ್ ಆಗಿದ್ದ, ಬ್ರಿಟಿಷರ ವಿರುದ್ಧ ಬಂದೂಕ ಹಿಡಿದು ಹೋರಾಟ ಮಾಡಿದ ಧೀರ ವನಿತೆ, ಅವರ ಹುಟ್ಟು ಹಬ್ಬ ಆಚರಣೆ ಎಂದರೆ ಅವರ ಆದರ್ಶ, ನಂಬಿದ್ದ ಸಿದ್ಧಾಂತ ನಮಗೆ ಎಂದೆಂದಿಗೂ ಮಾರ್ಗದರ್ಶನ. ಆನಪರ ಮಹಿಳಾಪರ ಜನರ ನಡುವೆ ಆ ಸಿದ್ಧಾಂತವನ್ನೂ ಆದರ್ಶವನ್ನು, ಅವರ ಭತ್ತದ ಜನಪರ ಚಳುವಳಿಯನ್ನು ಕೊಂಡೊಯ್ಯುವುದಾಗಿದೆ ಎಂದು ತಮ್ಮ ಪ್ರಾಸ್ತಾವಿಕ ಮಾತಿನಲ್ಲಿ ತಿಳಿಸಿದರು.

ಕಾರ್ಯಕ್ರಮದ ಸ್ವಾಗತವನ್ನು ಬೆಂ.ದ.ಜಿಲ್ಲಾ ಸಮಿತಿಯ ಸಂಚಾಲಕಿ ಶ್ರೀಮತಿ.ಕೆ, ವಂದನಾರ್ಪಣೆಯನ್ನು ಬೆಂ.ಉ.ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ರೇಣುಕಾ ನಡೆಸಿಕೊಟ್ಟರು. ಬೆಂ.ಜಿಲ್ಲಾ ಮನೆಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಸೆಲ್ವಿ ಎಸ್. ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕ್ಯಾ. ಲಕ್ಷ್ಮಿ ಸೆಹಗಲ್ ಅವರ ಫೋಟೋ ಪ್ರದರ್ಶನವನ್ನು ಕೂಡ ಮಾಡಲಾಗಿತ್ತು.

ವರದಿ : ಕೆ.ಎಸ್. ಶಾರದಾ

ದಶಕದ ದಲಿತ ಚಳುವಳಿಯ ಕಾವು ಮತ್ತೆ ..... ಪುಟ 16 ರಿಂದ

ಹೆಚ್ಚಾಗಬೇಕೆಂದು ಒತ್ತಾಯಿಸಿದರು.

'ಜನಶಕ್ತಿ ಪ್ರಕಾಶನ'ದ 'ನೀಲಿಬಾನಿನಲ್ಲಿ ಕೆಂಪುಸೂರ್ಯ' ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದ ಎನ್‌ಎಸ್‌ಡಿ ನಿರ್ದೇಶಕರಾದ ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ 'ಸಮಾಜದಲ್ಲಿನ ಜಾತಿಯ ಬೇರನ್ನು ಕಿತ್ತೊಗೆಯಲು ಸಂತರು ಹಲವು ಚಳುವಳಿ ಹುಟ್ಟು ಹಾಕಿದ್ದಾರೆ. ಆದರೆ, ಇಂತಹ ಪ್ರಗತಿಪರ ಮಹಾತ್ಮರನ್ನು ಕೂಡ ಇಂದು ಜಾತಿ ವ್ಯವಸ್ಥೆಯೊಳಗೆ ಕೂಡಿಹಾಕಿದ್ದಾರೆ. ಅಂಬೇಡ್ಕರ್ ಸಮಾನತೆಯ ಹೋರಾಟದ ರಥವನ್ನು ಮುನ್ನಡೆಸಿಕೊಂಡು ಬಂದಿದ್ದರು. ಜಾತಿ ವ್ಯವಸ್ಥೆಯ ಸಂಕೋಲೆಯನ್ನು ಕಿತ್ತೆಸೆಯ ಬೇಕಾಗಿದೆ. ಆ ನಿಟ್ಟಿನಲ್ಲಿ ವರ್ಗ ಶೋಷಣೆ ರಹಿತ ಹೋರಾಟದ ಮಾರ್ಕ್ಸ್‌ವಾದ, ಹಾಗೂ ಜಾತಿ ದಮನದ ವಿರುದ್ಧದ ಅಂಬೇಡ್ಕರ್‌ವಾದ ಬೆರೆತು ಹೋರಾಟಕ್ಕೆ ಧುಮುಕಬೇಕಾದ ಅವಶ್ಯಕತೆ ಇದೆ.

ಅಂಬೇಡ್ಕರ್‌ರವರ ವಿಚಾರಧಾರೆಯ ಮೇಲೆ ಮಾರ್ಕ್ಸ್‌ವಾದಿಗಳ ಕಣ್ಣೋಟದ ಕುರಿತಂತೆ, ಉತ್ತಮ ಲೇಖನಗಳಿರುವ ಈ ಪುಸ್ತಕದ ಹೆಸರೇ ಸೂಚಿಸುವಂತೆ, ಆಕಾಶದ ನೀಲಿ ಬಾನಿನಲ್ಲಿ ಸಂಜೆ ಮುಳುಗಿ ಹೋಗುವ ಕೆಂಪು ಸೂರ್ಯನಾಗದೆ, ಉದಯಿಸುವ ಸೂರ್ಯನಾಗಿ ದಿನವೆಲ್ಲಾ ಪ್ರಜ್ವಲಿಸುವಂತಾಗಲಿ, ಮಾರ್ಕ್ಸ್‌ವಾದಿಗಳು, ಅಂಬೇಡ್ಕರ್‌ರವರ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಆರಂಭಿಸಿರುವ ಈ ಜಾತಿ ವಿನಾಶದ ಚಳುವಳಿ ಯಶಸ್ವಿಯಾಗಲೆಂದರು.

ನರೇಂದ್ರ ಮೋದಿ ನಾಯಕತ್ವದ ಭಾರತ ದೇಶದ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಾ, ಇದೊಂದು ಬೂಟಾಟಿಕೆಯ ಆಡಳಿತದ ಪರ್ವವಾಗಿದೆ. ವಿವಿಧ ದೇಶಗಳಿಗೆ ಭೇಟಿ ನೀಡುತ್ತಿರುವ ಮೋದಿಯವರು, ನಮ್ಮ ಕೈಯಲ್ಲಿ ಏನೂ ಮಾಡಲು ಸಾಧ್ಯವಾಗುತ್ತಿಲ್ಲ, ನೀವೆಲ್ಲಾ ಬಂದು ಭಾರತದಲ್ಲಿ ತಯಾರಿಸಿ (ಮೇಕ್ ಇನ್ ಇಂಡಿ–ಯಾ) ಎಂದು ಬೇಡಿಕೊಳ್ಳುತ್ತಿದ್ದಾರೆ.

ಮತಾಂತರ ಮೂಲಭೂತ ಹಕ್ಕಾಗಿದೆ. ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಹೋಗಲು ದೇಶದಲ್ಲಿರುವ ಜಾತಿ–ತಾರತಮ್ಯ, ಅಸ್ಪೃಶ್ಯತಾ ಆಚರಣೆಗಳು ಮುಖ್ಯ ಕಾರಣ. ಸಾಮಾಜಿಕ ಹೋರಾಟಗಳನ್ನು ಬಿತ್ತಿದ ಬಸವಣ್ಣನ ನಾಡು ಇದು, ದೇಶದ ರಾಜಕೀಯ ಪಕ್ಷಗಳು ಮತಾಂತರ ವಿರೋಧಿಸುತ್ತದೆ. ಆದರೆ ಮನುಸ್ಮೃತಿಯನ್ನು ಸ್ಮರಿಸುತ್ತವೆ.

ಕನಕನಡೆ ಆಯೋಜನೆ ಬಗ್ಗೆ "ದನ ಕಾಯುವ ಗೊಲ್ಲ (ಕೃಷ್ಣ) ಮತ್ತು ಕುರಿ ಕಾಯುವ ಕನಕ(ದಾಸ) ಮಾತನಾಡಿಕೊಂಡರೆ, ತುರಿಕೆ ಬಂದವರಂತೆ ಮೈ ಮೇಲೆ ದೇವರು ಬರುವ ಈ ಮಾಧ್ವ ಬ್ರಾಹ್ಮಣರು ಏಕೆ ಗಂಟೆ ಆಡಿಸಬೇಕು" ಎಂದು ಹೇಳಿದರು.

ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು 'ಮಾರ್ಕ್ಸ್‌ವಾದದ ಬಗ್ಗೆ ಹಲವರಲ್ಲಿ ತಪ್ಪುಕಲ್ಪನೆಯಿದೆ, ಜಾತಿ ಪದ್ಧತಿಯನ್ನು ವಿನಾಶಗೊಳಿಸಲು, ಮಾರ್ಕ್ಸ್‌ವಾದದಲ್ಲಿ ಸ್ಪಷ್ಟ ಮಾರ್ಗವಿದೆ. ಭೂ ಸಂಬಂಧಗಳು ಬದಲಾದರೆ, ಭೂಮಿ ಸಾಮಾನ್ಯ ಜನತೆಯ ಕೈಗೆ ಬಂದರೆ ಜಾತಿ ಸಮಸ್ಯೆಗಳು ತಂದಿಂತಾನೇ ಹೋಗುತ್ತದೆ. ಈಗಲೂ ಈ ನಿಲುವಿನ ಬಗ್ಗೆ ಯಾವುದೇ ಸಂಶಯವಿಲ್ಲ. ಭಾರತ ಕೃಷಿ ಪ್ರಧಾನವಾದ ದೇಶ ಕಾರ್ಷಿಕ ಕ್ರಾಂತಿ ನಡೆಯಬೇಕಿದೆ. ಉಳುವವರು ಭೂಮಿಯ ಒಡೆಯನಾಗಬೇಕು. ಆದರೆ ಊಳಿಗಮಾನ್ಯ ಪದ್ಧತಿ, ಜಾತಿಪದ್ಧತಿ ಎಡರೂ ನಾಶವಾಗಬೇಕು. ಕೃಷಿಯಲ್ಲಿ ಹೆಚ್ಚಾಗಿ ಉಳುಮೆ ಮಾಡುವವರು ದಲಿತರು, ಈ ದಲಿತರಿಗೆ ಭೂಮಿಯ ಒಡೆತನ ದೊರೆಯಬೇಕೆಂಬುದು ನಮ್ಮ ನಿಲುವಾಗಿದೆ. ಈ ಸಾಮಾಜಿಕ ಅಸಮಾನತೆ ನಿರ್ನಾಮವಾಗದೆ, ಕೃಷಿಕ್ರಾಂತಿ ಅಸಾಧ್ಯವೆಂಬ ಸ್ಪಷ್ಟ ನಿಲುವು ನಮಗಿದೆ ಎಂದರು.

ಸ್ವಾತಂತ್ರ್ಯ ಪೂರ್ವದಿಂದಲೂ ಉಳುವವನಿಗೆ ಭೂಮಿ ಸಿಗಬೇಕು. ಭೂಮಿ ರಾಷ್ಟ್ರೀಕರಣವಾಗಬೇಕೆಂದು ಮೊಟ್ಟಮೊದಲು ಪ್ರಸ್ತಾಪಿಸಿದವರೇ ಕಮ್ಯುನಿಸ್ಟರು, ಆ ಹಿನ್ನೆಲೆಯಲ್ಲಿಯೇ ಭೂ ಸುಧಾರಣಾ ಕಾಯಿದೆ ಭಾರತದಲ್ಲಿ ಜಾರಿಗೆ ಬಂದಿತು. ಅದಗ್ಯೂ ಭೂ ವಿಚಾರವನ್ನು ಸಂವಿಧಾನದ ರಾಷ್ಟ್ರೀಯ ಸೂಚಿ 8ನೇ ಶೆಡ್ಯೂಲ್‌ನಲ್ಲಿ ಸೇರಿಸಲಿಲ್ಲ ಎಂದರು. ರಾಜ್ಯಗಳಿಗೆ ಬಿಟ್ಟರು. ರಾಷ್ಟ್ರೀಯ ಪ್ರಶ್ನೆಯಾಗಿ ತೆಗೆದುಕೊಳ್ಳಲಿಲ್ಲ.

ಕಮ್ಯೂನಿಸ್ಟರು ದಲಿತರ ಜಾತಿ ವಿನಾಶದ ಪ್ರಶ್ನೆ ಎತ್ತಿ–ಕೊಂಡು ಹೋರಾಟ ನಡೆಸಲಿಲ್ಲ ಎಂಬ ಆರೋಪವನ್ನು ತಳ್ಳಿ ಹಾಕಿದರು. ತೆಲಂಗಾಣ ರೈತರ ಶಸ್ತ್ರಾಸ್ತ್ರ ಹೋರಾಟವು ಭೂ ಒಡೆತನಕ್ಕಾಗಿ ನಡೆದ ಹೋರಾಟ, ಭಾರತ ದೇಶದ ಚರಿತ್ರೆಯಲ್ಲಿ ಇಂದಿಗೂ ತನ್ನ ಛಾಪು ಕಾಯ್ದುಕೊಂಡಿರುವುದು ತೆಲಂಗಾಣ ರೈತರ ಹೋರಾಟ ಮಾತ್ರ.

ಮಹಾರಾಷ್ಟ್ರದಲ್ಲಿ ನಡೆದ ವಾರೆಲಿ ಆದಿವಾಸಿ ಹೋರಾಟ, ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ವಿವಿದೆಡೆ ನಡೆದ ಹೋರಾಟಗಳು ಭೂ ಪ್ರಶ್ನೆಯ ಹೋರಾಟಗಳೇ ಆಗಿವೆ.

ಈ ದೇಶದ ಭೂಮಿ–ಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಕಂಪನಿಗಳ ಪರವಾಗುತ್ತಿದೆ. ಅಪಾರ ಪ್ರಮಾಣದಲ್ಲಿ ಭೂಸ್ವಾಧೀನ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅದರಲ್ಲಿ ಮುಂಬೈ–ಚೆನ್ನೈ ಕಾರಿಡಾರ್ ಯೋಜನೆ ಕೂಡ ಒಂದು.

ದೇವರಾಜ ಅರಸುರವರ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತಂದು, 20 ಲಕ್ಷಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ಕೃಷಿಯೇತರರೂ ಕೂಡ ಕೃಷಿ ಭೂಮಿ ಖರೀಸಬಹುದೆಂದಿದೆ. 1995 ರಲ್ಲಿ ದೊಡ್ಡಗೌಡರು(ದೇವೇಗೌಡ) ಹಾಗೂ 2009ರಲ್ಲಿ ಚಿಕ್ಕಗೌಡರು(ಕುಮಾರಸ್ವಾಮಿ) 1961ರ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತಂದರು. ಇದೀಗ ಸಿದ್ದರಾಮಯ್ಯ ಸರ್ಕಾರವೂ ಸರ್ಕಾರಿ ಭೂ ಮಂಜೂರಿ ಕಾಯ್ದೆಯ ಅಡಿಯಲ್ಲಿ ಸಾಗುವಳಿ ಮಾಡುತ್ತಿರುವ ಬಡರೈತರನ್ನು – ಒಕ್ಕಲೆಬ್ಬಿಸುವ ಕಾನೂನು ತಂದಿದ್ದಾರೆ. ವ್ಯವಸಾಯ ಮತ್ತು ಭೂಮಿಯ ಮೇಲಿನ ಬಹುರಾಷ್ಟ್ರೀಯ ಸಂಸ್ಥೆಗಳ ಈ ದಾಳಿಯನ್ನೂ ಹಿಮ್ಮೆಟ್ಟಿಸಲೇ ಬೇಕಾಗಿದೆ.

ಈ ಹಿನ್ನಲೆಯಲ್ಲಿ, ನವೆಂಬರ್ 18ರ 'ಭೂಮಿಗಾಗಿ ಜೈಲು ಬರೋ' ಹೋರಾಟಕ್ಕೆ ಅಣಿಯಾಗಬೇಕೆಂದರು. ದಲಿತರು ತಮ್ಮ ರಾಜಕೀಯ–ಸೈದ್ಧಾಂತಿಕ ನಿಲುಮೆಯನ್ನು ಸ್ಪಷ್ಟವಾಗಿ ಅರಿತುಕೊಂಡು, ಆರ್ಥಿಕ ಅಸಮಾನತೆ ಹಾಗೂ ಸಾಮಾಜಿಕ ಅಸಮಾನತೆಗಳೆಂಬ ಈ ಎರಡು ವೈರುಧ್ಯಗಳನ್ನು ಆದಷ್ಟು ಬೇಗ ಹೋಗಲಾಡಿಸಬೇಕು. ಈ ನಿಟ್ಟಿನಲ್ಲಿ ಜಾತಿ ದಮನದ ವಿರುದ್ಧದ ಹೋರಾಟವು, ವರ್ಗ ಶೋಷಣೆಯ ಹೋರಾಟದ ಅವಿಭಾಜ್ಯವಾಗಿದೆ. ಈ ಎರಡು ಹೋರಾಟಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗಬೇಕಾದ ಅವಶ್ಯಕತೆ ಇಂದು ಪ್ರಸ್ತುತವಾಗಿದೆ ಎಂದು ನುಡಿದರು.

ಡಾ॥ಎ.ಆರ್.ರಾಧಕೃಷ್ಣರವರು ಉದ್ಯೋಗ ಪ್ರಶ್ನೆಗಾಗಿ ಮತು ಖಾಸಗೀ ರಂಗದಲ್ಲಿಯೂ ಮೀಸಲಾತಿಯ ಅವಶ್ಯಕತೆ ಇದೆ ಎಂದು ತಿಳಿಸಿದರು. ವಿಚಾರ ಸಂಕಿರಣದ ಪ್ರಾರಂಭದಲ್ಲಿ ಅತಿಥಿಗಳು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಡಿಹೆಚ್‌ಎಸ್‌ನ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿರವರು ವಹಿಸಿದ್ದು ಸ್ವಾಗತವನ್ನು ಹೆಚ್.ಜಿ. ನಾಗಣ್ಣ ನೆರವೇರಿಸಿದರು. ನಿರೂಪಣೆ ಗೌಡಗೆರೆ ಮಾಯಾಶ್ರೀರವರು ಮತ್ತು ಎನ್. ರಾಜಣ್ಣ ವಂದನಾರ್ಪಣೆ ಮಾಡಿದರು. ದ.ಹ.ಸಮಿತಿಯ ರಾಜ್ಯ ಸಹ ಸಂಚಾಲಕರಾದ ನಂ. ನಾಗರಾಜರವರು ಸಂಘಟನೆಯ ಉದ್ದೇಶಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಚಾರ ಸಂಕಿರಣದ ನಂತರದಲ್ಲಿ ಸಮಾವೇಶ ನಡೆಯಿತು. ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷರಾದ ಡಿ. ಶಿವಶಂಕರ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ)ಯ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್, ಎಲ್.ಐ.ಸಿ. ಎಸ್‌ಸಿ/ಎಸ್.ಟಿ ನೌಕರರ ವೆಲ್‌ಫೇರ್ ಅಸೋಷಿಯೇಷನ್ ರಾಜ್ಯ ಕಾರ್ಯದರ್ಶಿ ಎಸ್. ಆನಂದಕುಮಾರ್, ಅಖಿಲ ಭಾರತ ಕೆನರಾ ಬ್ಯಾಂಕ್ ಎಸ್‌ಸಿ/ಎಸ್‌ಟಿ ನೌಕರರ ಅಸೋಶಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಆರ್.ಗುರುಸ್ವಾಮಿ, ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಮುಖಂಡರಾದ ನಂಜೇಗೌಡ, ಕಣ್ವಾಸ್ವತ್ರೆಯ ಡಿ.ವೆಂಕಟೇಶ್‌ಮೂರ್ತಿ, ಚಂದ್ರಶೇಖರಸ್ವಾಮಿ, ಹಲಸೂರು ಮೂರ್ತಿ, ಕೇಂದ್ರ ಹಾಗೂ ರಾಜ್ಯ ಸರ್ಕಾರ ನೌಕರರು, ಉಪಾನ್ಯಾಸಕರು, ಪ್ರಾಧ್ಯಾಪಕರುಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನೌಕರರು, ವಿವಿಧ ಪ್ರದೇಶಗಳ ಜನತೆ ಭಾಗವಹಿಸಿದ್ದರು. ●

ಜೆಎಎಫ್ ನೇತೃತ್ವದಲ್ಲಿ ಕಾರ್ಮಿಕರ ಬೃಹತ್..... ಪುಟ 16 ರಿಂದ

ಹೆಚ್ಚಳಕ್ಕೆ ಕಾರಣವಾಗಿದೆ. ಇಂತಹ ಹಿನ್ನೆಲೆಯುಳ್ಳ ಕಂಪನಿಗಳ ಕಾರ್ಯನಿರ್ವಹಣೆಗೆ ಹೆಗಲು ನೀಡದ ಸರಕಾರ, ಕಾರ್ಪೋರೇಟ್ ಲಾಭಿಗೆ ಮಣಿದು ಬೇಜವಾಬ್ದಾರಿ ನಿಲುವನ್ನು ಕೈಗೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಮೆಲ್‌ನ ಶೇ.26 ರಷ್ಟು ಷೇರು ಮಾರಾಟ ಮಾಡಲು ಎನ್‌ಡಿಎ ಸರಕಾರ ಮುಂದಾಗಿದೆ. ಲಾಭದಾಯಕ ಸಾರ್ವಜನಿಕ ವಲಯದ ಬಂಡವಾಳ ಹಿಂತೆಗೆದುಕೊಳ್ಳುವ ಹಾಗೂ ಮಾರಾಟ ಮಾಡುವ ನಿಲುವನ್ನು ಕೇಂದ್ರ ಸರಕಾರ ಕೈಗೊಂಡಿದೆ. ಬೆಮಲ್‌ನ ಶೇ.54 ರಷ್ಟಿರುವ ಷೇರು ಬಂಡವಾಳವನ್ನು ಶೇ. 28ಕ್ಕೆ ಇಳಿಸಲು ಮುಂದಾಗಿದೆ. ಇದು ದೇಶ ವಿರೋಧಿ ನೀತಿಯಾಗಿದೆ ಎಂದು ಬೆಮೆಲ್ ಸಂಘದ ಅಧ್ಯಕ್ಷರಾದ ಶ್ರೀನಿವಾಸ ರೆಡ್ಡಿರವರು ತಿಳಿಸಿದರು.

ನಿರ್ಧಾರ ಕೈಬಿಡಲು ಒತ್ತಾಯ :

ಜೆಎಎಫ್ ಸಂಚಾಲಕರಾದ ಕಾಂ॥ಮೀನಾಕ್ಷಿ ಸುಂದರಂ ಮಾತನಾಡಿ "ಎನ್‌ಡಿಎ ಸರಕಾರ ಸರಕಾರಿ ಸ್ವಾಮ್ಯದ ಕಂಪನಿಗಳನ್ನು ಪುನಶ್ಚೇತನಗೊಳಿಸದೆ ಧನಿಕ ಉದ್ದಿಮೆದಾರರಿಗೆ ಮಾರಾಟ ಮಾಡುವ ಚಾಳಿಗೆ ಬಿದ್ದಿದೆ. ಹಿಂದೆ ಪ್ರಧಾನಿ ವಾಜಪೇಯಿ ಅವಧಿಯಲ್ಲಿ ನಷ್ಟದಲ್ಲಿದ್ದ ಕಂಪನಿಗಳಿಂದ ಸರಕಾರಿ ಷೇರು ಹಾಗೂ ಹಣ ಹಿಂತೆಗೆತಗೊಂಡಿದ್ದನ್ನು ನಂತರ ಬಂದಂತಹ ಯುಪಿಎ ಸರಕಾರ ತಡೆ ಹಾಕಿತ್ತು. ಈಗ ಮತ್ತೆ ಎನ್‌ಡಿಎ ಸರಕಾರ ಲಾಭದಲ್ಲಿರುವ ಕಂಪನಿಗಳನ್ನು ಕಾರ್ಪೋರೇಟ್ ಧಣಿಗಳಿಗೆ ಮಾರಾಟ ಮಾಡುವ ಹೀನ ಕೆಲಸದಲ್ಲಿ ನಿರತವಾಗಿದೆ." ಎಂದು ದೂರಿದರು.

"ಪ್ರಸಕ್ತ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸರಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಸರಕಾರ ಹೊಂದಿರುವ 56,500 ಕೋಟಿ ರೂ. ಹೂಡಿಕೆಯನ್ನು ಹಿಂತೆಗೆಯುವುದಾಗಿ ಪ್ರಕಟಿಸಿದೆ. ಇದರ ಜತೆಗೆ ಕಂಪನಿಗಳಿಗೆ ಸೇರಿದ ಭೂಮಿ, ಕಟ್ಟಡ ಹಾಗೂ ಉತ್ಪಾದನಾ ಘಟಕಗಳನ್ನು ಬಿಕರಿ ಮಾಡುವ ಘೋಷಣೆ ಮಾಡಿದೆ. ಇದು ವಿದೇಶಿ ಬಂಡವಾಳ ಹೂಡುವವರಿಗೆ ಅವಕಾಶ ಮಾಡಿಕೊಡಲು ಸರಕಾರ ಕೈಗೊಂಡಿರುವ ಕಾರ್ಮಿಕ ವಿರೋಧಿ ನೀತಿಯಾಗಿದೆ. ಬಂಡವಾಳ ಹೂಡಿಕೆ ಹಿಂತೆಗೆತ ಕೈಬಿಟ್ಟು ಪುನಶ್ಚೇತನಕ್ಕೆ ಮುಂದಾಗದಿದ್ದಲ್ಲಿ ಸರಕಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲಾಗುವುದು" ಎಂದು ಎಚ್ಚರಿಕೆ ನಿಡಿದರು.

ಕಾರ್ಮಿಕ ಮುಖಂಡರಾದ ಕಾಂ॥ಮಹದೇವನ್, ಕಾಂ॥ ಡಿ.ವಿಜಯಕುಮಾರ್, ವಿಮಾ ನೌಕರರ ಸಂಘಟನೆ ಅಧ್ಯಕ್ಷರಾದ ಅಮಾನುಲ್ಲಾ ಖಾನ್ ಮತ್ತಿತರ ಮುಖಂಡರು ಮಾತನಾಡಿದರು. ಪ್ರತಿಭಟನೆಯಲ್ಲಿ ಹೆಚ್‌ಎಎಲ್, ಬಿಇಎಲ್, ಬಿಇಎಂಎಲ್, ಬಿಹೆಚ್‌ಇಎಲ್, ಐಟಿಐ, ಮತ್ತಿತರೇ ಕಾರ್ಖಾನೆಯ ಕಾರ್ಮಿಕರು ಭಾಗವಹಿಸಿದ್ದರು.

JANASHAKTHI KANNADA VARA PATRIKE NOV 13, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಭೂಮಿ ರಾಷ್ಟ್ರೀಕರಣಗೊಳ್ಳಲಿ: ಮಾಲಗತ್ತಿ

"70 ರ ದಶಕದ ದಲಿತ ಚಳುವಳಿಯ ಕಾವು ಮತ್ತೆ ಕಾಣುತ್ತಿದೆ"

ವರದಿ : ಎನ್. ನಾಗರಾಜ



'ಲಾಲ್ ಸಲಾಂ–ಜೈಭೀಮ್' ಘೋಷಣೆಗಳು ಸಮಾಗಮಗೊಳ್ಳುತ್ತಿರುವುದು ಸಂತೋಷದಾಯಕ, ದಲಿತರಿಗೆ 'ಭೂಮಿ ಮತ್ತು ಉದ್ಯೋಗ' ಪ್ರಮುಖವಾದದ್ದು, ಅಂಬೇಡ್ಕರ್ ರವರ ಪರಿಕಲ್ಪನೆಯಾದ 'ಭೂಮಿಯನ್ನೂ ರಾಷ್ಟ್ರೀಕರಣಗೊಳಿಸಿದಾಗ ಮಾತ್ರ' ದಲಿತರಿಗೆ ಭೂಮಿ ದೊರಕಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರಗಳು ತಮ್ಮ ನೀತಿಗಳನ್ನು ರೂಪಿಸಿಕೊಳ್ಳಬೇಕೆಂದು ಕುವೆಂಪು ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಡಾ॥ಅರವಿಂದ ಮಾಲಗತ್ತಿರವರು ತಿಳಿಸಿದರು.

ಅವರು ಬೆಂಗಳೂರಿನ ಸೆನೆಟ್ ಸಭಾಂಗಣದಲ್ಲಿ ಅಕ್ಟೋಬರ್ 23ರಂದು ದಲಿತ ಹಕ್ಕುಗಳ ಸಮಿತಿ, ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್‌ರವ್ 125ನೇ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ಭೂಮಿ, ಮನೆ, ನಿವೇಶನ ಹಾಗೂ ಉದ್ಯೋಗಕ್ಕಾಗಿ' ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಮಾತನಾಡಿದರು.

ಮುಂದುವರೆದು ಮಾತನಾಡಿದ ಅರವಿಂದ ಮಾಲಗತ್ತಿರವರು 'ಸರ್ಕಾರ ಭೂಮಿಯ ಮೇಲೆ ತನ್ನ ಹಿಡಿತ ಹೊಂದಬೇಕು. ಜಾತಿ, ಧರ್ಮ, ಬೇಧವಿಲ್ಲದೆ ಭೂಮಿ ಹಂಚಿಕೆಯ ಕೆಲಸ ಕೈಗೊಂಡಾಗ ಮಾತ್ರ, ದಲಿತರಿಗೆ ಹಾಗೂ ಇತರೆ ಜಾತಿಯ ಭೂರಹಿತರಿಗೂ ಭೂ ಒಡೆತನ ಸಿಗಲಿದೆ. 70ರ ದಶಕದಲ್ಲಿ ಭೂಮಿಗಾಗಿ ನಡೆದ ಹೋರಾಟ ಯಶಸ್ವಿಯಾಗಲಿಲ್ಲ, ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ಪರಿಕಲ್ಪನೆ ಸಫಲವಾಗಲಿಲ್ಲ, ಏಕೆಂದರೆ, ಕೃಷಿ ಸಹಕಾರ ಸಂಘ–ಸಂಸ್ಥೆಗಳು ದಳ್ಳಾಳಿ ಕೆಲಸ ಮಾಡಿ, ಜನತೆಗಳು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಭೂಮಿಯ ಸಮಸ್ಯೆ ಉಲ್ಬಣಗೊಂಡಿದೆ. ಉಳುವವನೇ ಭೂಮಿಯ ಒಡೆಯನಾಗಬೇಕಿತ್ತು. ಆದರೆ ಜಾತಿ ವ್ಯವಸ್ಥೆಯ ಬೇರುಗಳು ಇದನ್ನೂ ತಡೆಯುವಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರತರಾಗಿದ್ದರೆ, ಭೂಮಿ ಒಡೆಯನಾಗಬೇಕೆನ್ನುವ, ಭೂಮಿ ಉಳುವವನ ಕನಸು ಇನ್ನು ನನಸಾಗದೆ ಭಗ್ನಗೊಂಡಿದೆ. ದಲಿತರು–ಭೂಮಿ ಒಡೆಯರು ಒಂದಾಗುವುದು 'ಅಂಗಿನ ಅರಮನೆ ಕಟ್ಟಿ ವಾಸಿಸಿದಂತೆ' ಎಂದು ವ್ಯಾಖ್ಯಾನಿಸಿದರು.

'ಕನಕ ನಡೆ'ಯು 'ಇದು ಕನಕನ ಹೆಸರಿನಲ್ಲಿ ನಡೆಸುತ್ತಿರುವ ಉಡುಪಿಯ ಶುದ್ಧೀಕರಣದ ಪ್ರಯತ್ನ, ಸ್ವಚ್ಛಗೊಳಿಸುವುದು ಹಾಗೂ ಶುದ್ಧೀಕರಿಸುವುದು ಬೇರೆ ಬೇರೆ ಅರ್ಥಕೊಡುತ್ತದೆ. ಜಾತಿ–ಧರ್ಮದ ಜಾಡ್ಯ ಪ್ರತಿನಿಧಿಸುತ್ತದೆ. ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರಾಕರಿಸುವಂತಹ 'ಶ್ರೀರಾಮ ಚರಿತೆ' ಕಾವ್ಯ ರೂಪಿಸಿದ, ಕನಕರ ಪಂಕ್ತಿ ಭೇದ ನೋಡಿ ಕನಕದಾಸರು ಅಳುತ್ತಿರುವಂತೆ ನನಗೆ ಕಾಣುತ್ತಿದೆ. 1998ರಲ್ಲಿ ಮಠದ ಕಾರ್ಯಕ್ರಮದಲ್ಲಿ ಕೃಷ್ಣನ ಮೂರ್ತಿಯ ಪಕ್ಕದಲ್ಲೇ ಕನಕಮೂರ್ತಿಯನ್ನೂ ಸ್ಥಾಪಿಸಬೇಕೆಂದು ನಾನು ಖಾರವಾಗಿಯೇ ಒತ್ತಾಯಿಸಿದ್ದೆ, ಕೆಲವೇ ದಿನಗಳಲ್ಲಿ ಕನಕ ಮೂರ್ತಿಯನ್ನು ದೇವಸ್ಥಾನದ ಒಳಗೆ ಸ್ಥಾಪಿಸಿದ್ದರು. ಆದ್ದರಿಂದ ಉಡುಪಿ ಮಠದ ಕೋಟೆಯಲ್ಲಿ ಬಂಧನದಲ್ಲಿರುವ ಕನಕನನ್ನೂ ಬಿಡುಗಡೆ ಮಾಡಬೇಕೆಂದು ತಿಳಿಸಿದರು.

ದಲಿತರಿಗೆ ಇಂದು ಮುಖ್ಯವಾಗಿ ಬೇಕಾಗಿರುವುದು ಭೂಮಿ ಹಾಗೂ ಉದ್ಯೋಗ, ಇವೆರಡು ಸಿಕ್ಕಿದರೆ ಉಳಿದ ವಸತಿ, ನಿವೇಶನ ಇನ್ನಿತರ ಸೌಕರ್ಯಗಳನ್ನು ತಮ್ಮ ಶ್ರಮದಿಂದಲೇ ಪೂರೈಸಿಕೊಳ್ಳುವ ಮಟ್ಟಿಗೆ ಬೆಳೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಶಾಶ್ವತ ಹಾಗೂ ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸಬೇಕಾದ ಅವಶ್ಯಕತೆ ಇದೆ.

ದಲಿತರಿಗೆ ಶಿಕ್ಷಣ–ಉದ್ಯೋಗದಲ್ಲಿ ಮೀಸಲಾತಿಯಿಂದಾಗಿ, ಮೇಲ್ಜಾತಿಯ ಪ್ರತಿಭಾ–ಕುಶಲತೆ ಹೊಂದಿರುವವರು ವಿದೇಶಕ್ಕೆ ಪಲಾಯನ ಹೊಂದುತ್ತಿದ್ದಾರೆ. ಉದ್ಯೋಗಕ್ಕಾಗಿ ವಿದೇಶಕ್ಕೆ ಹೋದವರು, ಡಾಲರ್‌ನ ಆಸೆಗಾಗಿ ಮಾತ್ರ. ಮೀಸಲಾತಿ ಎಂಬ ತಟ್ಟೆ ಚಿಕ್ಕದಾಗಿದ್ದು, ತಟ್ಟೆಯಲ್ಲಿ ಉಣ್ಣುವವರ ಕೈಗಳ ಸಂಖ್ಯೆ ಹೆಚ್ಚಾಗಿದೆ. ಮೀಸಲಾತಿಯ ಪ್ರಮಾಣ

ಪುಟ 15 ಕ್ಕೆ

ಅಂಗನವಾಡಿ ಕಾರ್ಯಕರ್ತರಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಛೇರಿ ಮುತ್ತಿಗೆ

2015ರ ಫೆಬ್ರವರಿಯಲ್ಲಿ ನಡೆದ ಅಂಗನವಾಡಿ ನೌಕರರ 18 ದಿನಗಳ ಹೋರಾಟದ ಸಂದರ್ಭದಲ್ಲಿ ಕೆಲವೊಂದು ಬೇಡಿಕೆಗಳನ್ನು ಈಡೇರಿಸುವ ಕುರಿತು ರಾಜ್ಯ ಸರ್ಕಾರ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಒಪ್ಪಿಕೊಂಡಿದ್ದರೂ, ಇಲ್ಲಿಯವರೆಗೆ ಯಾವುದೇ ಅನುಷ್ಠಾನಕ್ಕೆ ಬಂದಿಲ್ಲವೇಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ವತಿಯಿಂದ ನವೆಂಬರ್ 02ರಂದು ಬೆಂಗಳೂರಿನ ಬಹುಮಹಡಿ ಕಟ್ಟಡದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಪ್ರಮುಖವಾಗಿ ಜೇಷ್ಠತೆ ಆಧಾರದಲ್ಲಿ ಗೌರವಧನ ಹೆಚ್ಚಿಸಬೇಕು, 1300 ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಕೇಂದ್ರಗಳಾಗಿ ಒಪ್ಪಲಾಗಿತ್ತು. ಕೇಂದ್ರ ಸರ್ಕಾರದಿಂದ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಮಿನಿ ಕೇಂದ್ರಗಳಾಗಿ ಗುರುತಿಸದಿರುವುದು ಮತ್ತು ಬಹಳಷ್ಟು ಕಡೆಗಳಲ್ಲಿ ಒಬ್ಬರೇ ಕೇಂದ್ರಗಳನ್ನು ನಿರ್ವಹಿಸಿತ್ತಿದ್ದು ಅಲ್ಲಿ ಸಹಾಯಕಿಯರನ್ನು ನೇಮಿಸಬೇಕು. ಪಿಂಚಣಿ ನೀಡುವಂತೆ ಎಂದು ಆಗ್ರಹಿಸಲಾಯಿತು.



ಒಂದು ಸಾವಿರಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ನಿವೃತ್ತರಾಗಿದ್ದಾರೆ. ಅವರಿಗೆ ಏಳು ತಿಂಗಳಿಂದ ಪಿಂಚಣಿ ನೀಡಿಲ್ಲ. ಕೂಡಲೇ ಪಿಂಚಣಿ ನೀಡಬೇಕು. ನೌಕರರಿಗೆ ರೂ.120 ಟಿ.ಎ. ಡಿ.ಎ. ನೀಡಬೇಕು. 2016–17ನೇ ಸಾಲಿನ ನಿವೃತ್ತಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಎನ್‌ಪಿಎಸ್ ಮೌಲ್ಯಯುತ ಇಡಗಂಟು ಸಿಗುವುದಿಲ್ಲ. ಹೀಗಾಗಿ ಅವರಿಗೆ ಕ್ರಮವಾಗಿ ರೂ.50 ಸಾವಿರ ಹಾಗೂ ರೂ.30 ಸಾವಿರ ಇಡಗಂಟು ನೀಡಬೇಕು.

ಹಲವೆಡೆ ನೌಕರರಿಗೆ ಸ್ಥಾನ ಪಲ್ಲಟ, ವರ್ಗಾವಣೆ, ಸಹಾಯಕಿಯರ ಮುಂಬಡ್ತಿ ಆದೇಶಗಳಿದ್ದರೂ ಜಾರಿ ಆಗಿಲ್ಲ. ಒಳ್ಳೆಯ ಗುಣಮಟ್ಟದ ಸಮವಸ್ತ್ರದ ಸೀರೆಯನ್ನು ವಿತರಿಸಬೇಕು. ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳ ಸರಬರಾಜು ನಿಲ್ಲಿಸಬೇಕೆಂದು ಆಗ್ರಹಿಸಲಾಯಿತು. ಅಂಗನವಾಡಿ ಕಾರ್ಯಕರ್ತರಿಗೆ ಇಲಾಖೆ ಯೋಜನೇಯೇತರ ಕೆಲಸಗಳ ಒತ್ತಡಗಳು ಹೆಚ್ಚಾಗುತ್ತಿದೆ. ಜಿಲ್ಲಾಧಿಕಾರಿಗಳ ಆದೇಶವೆಂದು ತಿಳಿಸುತ್ತಿದ್ದು ಅವುಗಳನ್ನು ಕೂಡಲೇ ಕೈ ಬಿಡಬೇಕು.

ಕನಿಷ್ಠ ಕೂಲಿ ಕೊಡಲು ಒಪ್ಪಿ ಕೇವಲ ರೂ.500 ಗಳನ್ನು ಕೊಟ್ಟಿರುವುದು ಸರಿಯಾದ ಕ್ರಮವಲ್ಲ ಮತ್ತು ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ಪರಿಹರಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆ ನಂತರದಲ್ಲಿ ಇಲಾಖೆಯ ನಿರ್ದೇಶಕಿ ದೀಪಾ ಚೋಳನ್ ಅವರು ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರು. ಆದ–ರೆ, ಬೇಡಿಕೆ ಈಡೇರುವವರೆಗೂ ಇಲ್ಲಿಂದ ತೆರಳುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾ ಮಹದೇವನ್‌ರವರು ಸರ್ಕಾರ–ಕ್ಕೆ ಪತ್ರವನ್ನು ಬರೆದು ಬೇಡಿಕೆ ಈಡೇರಿಸಲು ಕ್ರಮವಹಿಸುವುದಾಗಿ ತಿಳಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಮುಖಂಡರಾದ ಟಿ.ಲೀಲಾವತಿ, ಹೆಚ್.ಎಸ್.ಸುನಂದ, ಮಾಲಿನಿ ಮೆಸ್ತಾ, ಶಾಂತ ಎನ್.ಘಂಟಿ, ಮತ್ತಿತರ ಮುಖಂಡರು ಭಾಗವಹಿಸಿದ್ದರು.



ಸಾರ್ವಜನಿಕ ಉದ್ದಿಮೆ ಉಳಿಸಲು ಒತ್ತಾಯ

ಜೆಎಎಫ್ ನೇತೃತ್ವದಲ್ಲಿ ಕಾರ್ಮಿಕರ ಬೃಹತ್ ಪ್ರತಿಭಟನೆ

ಕೇಂದ್ರ ಸರಕಾರಿ ಸ್ವಾಮ್ಯದ ಕಂಪನಿಗಳಿಂದ ಷೇರು ಹಾಗೂ ಹೂಡಿಕೆಯನ್ನು ಹಿಂತೆಗೆದುಕೊಳ್ಳದಂತೆ ಬಿಇಎಂಎಲ್ ಸಹಿತ ನಾನಾ ಕಾರ್ಖಾನೆಗಳ ಸಿಬ್ಬಂದಿಗಳು ಜಂಟಿ ಕ್ರಿಯಾ ಸಮಿತಿ(ಜೆಎಎಫ್) ನೇತೃತ್ವದಲ್ಲಿ ನವೆಂಬರ್ 3ರಂದು ಬೆಂಗಳೂರಿನ ಟೌನ್‌ಹಾಲ್ ಮುಂಭಾಗ ಪ್ರತಿಭಟನೆ ನಡೆಸಿ ಕೇಂದ್ರ ಸರಕಾರವನ್ನು ಆಗ್ರಹಿಸಿದರು.

'ಸಾರ್ವಜನಿಕ ಉದ್ದಿಮೆ ಉಳಿಸಿ; ಭಾರತ ಉಳಿಸಿ' ಹೆಸರಿನಲ್ಲಿ ಪ್ರತಿಭಟನೆ ನಡೆಸಿದರು. ಕೇಂದ್ರ ಸರಕಾರ ಕೈಗೊಂಡಿರುವ ನಿಲುವನ್ನು ಪ್ರತಿಭಟನಾಕಾರರು ಖಮಡಿಸಿ ಧಿಕ್ಕಾರದ ಘೋಷಣೆ ಮೊಳಗಿಸಿದರು. ಸಾವಿರಾರು ಕುಟುಂಬಗಳಿಗೆ ಉದ್ಯೋಗ ನೀಡಿರುವ ಸರಕಾರಿ ಸ್ವಾಮ್ಯದ ಕಂಪನಿಗಳನ್ನು ಬಾಗಿಲು ಮುಚ್ಚಲು ಎನ್‌ಡಿಎ ಸರಕಾರ ಚಿತಾವಣೆ ನಡೆಸಿದೆ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಸರಕಾರಿ ಸ್ವಾಮ್ಯದ ಕಂಪನಿಗಳು ದೇಶಕಟ್ಟುವಲ್ಲಿ ಹೆಚ್ಚಿನ ಕಾಣಿ–ಕೆ ನೀಡಿವೆ. ಸ್ವಾತಂತ್ರ್ಯ ನಂತರ ದೇಶದಲ್ಲಿ ಕೈಗಾರಿಕೆಗಳ ಮೂಲಕ ಉದ್ಯೋಗ ಸೃಷ್ಟಿ, ವಿದೇಶಿ ವಿನಿಮಯ, ಆರ್ಥಿಕತೆ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**